ಅಧ್ಯಕ್ಷರು : ನೋ ಡಿಸ್ಕಷನ್. ಪ್ರಸ್ತಾಪ ಮಾತ್ರ ಮಾಡಿ. ನೋ ಡಿಸ್ಕಷನ್.

3. ಚಾಮರಾಜನಗರ ಜಿಲ್ಲೆಯಾದ್ಯಂತ ರೈತರು ಎದುರಿಸುತ್ತಿರುವ ವಿದ್ಯುತ್ ಮತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

ಶ್ರೀ ಎ.ಆರ್. ಕೃಷ್ಣಮೂರ್ತಿ : (ಸಂತೇಮರನಹಳ್ಳಿ) : ಮಾನ್ಯ ಅಧ್ಯಕ್ಷರೆ, ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಿನ್ನೆ ದಿವಸ ಕೂಡ ನಮ್ಮ ಚಾಮರಾಜನಗರ ಜಿಲ್ಲಾಕೇಂದ್ರ ಸ್ಥಾನದಲ್ಲಿ ಜಿಲ್ಲೆಯಾದ್ಯಂತ ರೈತರು ಈ ವಿದ್ಯುತ್ತಿನ ಸಮಸ್ಯೆ ಮತ್ತು ಕುಡಿಯುವ ನೀರಿನ ಸಮಸ್ಯೆ ವಿಚಾರಕ್ಕೆ ಸಂಬಂಧಿಸಿದಂತೆ, ಈ ಬರ್ಗದ ಹಿನ್ನಲೆಯಲ್ಲಿ ಯಾವುದೇ ತರಹದ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಬಗೆಹರಿಸಿಲ್ಲ ಎಂದು ಹೇಳಿ ನಮ್ಮ ಜಿಲ್ಲೆಯ ರೈತರು ನಿನ್ನೆ ದಿವಸ 11 ಗಂಟೆಯಿಂದ ಚಾಮರಾಜನಗರ ಜಿಲ್ಲಾ ಅಧಿಕಾರಿಗಳ ಕಛೇರಿಯಲ್ಲಿ ಅನಿರ್ದಿಷ್ಟವಾಗಿ ಮುಷ್ಕರ ಹೂಡಿದ್ದಾರೆ, ತಾವು ಬೆಳ್ಳಿಗೆ ಚರ್ಚೆ ಮಾಡಿದಂತೆ ಅಲ್ಲಿ ಪಾತ್ರೆಗಳು ಕೂಡ ಬಂದಿವೆ ಅವರುಗಳು ಅಲ್ಲೇ ಠಿಕಾಣಿ ಹೂಡಿ ಅಡಿಗೆ ಕೂಡ ಮಾಡಿರುವಂತಹ ಸನ್ನಿವೇಶ ಆಗಿದೆ. ಹಾಗಾಗಿ ಈ ವಿಚಾರದಲ್ಲಿ ಘನ ಸರ್ಕಾರ ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಇವತ್ತು ನಮ್ಮ ಭಾಗಕ್ಕೆ ಸರ್ಕಾರ ಏನು ಕಾನೂನಿನ ಅನ್ವಯ ವಿದ್ಯುತ್ತನ್ನು ಕನಿಷ್ಟ ಪ್ರಮಾಣದಲ್ಲಿ ಸರಬರಾಜು ಮಾಡುತ್ತೇವೆಂದು ಹೇಳಿದ್ದಾರೆ, ಆ ಕನಿಷ್ಟ ವಿದ್ಯುತ್ತನ್ನು ಕೂಡ ಸರಬರಾಜು ಮಾಡುತ್ತಿಲ್ಲ. ನಮ್ಮ 220 ಕೆವಿಗೆ 0.5 ಕೆವಿ ಇರಬಹುದು. ಆ ಟೆಕ್ನಿಕಲ್ ಪಾಯಿಂಟ್ ನನಗೆ ಬರುತ್ತಿಲ್ಲ. ಅಷ್ಟನ್ನು ಮಾತ್ರ ಸರಬರಾಜು ಮಾಡುತಿದ್ದಾರೆ. ಕನಿಷ್ಟ ಗ್ರಾಮಾಂತರದಲ್ಲಿರತಕ್ಕ ಕುಡಿಯುವ ನೀರಿಗೆ ಕೂಡ ಇವತ್ತು ತೊಂದರೆ ಇದೆ. ಜನರಿಗೆ ಇರಬಹುದು ಅಥವಾ ಜಾನುವಾರಿಗೆ ಇರಬಹುದು. ಸಮಸ್ಯೆ ಇವತ್ತು ಉದ್ಭವ ಆಗಿದೆ, ಇವತ್ತು ವಿದ್ಯುತ್ತಿನ ಸಮಸ್ಯೆ ಕಾಡುತ್ತಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಬಹಳ ಗಂಭೀರವಾಗಿ ಸಂಬಂಧಪಟ್ಟವರ ಜೊತೆಯಲ್ಲಿ ಸಮಲೋಚನೆ ಮಾಡಿ ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಅವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

5. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ಪ್ರಸ್ತಾಪ

†ಶ್ರೀ ಎಸ್.ಪಿ. ಮುದ್ದಹನುಮೇಗೌಡ(ಕುಣಿಗಲ್): ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

2003 ಫೆಬ್ರವರಿ 27ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ಸದಸ್ಯರುಗಳಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ಶ್ರೀ ಎಸ್. ಜಿ. ನಂಜಯ್ಯನಮಠ (ಗುಳೇದಗುಡ್ಡ): ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾವವನ್ನು ಅನುಮೋದಿಸುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 176ನೇ ಅನುಚ್ಛೇದದ ಅಡಿ ಇವತ್ತು ಗೌರವಾನ್ವಿತ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ನಮ್ಮೆಲ್ಲರಿಗೂ ಕೂಡ ತಮ್ಮ ವಿಚಾರಪೂರ್ವವಾದಂತಹ ಒಂದು ಭಾಷಣವನ್ನು ಈ ಸದನದ ಮುಂದೆ ಮಂಡಿಸಿದ್ದಾರೆ, ನಮ್ಮ ನಿಯಮಾವಳಿ 20 ರಮೂಲಕ ನಾವೆಲ್ಲರೂ ಕೂಡ ಏನು ಗೌರವಾನ್ವಿತ ರಾಜ್ಯಪಾಲರು ಅನೇಕ ವಿಚಾರಗಳನ್ನು ತಮ್ಮ ಭಾಷಣದ ಮೂಲಕ ಈ ಸಭೆಗೆ ಮಂಡಿಸಿದ್ದಾರೆ, ಅವರಿಗೆ ನಮ್ಮ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅರ್ಪಿಸತಕ್ಕದ್ದು

ನಮ್ಮ ಆದ್ಯ ಕರ್ತವ್ಯ. ಅದು ನಮ್ಮ ನಿಯಮಾವಳಿ 20ರಲ್ಲಿ ನಾವು ಅದನ್ನು ಸೇರಿಸಿಕೊಂಡಿದ್ದೇವೆ. ಇವತ್ತು ಮಾನ್ಯ ರಾಜ್ಯಪಾಲರು ಅನೇಕ ವಿಚಾರಗಳನ್ನು ಈ ಸದನದ ಮುಂದೆ ಮಂಡಿಸಿದ್ದಾರೆ, ಎಲ್ಲವುಗಳ ಬಗ್ಗೆ ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಕೆಲವು ವಿಚಾರಗಳನ್ನು ನಾವು ಇಲ್ಲಿ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇದೆ. ಕೆಲವು ವಿಚಾರಗಳನ್ನು ಮಾತ್ರ ನಾನು ಈ ಸದನದ ಮುಂದೆ ಮಂಡಿಸಲಿಕ್ಕೆ ಇಷ್ಟಪಡುತ್ತೇನೆ. ಗೌರವಾನ್ವಿತ ರಾಜ್ಯಪಾಲರು ಫೆಬ್ರವರಿ 27ನೇ ತಾರೀಖು ಏನು ತಮ್ಮ ಭಾಷಣವನ್ನು ಮಾಡಿದ್ದಾರೆ, ನಾವು ವಂದನೆಯನ್ನು ಅರ್ಪಿಸುವುದಕ್ಕೆ ಮುಂಚೆ ಎರಡು ಬಹಳ ಪ್ರಮುಖವಾದಂತಹ ಮಾಡಿದ್ದಾರೆ, ಘಟನೆಗಳು ಇವತ್ತು ನಮ್ಮ ರಾಜ್ಯ ಮತ್ತು ನಮ್ಮ ರಾಷ್ಟ್ರದಲ್ಲಿ ನಡೆದಿದೆ. ಬಹುಶಃ ನಮ್ಮ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸತಕ್ಕಂಥ ಚರ್ಚೆಯು ಚೌಕಟ್ಟಿಗೆ ಸ್ವಲ್ಪ ಮೀರಿದಂತಹ ವಿಷಯವಾದರೂ ಸಹ ನಾನು ಅದರ ಔಚಿತ್ಯದ ಹಿನ್ನಲೆಯಲ್ಲಿ ಅದನ್ನು ಇಲ್ಲಿ ಸದನದ ಮುಂದೆ ಪ್ರಸ್ತಾಪಿಸಬೇಕು ಎಂದು ಹೇಳಿ ಬಿಟ್ಟು ತಮ್ಮ ಅಪ್ಪಣೆಯನ್ನು ಕೋರುತ್ತೇನೆ. ಈ ರಾಜ್ಯದಲ್ಲಿ ಮತ್ತು ಈ ರಾಷ್ಟ್ರದಲ್ಲಿ ಕೆಲವು ಕಡೆ ಮೊನ್ನೆ ನಡೆದಂತಹ ಚುನಾವಣೆಗಳಲ್ಲಿ ಫಲಿತಾಂಶ ಇವತ್ತು ನಮ್ಮ ಮುಂದೆ ಬಂದಿದೆ. ರಾಜ್ಯಪಾಲರ ಭಾಷಣವನ್ನು ಈ ಸದನದಲ್ಲಿ ಮಂಡಿಸಿದ ನಂತರ ಬಂದಂತಹ ಚುನಾವಣೆಯ ಫಲಿತಾಂಶ. ನಾನು ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ಆದರೆ ಒಂದು ಸತ್ಯವನ್ನು ನಾವು ಮರೆ ಮಾಚಲಿಕ್ಕೆ ಆಗುವುದಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ನಡೆದಂತಹ ಹುಮನಾಬಾದ್ ಚುನಾವಣೆ, ಅನೇಕ ವಿಚಾರಗಳಿಗೆ ಅದು ಉತ್ತರವನ್ನು ಕೊಟ್ಟಿದೆ, ಅನೇಕ ಟೀಕೆ ಟಿಪ್ಪಣಿಗಳಿಗೆ ಅದು ಉತ್ತರವನ್ನು ಕೊಟ್ಟಿದೆ. I think my frineds will aslo fairly concede that the result of Humnabad elections has not only boosted the morale of sri Krishna Government, but it has shattered the illusion and dreams of BJP`s thinking of coming to power on Hindutva plank in the entire country.

ಶ್ರೀ ಎಸ್. ಎಸ್. ಪಾಟೀಲ್ : ಕನ್ನಡದಲ್ಲಿ ಅಷ್ಟು ಚೆನ್ನಾಗಿ ಮಾತನಾಡುತ್ತೀರಿ, ಕನ್ನಡದಲ್ಲಿ ಮಾತನಾಡಿ, ಕನ್ನಡ ಬರುತ್ತದೆ, ನಡುವೆ ಏಕೆ ಇಂಗ್ಲೀಷ್ ಶುರು ಮಾಡಿದಿರಿ?

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಹುಮನಾಬಾದ್ ಚುನಾವಣೆ ಈ ರಾಜ್ಯಕ್ಕೆ ಸಂಬಂಧಿಸಿದಂತೆ ಸನ್ಮಾನ್ಯ ಕೃಷ್ಣ ಅವರ ನೇತೃತ್ವದ ಸರ್ಕಾರಕ್ಕೆ, ಈ ರಾಜ್ಯದಲ್ಲಿರತಕ್ಕ ಜನತೆThey have reposed the confidence in krishna Government through the voters of Humnabad.ಈ ಸತ್ಯವನ್ನು ಎಲ್ಲರೂ ಕೂಡ ಒಪ್ಪಿಕೊಳ್ಳುತ್ತಾರೆ, ಆದರೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದ ಪ್ರಬುದ್ಧ ಮತದಾರ ಈ ಹಿಂದನೂ ಕೂಡ ಅನೇಕ ಸಲ ಅವನು ತನ್ನ ತೀರ್ಪನ್ನು ಬಹಳ ಜಾಗೃತಿಯಿಂದ ಬಹಳ ಜಾಗರೂಕತೆಯಿಂದ ಎಚ್ಚರಿಕೆಯಿಂದ, ಈ ತೀರ್ಪನ್ನು ಹಿಂದಿನ ಚುನಾವಣೆಯಲ್ಲಿ ನೀಡಿದ್ದಾರೆ. ಆದರೆ ವಿರೋಧ ಪಕ್ಷದವರು ಈ ಪ್ರಬುದ್ಧ ಮತದಾರನಿಗೆ ನೀಡಿದಂತಹ ಗೌರವ ಏನು? ಅವರು ಹೇಳುತ್ತಾರೆ. ಹೆಂಡ, ಹಣದ ಹೊಳೆ ಹರಿಸಿ ಇವತ್ತು ಚುನಾವಣೆಯಲ್ಲಿ ಗೆದ್ದಿದ್ದಾರೆ ಎನ್ನುವ ಮಾತನ್ನು ಅವರು ಹೇಳುತ್ತಾರೆ, ಬಹಳ ಅತ್ಯಂತ ನೋವಿನಿಂದ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲು ನಾನು ಇಚ್ಛಪಡುತ್ತೇನೆ. ಇವತ್ತು ವಿರೋಧ ಪಕ್ಷಗಳು ಮಾಡಿರತಕ್ಕ ಟೀಕೆ ಈ ರಾಜ್ಯದ ಪ್ರಭುದ್ಧ ಮತದಾರನ ಸ್ವಾಭಿಮಾನಕ್ಕೆ ಧಕ್ಕೆಯನ್ನು ತರತಕ್ಕಂಥ ಟೀಕೆ ಆಗಿದೆ

ಅದು. ಇವತ್ತು ನಾವು ಕಾಂಗ್ರೆಸ್ ಪಕ್ಷದವರು 180 ಜನರು ಇದ್ದಂತಹ ಸಂದರ್ಭದಲ್ಲಿ 1994ರ ಚುನಾವಣೆಯಲ್ಲಿ ಕೇವಲ 36 ಸಂಖ್ಯೆಗೆ ಇಳಿಸಿ 150 ಜನ ಸದಸ್ಯರನ್ನು ನೀಡಿದಂತಹ ಸಂದರ್ಭದಲ್ಲಿ ಈ ರಾಜ್ಯದ ಮತದಾರ ಪ್ರಬುದ್ದ ಮತಾದರ ಇದ್ದ, ಆವತ್ತು ಹೆಂಡ, ಹಣದ ಹೊಳೆ ಹರಿಯಲಿಲ್ಲ, 150 ಜನ ಶಾಸಕರನ್ನು ಕೊಟ್ಟಂತಹ ಈ ಮತದಾರ ಆವತ್ತು ಪ್ರಬುದ್ದವಾಗಿದೆ. ಇವತ್ತು ಮೂರೂವರೆ ವರ್ಷಗಳ ಸನ್ಮಾನ್ಯ. ಎಸ್. ಎಂ. ಕೃಷ್ಣ ಅವರ ಸರ್ಕಾರಕ್ಕೆ ತನ್ನ ಸರ್ಟಿಫಿಕೇಟ್ ಕೊಡುವುದರ ಮುಖಾಂತರ ಇವತ್ತೇನು ಹುಮನಾಬಾದ್ ಚುನಾವಣೆಯಲ್ಲಿ ಮತದಾರ ತನ್ನ ಪ್ರಬುದ್ದತೆಯನ್ನು ತೋರಿಸಿ ಏನು ಮೆರೆದಿದ್ದಾನೆ ಅವರ ಬಗ್ಗೆ ಇಲ್ಲದ ಸಲ್ಲದ ಟೀಕೆಯನ್ನು ಮಾಡಿರತಕ್ಕದ್ದು, ಈ ರಾಜ್ಯದ ಮತದಾರನಿಗೆ ಬಗೆದಂತಹ ದ್ರೋಹ ಎಂದು ಹೇಳಿ ಬಿಟ್ಟು ಇವತ್ತು ನಾನು ಈ ಸಂದರ್ಭದಲ್ಲಿ ಅತ್ಯಂತ ನೋವಿನಿಂದ ಆ ಮಾತನ್ನು ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದ ಚುನಾವಣೆಯಲ್ಲಿ ಜೊತೆಗೆ ರಾಷ್ಟ್ರದ ಅನೇಕ ರಾಜ್ಯಗಳ ಚನಾವಣೆಗಳು ನಡೆದಿದೆ, ಹಿಮಾಚಲ ಪ್ರದೇಶದಲ್ಲಿ ಆಗಿದೆ, ಮೇಘಾಲಯದಲ್ಲಿ ಆಗಿದೆ, ನಾಗಲ್ಯಾಂಡ್‌ನಲ್ಲಿ ಆಯಿತು, ತ್ರಿಪುರಾದಲ್ಲಿ ಕೂಡ ಚುನಾವಣೆ ಆಗಿದೆ. ಚುನಾವಣೆಗಳು ಅನೇಕ ವಿಚಾರಗಳಿಗೆ ಇವತ್ತು ಉತ್ತರಗಳನ್ನು ಕೊಟ್ಟಿದೆ. ನಾನು ಅದರ ಬಗ್ಗೆ ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ. ಇದೇ ಸಂದರ್ಭದಲ್ಲಿ ನಮಗೆ ರಾಜ್ಯಪಾಲರ ಭಾಷಣದ ನಂತರ ಇವತ್ತು ಕೇಂದ್ರದಲ್ಲಿ ಸನ್ಮಾನ್ಯ ಜಸ್ವಂತ ಸಿಂಗ್ ಅವರು ತಮ್ಮ ಬಜೆಟನ್ನು ಮಂಡನೆ ಮಾಡಿದರು, ನಾವು ವಂದನೆಗಳನ್ನು ಸನ್ಮಾನ್ಯ ರಾಜ್ಯಪಾಲರಿಗೆ ಅರ್ಪಿಸುವ ಮುಂಚೆ ರಾಜ್ಯಪಾಲರ ಭಾಷಣ ಆದ ನಂತರ ಆದಂತಹ ಒಂದು ಪ್ರಮುಖವಾದಂತಹ ಘಟನೆ. ಅದರ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ, ಇವತ್ತು,ನಮ್ಮ ಸರ್ಕಾರ ಚಿಂತನೆಯನ್ನು ಯಾವ ದಿಕ್ಕಿನಲ್ಲಿ ಹರಿಸಿದೆ ಎನ್ನುವುದರ ಬಗ್ಗೆ ನಾನು ತದ ನಂತರ ಬರುತ್ತೇನೆ. ಆದರೆ ಒಂದು ವಿಷಯ ನಮಗೆಲ್ಲರಿಗೂ ಕೂಡ ದೇಶದಲ್ಲಿ ಇವತ್ತೇನು ನೂರಕ್ಕೆ 80 ಭಾಗ ಕೃಷಿಯನ್ನು ಅವಲಂಭಿಸಿರತಕ್ಕ ಜನ ಇದ್ದಾರೆ, ರೈತರು ಇದ್ದಾರೆ, ಇವತ್ತು ಯಾವ ರೈತ ಈ ದೇಶದ ಬೆನ್ನೆಲುಬು ಎಂದು ಹೇಳಿ ನಾವು ಭಾಷಣ ಮಾಡುತ್ತೇವೆ, ಆ ರೈತನ ಬೆನ್ನು ಮೂಳೆ ಮುರಿಯತಕ್ಕಂಥ ಕೆಲಸ ಇವತ್ತು ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಆಗಿದೆ.ಆ ನೋವಿನ ಬಹಳ ಆತಂಕಕಾರಿ ಆದಂತಹ ಬೆಳವಣಿಗೆ. ಇವತ್ತು ರೈತರಿಗೆ ಗೊಬ್ಬರದ ಬೆಲೆ, ಕೀಟನಾಶಕದ ಬೆಲೆಯನ್ನು ಏರಿಸಿದ್ದಾರೆ.

(ಗೊಂದಲ)

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ : ಕೇಂದ್ರದ ಬಜೆಟ್ ಬಗ್ಗೆ ಅವರು ಮಾತನಾಡುತ್ತಿದ್ದಾರೆ, ಕೇಂದ್ರದಲ್ಲಿ ಅವರ ಪಕ್ಷ ಕಾಂಗ್ರೆಸ್‌ನವರು ವಿರೋಧ ಪಕ್ಷದಲ್ಲಿ ಇದ್ದಾರೆ, ಅಲ್ಲಿ ಮಾತನಾಡಲಿ.

ಅಧ್ಯಕ್ಷರು : ಅವರು ಕಂಪೆರಿಟೀವ್ ಸ್ಟೇಟ್‌ಮೆಂಟ್ ಕೊಡುತ್ತಿದ್ದಾರೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಅಯೋಧ್ಯೆ ವಿಚಾರ ಮಾತನಾಡುತ್ತಿದ್ದಾರೆ. ಇಂಡಸ್ಟ್ರಿ ಬಗ್ಗೆ ಮಾತನಾಡುತ್ತಿದ್ದಾರೆ, ಲೋಕಸಭೆಯಲ್ಲಿ ವಿರೋಧ ಪಕ್ಷ ಕಾಂಗ್ರೆಸ್ ಇದೆ. ಅಲ್ಲಿ ಮಾತನಾಡಬಹುದಲ್ಲ.

ಶ್ರೀ ಯು. ಆರ್. ಸಭಾಪತಿ : ನಿಮ್ಮ ಹಣೆ ಬರಹ ಹೇಳಿದ್ದು ಸ್ವಲ್ಪ ಕೇಳಿ,

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಏಕೆ ಲೋಕಸಭೆಯಲ್ಲಿ ಮಾತನಾಡುವ ತಾಕತ್ತು ಇವರಿಗೆ ಇಲ್ಲವಾ? ತಾಕತ್ತು ಇಲ್ಲದಿದ್ದರೆ ಇಲ್ಲಿ ಮಾತನಾಡಿಕೊಳ್ಳಲಿ.

ಶ್ರೀ ಎಸ್, ಪಿ. ಮುದ್ದಹನುಮೇಗೌಡ : ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾವೆಲ್ಲರೂ ಕೂಡ ಒಂದು ಕಟು ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ದೇಶ ನಿಂತಿರತಕ್ಕದ್ದು ಕೃಷಿಕನ ಮೇಲೆ. ಆ ಕೃಷಿಕನ ಬೆನ್ನಿನ ಮೂಳೆಯನ್ನು ಮುರಿಯತಕ್ಕಂಥ ಕೆಲಸ ಯಾವುದೇ ಸರ್ಕಾರದಲ್ಲಿ ಆದರೂ ಕೂಡ ಆ ಸರ್ಕಾರ ಉಳಿಯಲಿಕ್ಕೆ ಅವಕಾಶನೇ ಇಲ್ಲ. ಇವತ್ತು ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡಿ ಕ್ರಿಮಿಕೀಟನಾಶಗಳ ಬೆಲೆಯನ್ನು ಜಾಸ್ತಿ ಮಾಡಿ ಕಾರು ಮತ್ತು ಚಿನ್ನದ ಬೆಲೆಯನ್ನು ಕಡಿಮೆ ಮಾಡಿದರೆ, ಇದು ರೈತರ ಪರವಾಗಿರುವ ಕೇಂದ್ರ ಸರ್ಕಾರವೆಂಬ ತೀರ್ಮಾನಕ್ಕೆ ನಾವು ಬರುವುದಕ್ಕಾಗುತ್ತದೆಯೇ? ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು ಇವತ್ತು ರೈತರು ಉಪಯೋಗಿಸುವ ಗೊಬ್ಬರದ ಬೆಲೆ ಜಾಸ್ತಿಯಾಗಿದೆ, ಫೆಸ್ಟಿಸೈಡ್ಸ್‌ನ ಬೆಲೆ ಜಾಸ್ತಿಯಾಗಿದೆ,ಅವನು ಅಗತ್ಯವಾಗಿ ಉಪಯೋಗಿಸತಕ್ಕಂಥ ಡೀಸೆಲ್‌ನ ಬೆಲೆ ಜಾಸ್ತಿಯಾಗುತ್ತದೆ, ಒಟ್ಟಾರೆ ಇವತ್ತು ರೈತನ ಸಮಾಧಿ ಮಾಡತಕ್ಕಂಥ ಕೆಟ್ಟ ನಿರ್ಧಾರವನ್ನು ಮಾನ್ಯ ಜಸ್ವಂತ್‌ಸಿಂಗ್‌ರವರು ತಮ್ಮ ಆಯವ್ಯಯವನ್ನು ಮಂಡಿಸಿರತಕ್ಕದ್ದು, ಈ ರಾಜ್ಯ ಮತ್ತು ರಾಷ್ಟ್ರದ ಜನತೆಗೆ ಬಹಳ ಆತಂಕಕಾರಿಯಾದಂಥ ತೀರ್ಮಾನ, ಅದು ಆದಮೇಲೆ ಈ ರಾಷ್ಟ್ರದ ಎಲ್ಲಾ ವಿರೋಧ ಪಕ್ಷಗಳು ಕೂಡ ಪರಿಪರಿಯಾಗಿ ಬೇಡಿಕೊಂಡವು, ದಯಮಾಡಿ ಇದನ್ನು ಪುನರ್ ಪರಿಶೀಲಿಸಿ, ರೈತನಿಗೆ ಇಂಥ ದೊಡ್ಡ ಏಟನ್ನು ಕೊಡತಕ್ಕದ್ದು ಒಳ್ಳೆಯದಲ್ಲವೆಂದು ಎಂಥ ಪರಿಪರಿಯಾಗಿ ಬೇಡಿಕೊಂಡರೂ ಸಹ,So far as the farmers are concerned. He is prepared to concede all other things, but not the problems of farmers.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಇವರು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಮಾತನಾಡಲಿ. ಅದನ್ನು ಬಿಟ್ಟು ಕೇಂದ್ರದ ಬಜೆಟ್‌ನ ವಿಚಾರವನ್ನು ಮಾತನಾಡುವುದು ಸರಿಯಲ್ಲ.

(ಅಧ್ಯಕ್ಷರ ಪೀಠವನ್ನು ಶ್ರೀ ಯು.ಆರ್. ಸಭಾಪತಿಯವರು ಅಲಂಕರಿಸಿದರು)

(ಗೊಂದಲ)

ಛೇರ್ಮನ್ : ಅವರು ಮಾತನಾಡಲಿ, ಅವರು ಮಾತನಾಡಲು ಅವಕಾಶ ಕೊಟ್ಟಿದ್ದೇವೆ. ಅವರು ಈಲ್ಡ್ ಆದರೆ ತಾವು ಮಾತನಾಡಿ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರಿಗೆ ಕೆಲವು ಕಟು ಸತ್ಯಗಳು ಹಿಡಿಸುವುದಿಲ್ಲ ರುಚಿಯಾಗಿಲ್ಲ. ಆದರೆ ಜನತಾ ನ್ಯಾಯಾಲಯದ ಮುಂದೆ ನಾವೆಲ್ಲರೂ ಹೋಗತಕ್ಕ ಸಂದರ್ಭದಲ್ಲಿ ಜನತೆ ತಮ್ಮ ತೀರ್ಪನ್ನು ನೀಡುತ್ತಾರೆ, ಅಲ್ಲಿಯವರೆಗೆ ನಾವು ಕಾಯೋಣ. ಗೌರವಾನ್ವಿತ ರಾಜ್ಯಪಾಲರು ವಿಚಾರಪೂರ್ವಕವಾದಂಥ ಭಾಷಣವನ್ನು ಇವತ್ತು ಸದನದ ಮುಂದೆ ಇಟ್ಟಿದ್ದಾರೆ. ಅನೇಕ ವಿಚಾರಗಳನ್ನು ಇಟ್ಟಿದ್ದಾರೆ. ರಾಜ್ಯಪಾಲರ ಭಾಷಣ ಈ ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಕಾರ್ಯಸೂಚಿಯ ಧಿಕ್ಸೂಚಿ ಎಂದು ನಾನು ಭಾವಿಸುತ್ತೇನೆ, ರಾಜ್ಯ ಸರ್ಕಾರ ಈ ವರ್ಷದಲ್ಲಿ ಯಾವ ರೀತಿ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕು, ಯಾವ ರೀತಿ ಈ ರಾಜ್ಯದ ಜನತೆಯ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಬೇಕು ಎನ್ನುವ ಚಿಂತನೆಯನ್ನು ಮಾಡಿರುತ್ತದೆ ಅದನ್ನು ರಾಜ್ಯಪಾಲರ ಭಾಷಣದ ಮೂಲಕ **it is only an FIR** ಇದು ಪ್ರಥಮ ವರ್ತಮಾನದ ವರದಿ ಇದ್ದಂತೆ. ಸನ್ಮಾನ್ಯ ಅರ್ಥ ಸಚಿವರೇನು ಬಜೆಟ್‌ನ್ನು ಮಂಡಿಸುತ್ತಾರೆ ಅದಕ್ಕೆ ಇದರಲ್ಲಿ ಒಂದು ರೀತಿಯ ರೂಪವನ್ನು ಕೊಡತಕ್ಕ ಕೆಲಸವಾಗುತ್ತದೆ. ಆದ್ದರಿಂದ ಇವತ್ತು ರಾಜ್ಯಪಾಲರ ಭಾಷಣದ ಚಿಂತನೆ ಯಾವ ದಿಕ್ಕಿನಲ್ಲಿ ಹರಿದಿದೆ, ಇದು

ಯಾವ ರೀತಿಯಲ್ಲಿ ನಮ್ಮ ರಾಜ್ಯದ ಜನತೆಗೆ ಉಪಯೋಗವಾಗುತ್ತದೆ ಎಂಬ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ರಾಜ್ಯಪಾಲರು ಈ ರಾಷ್ಟ್ರ, ರಾಜ್ಯ , ವಿಶ್ವದಲ್ಲಿ ಜರುಗಿದಂಥ ಅನೇಕ ದುರ್ಘಟನೆಗಳ ಬಗ್ಗೆ ನಮೂದು ಮಾಡುತ್ತಾರೆ. ಬಹಳ ದುಃಖದಿಂದ ನಮೂದು ಮಾಡುತ್ತಾರೆ. ವಿಶ್ವದಲ್ಲಿ ಇವತ್ತೇನು ಅತೀ ಹೆಚ್ಚು ಪ್ರತಿಷ್ಠೆಯಿಂದ ಕೂಡಿದ ಅಮೇರಿಕಾ ಸರ್ಕಾರವಿತ್ತು ಅಲ್ಲಿಯೂ ಕೂಡ ಆ ಪ್ರತಿಷ್ಠೆಗೆ ಧಕ್ಕೆ ಬರತಕ್ಕಂಥ ದುರ್ಘಟನೆ ನಡೆಯಿತು. ಪೆಂಟ್‌ಗಾನ್ ಕಟ್ಟಡಗಳು, ವಿಶ್ವ ವಾಣಿಜ್ಯ ಕಟ್ಟಡ ಇವೆಲ್ಲದರ ಮೇಲೆ ನಡೆದಂಥ ದುರ್ಘಟನೆಯಿಂದ ಹಿಡಿದು, ಇವತ್ತು ಸಂಸತ್ತಿನ ಮೇಲೆ ನಡೆದಂಥ ಧಾಳಿ ಇರಬಹುದು ಜಮ್ಮು ಕಾಶ್ಮೀರ ಅಸೆಂಬ್ಲಿ ಮೇಲೆ ನಡೆದ ಧಾಳಿ ಗುಜರಾತ್‌ನಲ್ಲಿ ನಡೆದಂಥ ಘಟನೆ ಇರಬಹುದು, ಇವೆಲ್ಲದರ ಬಗ್ಗೆ ಅವರು ನಮೂದು ಮಾಡಿ ಇದು ಅತಂಕಕಾರಿಯಾದಂಥ ಭಯೋತ್ಪಾದಕ ಘಟನೆಗಳ, ಇದನ್ನು ದಮನ ಮಾಡಬೇಕಾದರೆ ನಾವೆಲ್ಲರೂ ಒಗ್ಗಟ್ಟಾಗಿರಬೇಕು ಎಂದು ಹೇಳುವುದರ ಜೊತೆಗೆ, ನಮ್ಮ ರಾಜ್ಯದಲ್ಲೂ ಕೂಡ ಇದರ ಬಗ್ಗೆ ಅನೇಕ ವಿಧವಾದ ಚರ್ಚೆಯನ್ನು ನಾವುಗಳು ಮಾಡಿದ್ದೇವೆ,ಕಾಡುಗಳ್ಳ ವೀರಪ್ಪನ್ನು ನಾಗಪ್ಪನವರನ್ನು ಅಪಹರಣ ಮಾಡಿ ಕೊನೆಗೆ ಅದು ನಾಗಪ್ಪನವರ ಸಾವಿನಲ್ಲಿ ಅಂತ್ಯವಾಗತಕ್ಕ ಘಟನೆಯ ಬಗ್ಗೆ ಕೂಡ ಅವರು ತಮ್ಮ ಭಾಷಣದಲ್ಲಿ ನಮೂದು ಮಾಡಿ ಅವರು ತಮ್ಮ ದುಃಖವನ್ನು ತೋಡಿಕೊಂಡಿದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳು, ಇವತ್ತೇನು ನಾಗಪ್ಪನವರು ಅವಸಾನವಾಯಿತು, ಈ ರಾಜ್ಯ ಸರ್ಕಾರದ ಪ್ರಾಮಾಣಿಕ ಪ್ರಯತ್ನಕ್ಕೆ ಬೆಲೆ, ಗೌರವ ಸಿಗಲಿಲ್ಲ, ಕೊನೆಗೆ ಅದು ನಾಗಪ್ಪನವರ ಅಂತ್ಯದಲ್ಲಿ ಕೊನೆಯಾಯಿತು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮನನೊಂದು ಮಾತನಾಡಿದ್ದಾರೆ, ಯಾವ ವಿಧದಲ್ಲಿ ಸರ್ಕಾರ ಪ್ರಾಮಾಣಿಕ ಪ್ರಯತ್ನವನ್ನು ನಡೆಸಿದೆ ಎನ್ನುವುದರ ಬಗ್ಗೆ ಎಳೆಎಳೆಯಾಗಿ ಇವತ್ತು ಸದನದ ಮುಂದೆ ಮತ್ತು ರಾಜ್ಯದ ಜನತೆಯ ಮುಂದೆ ಬಿಚ್ಚಿನುಡಿದಿದ್ದಾರೆ, ಇವತ್ತು ಜನ ಅದನ್ನು ಒಪ್ಪಿದ್ದಾರೆ, ರಾಜ್ಯ ಸರ್ಕಾರದ ಪ್ರಾಮಾಣಿಕತೆಯ ಬಗ್ಗೆ, ಕಳಕಳಿಯ ಬಗ್ಗೆ, ರಾಜ್ಯ ಸರ್ಕಾರ ನಾಗಪ್ಪನವರ ವಿಚಾರದಲ್ಲಿ ಕೈಗೊಂಡಂಥ ಅನೇಕ ವಿಧವಾದಂಥ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಮನವರಿಕೆಯಾಗಿದೆ, ಜನರು ಒಪ್ಪಿದ್ದಾರೆ, ಬಹುಶಃ ನಾನು ಅಂದುಕೊಳ್ಳುವುದೇನೆಂದರೆ, ಇವತ್ತೇನು ರಾಜ್ಯದ ಜನತೆ ಹುಮನಾಬಾದ್ ಚುನಾವಣೆಯಲ್ಲೂ ಕೂಡ ಸರ್ಕಾರ ಆ ಒಂದು ಕಾಡುಗಳ್ಳ ವೀರಪ್ಪನಿಂದ ನಾಗಪ್ಪನವರನ್ನು ಬಿಡಿಸಿಕೊಂಡು ಬರತಕ್ಕಂಥ ಪ್ರಾಮಾಣಿಕ ಪ್ರಯತ್ನವೇನಿತ್ತು ಅದಕ್ಕೂ ಕೂಡ ಹುಮನಾಬಾದ್ ಚುನಾವಣೆ ಒಂದು ರೀತಿಯಲ್ಲಿ ಉತ್ತರವೆಂದು ಹೇಳಿದರೆ ಅತಿಯೋಕ್ತಿಯಾಗಲಾರದೆಂದು ಭಾವಿಸುತ್ತೇನೆ. ಈ ದುರ್ಘಟನೆಗಳು ಮುಂದೆ ಆಗಬಾರದು ಎಂಬುದು ನಮ್ಮೆಲ್ಲರ ಚಿಂತನೆಯಾಗಿದೆ, ಇದರಲ್ಲಿ ಯಾರದ್ದೇ ಭಿನ್ನಾಬಿಪ್ರಾಯವಿಲ್ಲ. ನಮ್ಮ ರಾಜ್ಯದ ಮಟ್ಟಿಗೆ ಇಂಥ ದುರ್ಘಟನೆಗಳು ಮರು ಕಳಿಸದಂತೆ ಸಮಾಜದ ವಿರೋಧಿ ಚಟುವಟಿಕೆಗಳು ಯಾವುದೇ ರೀತಿಯಲ್ಲಿ ಆಗದಂತೆ ಇವತ್ತು ಅತ್ಯಗತ್ಯವಾಗಿ ಇವತ್ತು ಪೊಲೀಸ್ ಇಲಾಖೆಯನ್ನು ಬಹಳವಾಗಿ ಸುಧಾರಣೆ ಮಾಡಬೇಕು ಎಂಬ ವಿಚಾರವನ್ನು ಮಾನ್ಯ ಗೌರವಾನ್ವಿತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಮೂದು ಮಾಡುತ್ತಾರೆ. ಇವತ್ತು ನಮ್ಮ ಸರ್ಕಾರ ಏನು ಪೊಲೀಸ್ ಇಲಾಖೆಯ ಸುಧಾರಣೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಬಗ್ಗೆ, ಅನೇಕ ಸವಲತ್ತುಗಳನ್ನು ಕೊಟ್ಟಿರುವ ಬಗ್ಗೆ, ಸಂಪರ್ಕ ಸಾಧನೆಗಳ ಮೂಲಕ ಅವರಿಗೆ ಹೆಚ್ಚು ಶಕ್ತಿಯನ್ನು ಕೊಡತಕ್ಕ ಕೆಲಸ ಈ ರಾಜ್ಯದಲ್ಲಿ ಆಗಿದೆ ಎನ್ನುವುದನ್ನು ನಾವೂ ಕಣ್ಣಾರೆ ನೋಡಿದ್ದೇವೆ, ಪೊಲೀಸ್

ಇಲಾಖೆಯನ್ನು ಎಲ್ಲಾ ರೀತಿಯಿಂದಲೂ ಸದೃಢಗೊಳಿಸುವ ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ಇವತ್ತು ಆಗಿದೆ. ಇದು ಅನಿವಾರ್ಯ ಇದರ ಅಗತ್ಯವಿದೆ, ಏಕೆಂದರೆ , ಸಮಾಜದಲ್ಲೇನು ಸಮಾಜ ವಿರೋಧಿ ಚಟುವಟಿಕೆಗಳು ಇದೆ ಅದನ್ನು ದಮನ ಮಾಡತಕ್ಕದ್ದು ಸರ್ಕಾರದ ಅದ್ಯಕರ್ತವಾಗಿದೆ, ಹಾಗಾಗಿ ಪೊಲೀಸ್ ಇಲಾಖೆಯನ್ನು ಸದೃಢಗೊಳಿಸತಕ್ಕಂಥ ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ಆಗಿದೆ ಎನ್ನುವ ಮಾತನ್ನು ಗೌರವಾನ್ವಿತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸದನದ ಮುಂದೆ ಮಂಡಿಸಿದ್ದಾರೆ, ಭೀಕರ ಬರಗಾಲ ರಾಜ್ಯದ ಜನತೆಯನ್ನು ಕಳೆದ ಎರಡು ವರ್ಷಗಳಿಂದ ಕಾಡುತ್ತಿರುವುದರ ಬಗ್ಗೆ ನಾವು ಖುದ್ದಾಗಿ ಅನುಭವಿಸಿದ್ದೇವೆ, ಸದನದಲ್ಲಿ ಅನೇಕ ಭಾರಿ ಚರ್ಚೆಯಾಗಿದೆ, ಈಗಲೂ ಆ ಚರ್ಚೆ ಮುಂದುವರೆದಿದೆ, ಬರಗಾಲವಿದೆ, ರಾಜ್ಯದ ಬಹುತೇಕ ಎಲ್ಲ ಕಡೆ ಬರಗಾಲವಿದೆ, ಕುಡಿಯುವ ನೀರಿನ ಬವಣೆ ಇದೆ, ಕೆರೆಕಟ್ಟೆಗಳು ತುಂಬಲಿಲ್ಲ, ಹೈಡ್ರೋ ಜನರೇಷನ್, ಜಲವಿದ್ಯುತ್ ಕೇಂದ್ರಗಳೇನಿತ್ತು, ನೀರು ಬತ್ತಿಹೋಗಿರುವುದರಿಂದ ಅಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ, ವಿದ್ಯುತ್ ಕ್ಷಾಮ, ಕುಡಿಯುವ ನೀರಿನ ತೊಂದರೆ, ಇವೆಲ್ಲರ ಮಧ್ಯೆ ರಾಜ್ಯ ಸರ್ಕಾರ ಆ ಸಮಸ್ಯೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಎದುರಿಸತಕ್ಕ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎನ್ನುವ ಮಾತನ್ನು ಗೌರವಾನ್ವಿತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. It is a fact also.ಇವತ್ತು ಎಲ್ಲಾ ಕ್ಷೇತ್ರಗಳಲ್ಲಿ, ಎಲ್ಲಾ ಗ್ರಾಮಗಳಲ್ಲಿ ಬರಗಾಲದ ಪರಿಹಾರಕ್ಕಾಗಿ ಕಾಮಗಾರಿಯನ್ನು ಬಹಳ ಸಮರೋಪಾದಿಯಲ್ಲಿ ನಡೆಸಲಾಗುತ್ತಿದೆ, ಅತ್ಯಂತ ಭೀಕರವಾದ ಬರಗಾಲ ಬಂದರೂ ಒಂದು ಸಮಾಧಾನಕರವಾದ, ತೃಪ್ತಿದಾಯಕವಾದ ಅಂಶವೇನೆಂದರೆ,ಇವತ್ತು ಎಲ್ಲೂ ಆಹಾರದ ಕ್ಷಾಮ ಬರಲಿಲ್ಲ, ನಮ್ಮಲ್ಲಿ ಇವತ್ತು ಸಾಕಷ್ಟು ಆಹಾರಧಾನ್ಯವಿದೆ, ಬಡವರಿಗೆ, ರೈತರಿಗೆ, ಕೂಲಿ ಕಾರ್ಮಿಕರಿಗೆ ಯಾವುದೇ ರೀತಿಯಲ್ಲಿ ಆಹಾರ ಧಾನ್ಯಗಳ ತೊಂದರೆಯಾಗದ ರೀತಿಯಲ್ಲಿ ಆಹಾರ ಧಾನ್ಯಗಳು ಸಮೃದ್ಧವಾಗಿದೆ ಜನರಿಗೆ ತಲುಪುತ್ತಿದೆ ಆದ್ದರಿಂದ ಎಂಥ ಭೀಕರ ಬರಗಾಲ ಇದ್ದರೂ ಇದನ್ನು ಅತ್ಯಂತ ಯಶಸ್ವಿಯಾಗಿ, ಪ್ರಾಮಾಣಿಕವಾಗಿ ಎದುರಿಸತಕ್ಕ ಕೆಲಸ ರಾಜ್ಯ ಸರ್ಕಾರದಿಂದ ಇವತ್ತು ಆಗಿದೆ ಎಂಬ ಮಾತನ್ನು ಮಾನ್ಯ ಗೌರವಾನ್ವಿತ ರಾಜ್ಯಪಾಲರು ಭಾಷಣದಲ್ಲಿ ಹೇಳುತ್ತಾರೆ, ಇವತ್ತು ಕುಡಿಯುವ ನೀರಿನ ಸಮಸ್ಯೆ ಇರಬಹುದು, ಆದರೆ ಹಾಹಾಕಾರ ಬರಲಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ತಾವು ಬರಗಾಲವನ್ನು ನೀಗಿಸುವುದಾಗಿ ಹೇಳಿದ್ದೀರಿ, ಆದರೆ ಚರಿತ್ರೆಯಲ್ಲಿ ಪ್ರಥಮ ಬಾರಿಗೆ ಕೇಂದ್ರ ಸರ್ಕಾರ 171 ಕೋಟಿರೂ ಹಣವನ್ನು ಕೊಟ್ಟಿದೆ ಎಂಬ ಮಾತನ್ನು ತಾವು ಹೇಳಲಿಲ್ಲವಲ್ಲಾ?

ಶ್ರೀ ಎಸ್. ಬಿ. ಮುದ್ದಹನುಮೇಗೌಡ : ಹಳ್ಳಿಯ ಕಡೆ ಒಂದು ಗಾದೆ ಮಾತಿದೆ. ಎಂಥ ಬರಗಾಲದಲ್ಲೂ ಹೆಂಡರು ಮಕ್ಕಳನ್ನು ನಾನೇ ಸಾಕಿದೆ ಎಂದುit is the boundan duty of the central Government to safeguard the interest of the states you are not giving it as charity .

(ಗೊಂದಲ)

ಛೇರ್ಮನ್ : ಯಾರೂ ಮಧ್ಯದಲ್ಲಿ ಎದ್ದು ಮಾತನಾಡಬೇಡಿ, ದಯವಿಟ್ಟು ಕುಳಿತುಕೊಳ್ಳಿ.

ಛೇರ್ಮನ್ : ದಯವಿಟ್ಟು ಯಾವುದನ್ನೂ ರೆಕಾರ್ಡ್ ಮಾಡಬೇಡಿ.

1.10 ಪಿಎಂ

(ಗೊಂದಲ)

ಛೇರ್ಮ್‌ನ್ : ಮಾನ್ಯ ಮುದ್ದುಹನುಮೇಗೌಡರೇ, ತಾವು ದಯವಿಟ್ಟು ಯಾರಿಗೂ ಯೀಲ್ಡ್ ಆಗಬೇಡಿ, ನಿಮ್ಮ ಮಂಡನೆ ಏನಿದೆಯೋ ಅದನ್ನು ಮಾಡಿ, ದಯವಿಟ್ಟು ಮಾನ್ಯ ಸದಸ್ಯರುಗಳು ಯಾರೂ ಸಹ ಮಧ್ಯದಲ್ಲಿ ಮಾತನಾಡಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ನಿಮಗೆ ಮಾತನಾಡಲು ಅವಕಾಶ ಸಿಗುತ್ತದೆ, ಆಗ ತಾವುಗಳು ಮಾತನಾಡಿ, ಈಗ ಯಾರು ಮಧ್ಯದಲ್ಲಿ ಮಾತನಾಡಬೇಡಿ. ಹಾಗೆ ಮಾತನಾಡಿದರೆ ಅದು ರೆಕಾರ್ಡ್ ಆಗುವುದಿಲ್ಲ, ನೀವು ಮಧ್ಯದಲ್ಲಿ ಎದ್ದು ನಿಂತು ಏನು ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ : ವಾಸ್ತವಾಂಶಗಳನ್ನು ಮುಚ್ಚಿಡಲಿಕ್ಕೆ ಯಾರಿಂದಲೂ ಕೂಡ ಸಾಧ್ಯವಾಗುವುದಿಲ್ಲ ಮಾನ್ಯ ಸದಸ್ಯರುಗಳು ದಯಮಾಡಿ ಇದನ್ನು ತಿಳಿದುಕೊಳ್ಳಬೇಕು. ಇವತ್ತು ಕೇಂದ್ರ ಸರ್ಕಾರ ಈ ಬರ ಪರಿಹಾರ ಕಾಮಗಾರಿಗಳಿಗೆ ಹಣವನ್ನು ಬಿಡುಗಡೆ ಮಾಡುವಲ್ಲಿ ಯಾವ್ಯಾವ ರಾಜ್ಯಗಳನ್ನು ಯಾವ್ಯಾವ ದೃಷ್ಟಿಯಿಂದ ನೋಡುತ್ತಿದ್ದಾರೆ, ಯಾವ್ಯಾವ ರೀತಿಯಲ್ಲಿ ಅವರು ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳಲಿಕ್ಕೆ ಯಾವ್ಯಾವ ರೀತಿಯ ರಾಜ್ಯಗಳಿಗೆ ಯಾವ್ಯಾವ ರೀತಿಯ ಮೊಸಳೆ ಕಣ್ಣೀರನ್ನು ಹಾಕುತ್ತಿದ್ದಾರೆ ಎನ್ನುವುದರ ಬಗ್ಗೆ ಇವತ್ತು ವಾಸ್ತವಾಂಶಗಳು ನಮ್ಮ ಮುಂದೆ ಇದೆ, ಅದನ್ನು ಯಾರಿಂದಲೂ ಮುಚ್ಚಿಡುವುದಕ್ಕಾಗುವುದಿಲ್ಲ ಆದರೆ ಒಂದು ಮಾತನ್ನು ನಾನು ಹೇಳಬಯಸುತ್ತೇನೆ, ಕರ್ನಾಟಕ ರಾಜ್ಯ ಸರ್ಕಾರ, ನಮ್ಮ ಸರ್ಕಾರದ ಮಟ್ಟಿಗೆ ಇವತ್ತು ಈ ಬರ ಪರಿಹಾರ ಕಾಮಗಾರಿಗಳನ್ನು ಬಹಳ ಪರಿಣಾಮಕಾರಿಯಾಗಿ ಎದುರಿಸುತ್ತಿದೆ, ಆಹಾರ ಕ್ಷಾಮ ಬರಲಿಲ್ಲ ಇವತ್ತು ಆಹಾರಕ್ಕೋಸ್ಕರ ಬಡವರು, ರೈತರು, ಕೂಲಿ ಕಾರ್ಮಿಕರು ಗುಳೇ ಹೋಗತಕ್ಕಂಥ ಪರಿಸ್ಥಿತಿಯಲ್ಲಿ ನಾವು ಇಲ್ಲ, ಎಲ್ಲಾ ಕ್ಷೇತ್ರಗಳಲ್ಲಿಯೂ ಕೂಡ ಕಾಮಗಾರಿಗಳು ನಡೆಯುತ್ತಿವೆ, ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಮಗಾರಿಗಳು ನಡೆಯುತ್ತಿರುವ ಬಗ್ಗೆ ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿಯೂ ಕೂಡ ಬಹಳ ನಮೂದು ಮಾಡಿದ್ದಾರೆ. ಇವತ್ತು ಎಷ್ಟು ಬೋರ್‌ವೆಲ್‌ಗಳನ್ನು ಡೀಪನಿಂಗ್ ಮಾಡಲಾಗುತ್ತಿದೆ, ಹೈಡ್ರೋಫ್ರಾಕ್ಚರಿಂಗ್ ಮಾಡಲಾಗುತ್ತಿದೆ ಎಂಬ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಇದು ಈ ಬರಗಾಲದಲ್ಲಿಯೂ ಕೂಡ ಶ್ರೀಸಾಮಾನ್ಯನಿಗೆ ಕುಡಿಯುವ ನೀರಿನ ಸಮಸ್ಯೆ ಬರಬಾರದು ಎನ್ನುವುದಕ್ಕೋಸ್ಕರ ಇವತ್ತು ಸರ್ಕಾರ ಕೈಗೊಂಡಿರತಕ್ಕಂಥ ಕಾರ್ಯಕ್ರಮವಾಗಿದೆ, ಇವತ್ತು ಬರ ಪರಿಹಾರ ಕಾಮಗಾರಿಗಳನ್ನು ಸೃಷ್ಟಿ ಮಾಡತಕ್ಕಂಥದ್ದು ಮತ್ತು ಕುಡಿಯುವ ನೀರಿನ ಸಮಸ್ಯೆ ಬರದೇ, ಯಾವ ರೀತಿಯಲ್ಲೂ ಶ್ರೀ ಸಾಮಾನ್ಯನಿಗೆ ತೊಂದರೆಯಾಗದ ರೀತಿಯಲ್ಲಿ ಅದನ್ನು ಎದುರಿಸತಕ್ಕದ್ದು ಬಹಳ ಪ್ರಮುಖವಾದ ಕೆಲಸ, ಅದರ ಜೊತೆಗೆ ಇವತ್ತು ನಾವು ಜಲ ವಿದ್ಯುತ್ ಅನ್ನು ಪ್ರಮುಖವಾಗಿ ನಂಬಿಕೊಂಡಿದ್ದೆವು, ನಮ್ಮ ಲಿಂಗನಮಕ್ಕಿ ಅಣೆಕಟ್ಟೆಯೂ ಸೇರಿ ಇವತ್ತು ಯಾವ ಜಲ ವಿದ್ಯುತ್ತಿನ ಮೂಲಕಗಳಿದ್ದವೋ ಆ ಮೂಲಗಳು ಬತ್ತಿ ಹೋದಂತಹ ಸಂದರ್ಭದಲ್ಲಿ ಈ ರಾಜ್ಯದಲ್ಲಿ ವಿದ್ಯುತ್ತಿನ ಸಮಸ್ಯೆ ಇದ್ದರೂ ಕೂಡ, ವಿದ್ಯುತ್ತಿನ ಕ್ಷಾಮ ಬರದೇ ಇರುವಂತಹ ರೀತಿಯಲ್ಲಿ ಬಹಳ ಪರಿಣಾಮಕಾರಿಯಾಗಿ ಅದನ್ನು ಮ್ಯಾನೇಜ್ ಮಾಡುತ್ತಿರತಕ್ಕಂಥದ್ದಕ್ಕೆ ಇವತ್ತು ಸನ್ಮಾನ್ಯ ರಾಜ್ಯಪಾಲರು ಸರ್ಕಾರದ ಬಗ್ಗೆ ಮೆಚ್ಚುಗೆಯ ಮಾತುಗಳು ಆಡಿದ್ದಾರೆ ಎನ್ನುವ ಮಾತುಗಳನ್ನು ನಾನು ಬಹಳ ಸಂತೋಷದಿಂದ ಹೇಳಲಿಕ್ಕೆ ಇಷ್ಟಪಡುತ್ತೇನೆ, ಕಷ್ಟ ಇದೆ ನಿಜ, ಇವತ್ತು ಬರ ಯಾರನ್ನೂ ಕೇಳಿಕೊಂಡು ಬರಲಿಲ್ಲ

ಇದು ಕರ್ನಾಟಕ ರಾಜ್ಯಕ್ಕಷ್ಟೇ ಅಲ್ಲ, ಇವತ್ತು ರಾಷ್ಟ್ರದಲ್ಲಿ ಸುಮಾರು 10-12 ರಾಜ್ಯಗಳಲ್ಲಿ ಈ ಬರ ಇರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ, ಆದ್ದರಿಂದ ಇವತ್ತು ಬರ ಬಂದಂತಹ ಸಂದರ್ಭದಲ್ಲಿ ಸರ್ಕಾರ ಯಾವ ರೀತಿ ಪ್ರಾಮಾಣಿಕವಾಗಿ ಅದಕ್ಕೆ ಸ್ಪಂದಿಸುತ್ತಿದೆ ಯಾವ ರೀತಿ ಅದನ್ನು ಗಂಭೀರವಾಗಿ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ನಾವು ನೋಡಬೇಕಾಗುತ್ತದೆ, ಆದ್ದರಿಂದ ಇವತ್ತು ಈ ಬರವನ್ನು ಎದುರಿಸಲಿಕ್ಕೆ ರಾಜ್ಯ ಸರ್ಕಾರ ಕೈಗೊಂಡಿರತಕ್ಕಂಥ ಕಾರ್ಯಕ್ರಮಗಳು ಬಗ್ಗೆ ಮಾನ್ಯ ರಾಜ್ಯಪಾಲರು ಮೆಚ್ಚುಗೆಯ ಮಾತುಗಳನ್ನು ಆಡಿರತಕ್ಕಂಥದ್ದನ್ನು ಬಹಳ ಪ್ರಾಮಾಣಿಕತೆಯಿಂದ ನಾವೆಲ್ಲರೂ ಕೂಡ ಒಪ್ಪಿಕೊಳ್ಳಬೇಕಾಗುತ್ತದೆ, ಇವತ್ತು ನಮ್ಮಸರ್ಕಾರ ಯಾವ ರೀತಿ ರೈತರ ಸಂಕಷ್ಟಗಳಿಗೆ ಸ್ಪಂದಿಸುತ್ತಿದೆ ಎನ್ನುವುದರ ಬಗ್ಗೆ ಒಂದೆರಡು ವಿಚಾರಗಳನ್ನು ಸನ್ಮಾನ್ಯ ರಾಜ್ಯಪಾಲರೂ ಕೂಡ ತಮ್ಮ ಭಾಷಣದಲ್ಲಿ ನಮೂದು ಮಾಡಿದ್ದಾರೆ, ಅವನ್ನು ನಾನು ಪುನಃ ಉಲ್ಲೇಖ ಮಾಡಲಿಕ್ಕೆ ಹೋಗುವುದಿಲ್ಲ ಆದರೆ ಆ ಬಗ್ಗೆ ಸರ್ಕಾರ ಕೈಗೊಂಡಿರತಕ್ಕಂಥ ಕಾರ್ಯಕ್ರಮಗಳ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳಲೇಬೇಕಾಗುತ್ತದೆ, ಇವತ್ತು ನಾವು ಎಲ್ಲರೂ ಕೂಡ ಟೀಕೆಗೋಸ್ಕರ ಬಹಳ ಮಾತನಾಡುತ್ತೇವೆ, ಈ ಸರ್ಕಾರ ರೈತರಿಗೆ ಸಹಾಯ ಮಾಡಲಿಲ್ಲ,ರೈತರ ಪರವಾಗಿಲ್ಲ ಎನ್ನುವ ಕೂಗು ಮೊದಲು ಇತ್ತು, ಆದರೆ ಇತ್ತೀಚಿಗೆ ಜನತೆ ವಿವಿಧ ರೀತಿಯಲ್ಲಿ ಉತ್ತರಗಳನ್ನು ಕೊಡಲಿಕ್ಕೆ ಪ್ರಾರಂಭವಾದ ಮೇಲೆ ಬಹುಶಃ ಆ ಕೂಗು ಕಡಿಮೆಯಾಗಿದೆ ಎಂದು ನಾನು ಭಾವನೆ ಮಾಡುತ್ತೇನೆ, ಯಾವ ರೀತಿಯಲ್ಲಿ ರೈತರ ಸಂಕಷ್ಟಗಳಿಗೆ ಸರ್ಕಾರ ಸ್ಪಂದಿಸಿದೆ ಎನ್ನುವುದರ ಬಗ್ಗೆ ನೋಡಿದಾಗ ಆ ಒಂದು ವಿಚಾರವನ್ನು ನಾವೆಲ್ಲರೂ ಕೂಡ ಬಹಳವಾಗಿ ಒಪ್ಪಿಕೊಳ್ಳಲೇಬೇಕಾಗುತ್ತದೆ, ಇವತ್ತು ಸರ್ಕಾರ ಎಂದೆಂದೂ ಕಾಣದ ರೀತಿಯಲ್ಲಿ ರೈತರು ಬೆಳೆದಂತಹ ಬೆಳೆಗಳಿಗೆ ಬೆಂಬಲ ಬೆಲೆಯನ್ನು ಕೊಡತಕ್ಕಂಥದ್ದರಲ್ಲಿ ಒಂದು ದಾಖಲೆಯನ್ನು, ಇತಿಹಾಸವನ್ನು ನಿರ್ಮಾಣ ಮಾಡಿದೆ. ನಾವೆಲ್ಲರೂ ಕೂಡ ರಾಗಿ ಬೆಳೆಯತಕ್ಕಂಥ ಪ್ರದೇಶದಲ್ಲಿ ಇರತಕ್ಕವರೇ ಆಗಿದ್ದೇವೆ, ಬಹುಶಃ ನನಗೆ ಜ್ಞಾಪಕ ಇದ್ದಂತೆ,ಯಾವತ್ತೂ ಕೂಡ ರಾಗಿಯನ್ನು ನಾವು 513 ರೂಪಾಯಿ ಪರ್ ಕ್ವಿಂಟಾಲ್‌ಗೆ ಮಾರಿರತಕ್ಕಂಥದ್ದೇ ಇಲ್ಲ, ರಾಗಿಯನ್ನು ಬೆಳೆದಂತಹ ರೈತ ಇವತ್ತು 513 ರೂಪಾಯಿಗಳಿಗೆ ಒಂದು ಕ್ವಿಂಟಾಲ್‌ನಂತೆ ರಾಗಿಯನ್ನು ಮಾರಿ, ಸ್ವಲ್ಪ ಕೈಯಲ್ಲಿ ಹಣವನ್ನು ನೋಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದ್ದು, ಸನ್ಮಾನ್ಯ ಎಸ್. ಎಂ,ಕೃಷ್ಣರವರು ರೈತರ ಪರವಾಗಿ ರೈತರ ಸಂಕಷ್ಟಕ್ಕೆ ಇವತ್ತು ರೈತರಿಗೆ ಬೆಂಬಲ ಬೆಲೆಯನ್ನು ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದರಿಂದ. ಕೊಬ್ಬರಿ ಬೆಲೆ ಬಿದ್ದು ಹೋಯಿತು, ಆದರೆ ರೈತರು ಸಂಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳಲಿಲ್ಲ, ತೊಗರಿ ಬೆಲೆ ಬಿದ್ದಂತಹ ಸಂದರ್ಭದಲ್ಲಿ ತೊಗರಿಯನ್ನು ಕೊಂಡುಕೊಳ್ಳತಕ್ಕಂಥ ಕೆಲಸವನ್ನು ಸರ್ಕಾರ ಮಾಡಿತು, ಜೋಳದ ಬೆಲೆ ಬಿದ್ದು ಹೋಯಿತು, ಜೋಳವನ್ನು ಸರ್ಕಾರ ಕೊಂಡುಕೊಂಡಿತು, ಬೇಳೆ ಬೆಲೆ ಬಿದ್ದು ಹೋಯಿತು, ಬೇಳೆಯನ್ನು ಸರ್ಕಾರ ಕೊಂಡುಕೊಂಡಿತು,ಹೀಗೆ ಹತ್ತಾರು ಬೆಳೆಗಳನ್ನು ರೈತ ಬೆಳೆದು ಅವುಗಳಿಗೆ ಬೆಂಬಲ ಬೆಲೆ ಇಲ್ಲದೇನೇ ಅವನು ಪರಿತಪಿಸುತ್ತಾ ಇದ್ದಂತಹ ಕಾಲದಲ್ಲಿ ಸರ್ಕಾರ ಅವರ ನೆರವಿಗೆ ಬಂದು ಬೆಂಬಲ ಬೆಲೆಯನ್ನು ಘೋಷಿಸಿ ಸರ್ಕಾರ ನೇರವಾಗಿ ರೈತನಿಂದ ಖರೀದಿ ಮಾಡತಕ್ಕಂಥ ಒಂದು ಪ್ರಾಮಾಣಿಕ ಕೆಲಸ ಹಿಂದೆಂದೂ ಯಾವ ಸರ್ಕಾರದಲ್ಲೂ ಕೂಡ ಆಗಿರಲಿಲ್ಲ ಎಂಬ ಮಾತನ್ನು ಬಹಳ ಧೈರ್ಯದಿಂದ ನಾನು ಈ ಸದನದ ಮುಂದೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಬೆಳೆ ವಿಮೆ ಬಗ್ಗೆ ಹೇಳುವುದಾದರೆ, ರೈತ ಬೆಳೆ ಹಾಕಿದ್ದಾನೆ. ಪರಿಸ್ಥಿತಿ ಪ್ರಕೃತಿ ವಿಕೋಪಕ್ಕೆ ಸಿಲುಕಿ ಬೆಳೆ

ನಮ್ಮ ಕೈಗೆ ಸಿಗುವುದಿಲ್ಲ ಅಂತಹ ಸಂದರ್ಭದಲ್ಲಿ ರೈತನ ನೆರವಿಗೆ ನಾವು ಹೇಗೆ ಹೋಗಬೇಕು? ಅದಕ್ಕಾಗಿಯೇ ಇವತ್ತು ಬೆಳೆ ವಿಮೆ ಯೋಜನೆಯನ್ನು ತಂದು ರೈತ ಯಾವುದೇ ಕಷ್ಟದಲ್ಲಿ, ಯಾವುದೇ ಸಂದರ್ಭದಲ್ಲಿ ಅವನು ಬಿತ್ತಿದಂತಹ ಬೆಳೆ ಅವನ ಕೈಗೆ ಸಿಗಲಿಲ್ಲ ಎನ್ನುವಂತಹ ಸಂದರ್ಭದಲ್ಲಿ ಅವನಿಗೆ ಬೆಳೆ ವಿಮೆಯನ್ನು ಕೊಡಿಸತಕ್ಕಂಥ ಕೆಲಸವನ್ನು ಇವತ್ತು ಸನ್ಮಾನ್ಯ ಎಸ್.ಎಂ. ಕೃಷ್ಣರವರ ಸರ್ಕಾರ ಮಾಡಿದೆ, ಇದು ರೈತರ ಪರವಾದಂತಹ ಕಾರ್ಯಕ್ರಮವಲ್ಲವೇ? ಬೆಳೆ ವಿಮೆಯ ವಿಚಾರಧಲ್ಲಿ ಒಂದು ಸಲಹೆಯನ್ನು ನಾನು ಸರ್ಕಾರಕ್ಕೆ ಕೊಡಲಿಕ್ಕೆ ಇಚ್ಛಿಪಡುತ್ತೇನೆ, ಇವತ್ತು ಈ ಬೆಳೆ ವಿಮೆ ಏನಿದೆ. ನಾವು ಪದೇ ಪದೇ ನಮ್ಮನ್ನು ಕಾಡಿಸುತ್ತಾ ಇರತಕ್ಕಂಥ ಈ ಬರಗಾಲದ ಉಪಟಳ ಏನಿದೆ, ಅದರಿಂದ ತಪ್ಪಿಸಿಕೊಳ್ಳಬೇಕಾದರೆ ಈ ಬೆಳೆ ವಿಮೆಯ ಬಗ್ಗೆ ನಾವು ಅತ್ಯಂತ ಜಾಗ್ರತಿಯನ್ನು ರೈತರಲ್ಲಿ ಮೂಡಿಸಬೇಕಾಗಿದೆ, ರೈತನಿಗೆ ಇವತ್ತು ಸರಿಯಾಗಿ ಈ ಬೆಳೆ ವಿಮೆಯ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ನಾವು ಇನ್ನೂ ಕೊಟ್ಟಿಲ್ಲ. ಬೆಳೆ ವಿಮೆಯ ಬಗ್ಗೆ ಸರಳೀಕರಣ ಆಗಬೇಕು, ಬೆಳೆ ವಿಮೆಯ ಬಗ್ಗೆ ರೈತರಿಗೆ ಸಂಪೂರ್ಣವಾದಂತಹ ಮಾಹಿತಿ ಇರಬೇಕು, ಬೆಳೆ ವಿಮೆಯ ಸಂದರ್ಭದಲ್ಲಿ ಇವತ್ತೇನು ನಾವು ಪಹಣಿಯನ್ನು ಬರೆಸುತ್ತಿದ್ದೇವೋ ಆ ಪಹಣಿಯನ್ನು ರೊಟೀನ್ ಆಗಿ ಕೆಲವು ಸಲ ಬರೆದು, ಬೆಳೆ ವಿಮೆ ಸಿಗದೇ ಇರತಕ್ಕಂಥ ಸಂದರ್ಭಗಳು ಉಂಟು ಇವತ್ತೇನು ನಾವು ರಾಗಿ ಬದಲು ಜೋಳವನ್ನು ಹಾಕಿರುತ್ತೇನೆ, ಹಿಂದಿನ ವರ್ಷ ರಾಗಿ ಇತ್ತು ಎಂದರೆ,ಅವನು ಕಾಲಂನಲ್ಲಿ 'ರಾಗಿ,' 'ರಾಗಿ,' ಎಂದು ಬರೆದುಕೊಳ್ಳುತ್ತಾ ಹೋಗುತ್ತಾನೆ, ಆದರೆ ಆಕಸ್ಮಿಯಲ್ಲಾಗಿ ಅವನಿಗೆ ನಷ್ಟವಾಗಿರತಕ್ಕಂಥದ್ದು ಜೋಳ ಅಥವಾ ಜೋಳದ ಬೆಳೆ ಇರುತ್ತದೆ, ರಾಗಿ ಎಂದು ಬರೆಯುತ್ತಾನೆ, ರಾಗಿ ಬೆಳೆ ಇರುತ್ತದೆ, ಆದರೆ ಜೋಳ ಎಂದು ಬರೆಯುತ್ತಾನೆ ಆದ್ದರಿಂದ ಇವತ್ತು ಕಂದಾಯ ಇಲಾಖೆ, ಕೃಷಿ ಇಲಾಖೆ ಜಂಟಿಯಾಗಿ ಈ ರಾಜ್ಯದಲ್ಲಿ ಸಂಕಷ್ಟಕ್ಕೆ ಸಿಲುಕಿ ರೈತ ತನ್ನ ಬೆಳೆಯನ್ನು ಹಾಳು ಮಾಡಿಕೊಂಡಿರತ್ಕಂಥ ಸಂದರ್ಭದಲ್ಲಿ ಅವನಿಗೆ ಸುಲಭವಾಗಿ ಸರಳವಾಗಿ ಅವನಿಗೆ ವಿಮೆ ಸಿಗತಕ್ಕಂಥ ಆ ಮಿಮೆಯ ಸೌಲಭ್ಯವನ್ನು ಕೊಡಿಸತಕ್ಕಂಥ ಕೆಲಸವನ್ನು ಕೃಷಿ ಮತ್ತು ಕಂದಾಯ ಇಲಾಖೆಯವರು ಮಾಡಬೇಕಾಗುತ್ತದೆ, ಅದರ ಬಗ್ಗೆ ಇನ್ನೂ ಹೆಚ್ಚು ಸರಳೀಕರಣಗೊಳಿಸುವ ತೀರ್ಮಾನದ ಬಗ್ಗೆ ನಾನು ಮುಂದೆ ಹೆಚ್ಚು ನಿರೀಕ್ಷೆ ಮಾಡುತ್ತೇನೆ, ಸರ್ಕಾರ ಎಂತಹ ಆರ್ಥಿಕ ಬಿಕ್ಕಟ್ಟು ಇದ್ದರೂ ಕೂಡ ಈ ರಾಜ್ಯದಲ್ಲಿ ರೈತ ತನ್ನ ಸಾಲ ಮರು ಪಾವತಿ ಮಾಡಲಿಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಇದ್ದಂತಹ ಸಂದರ್ಭದಲ್ಲಿ ರೈತರ ನೆರವಿಗೆ ಬರತಕ್ಕಂಥ ಒಂದು ಪ್ರಾಮಾಣಿಕವಾದಂತಹ ಕೆಲಸವನ್ನು ಮಾಡಿದೆ, 127 ಕೋಟಿ ರೂಪಾಯಿಗಳು ಬಡ್ಡಿ ಮನ್ನಾ ಆಗಿದೆ, 127 ಕೋಟಿ ರೂಪಾಯಿಗಳ ಬಡ್ಡಿಯನ್ನು ಈ ರಾಜ್ಯದ ರೈತ ಸತತವಾಗಿ ಎರಡು ವರ್ಷ ಬರಗಾಲಕ್ಕೆ ಸಿಕ್ಕಿ ತನ್ನ ಸಾಲವನ್ನು ಮರುಪಾವತಿ. ಮಾಡಲಿಕ್ಕೆ ಕಷ್ಟ ಪಡುತ್ತಿರತಕ್ಕಂಥ ಸಂದರ್ಭದಲ್ಲಿ ಇವತ್ತು ರಾಜ್ಯ ಸರ್ಕಾರ ಅವನ ನೆರವಿಗೆ ಹೋಗಿದೆ, 127 ಕೋಟಿ ರೂಪಾಯಿಗಳು ಬಡ್ಡಿ ಮನ್ನಾ ಮಾಡುವುದರ ಮೂಲಕ ಇವತ್ತು ರೈತರ ನೆರವಿಗೆ ಸರ್ಕಾರ ಬಂದಿದೆ, ಆದರ ಜೊತೆಗೆ ಇವತ್ತು ರೈತರಿಗೋಸ್ಕರ ಅನೇಕ ಕಾರ್ಯಕ್ರಮಗಳಾಗಿವೆ, ಯಶಸ್ವಿನಿ ಯೋಜನೆ ಬಗ್ಗೆ ಹೇಳುವುದಾದರೆ, ಯಶಸ್ವಿನಿ ಇನ್ನೂ ಇನ್ನೂ ಪ್ರಾರಂಭಿಕ ಹಂತದಲ್ಲಿದೆ, 10 ಲಕ್ಷ ಸಹಕಾರಿ ರೈತರಿಗೆ ಅವರ ಆರೋಗ್ಯ ಕೆಟ್ಟಂತಹ ಸಂದರ್ಭದಲ್ಲಿ ತೊಂದರೆಯಾದಂತಹ ಸಂದರ್ಭದಲ್ಲಿ ಅವರ ನೆರವಿಗೆ ಬರತಕ್ಕಂಥ ಯಶಸ್ವಿನಿ ಯೋಜನೆ ಏನಿದೆ ಇದು ಪ್ರಾರಂಭಿಕ ಹಂತದಲ್ಲಿ ಇರತಕ್ಕಂಥ ಯೋಜನೆಯಾಗಿರುವುದರಿಂದ ಇನ್ನೂ ಹೆಚ್ಚು ಆದರ

ಬಗ್ಗೆ ಪ್ರಚಾರ ಕಾರ್ಯಕ್ರಮ ಆಗಬೇಕು. ಆದರೆ 10 ಲಕ್ಷ ಸಹಕಾರಿ ರೈತರಿಗೆ ಯಶಸ್ವಿನಿ ಯೋಜನೆಯನ್ನು ತರುವುದರ ಜೊತೆಗೆ 2003 ಮಾರ್ಚ್ ಹೊತ್ತಿಗೆ 25 ಲಕ್ಷ ಸಹಕಾರಿ ರೈತರಿಗೆ ಈ ಯಶಸ್ವಿನಿ ಯೋಜನೆಯ ವ್ಯಾಪ್ತಿಯಲ್ಲಿ ತರತಕ್ಕಂತಹ ಸರ್ಕಾರ ಪ್ರಾಮಾಣಿಕ ಚಿಂತನೆ ಏನಿದೆ ಅದು ನಿಜವಾಗಿ ರೈತರ ಪರ ಆಗಿರತಕ್ಕಂತಹ ಕಾರ್ಯಕ್ರಮ ಎನ್ನುವುದರ ಬಗ್ಗೆ ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಮೂದು ಮಾಡಿದ್ದಾರೆ, ಆದ್ದರಿಂದ ರೈತರಿಗೆ ಬೆಂಬಲ ಬೆಲೆ ಕೊಡತಕ್ಕಂಥದ್ದು, ಬೆಳೆ ವಿಮೆ ಕೊಡತಕ್ಕಂಥದ್ದು, ಬಡ್ಡಿ ಮನ್ನಾ ಮಾಡತಕ್ಕಂಥದ್ದು. ಯಶಸ್ವಿನಿ ಯೋಜನೆಯಲ್ಲಿ ಅವನಿಗೆ ಬಹಳ ಕಡಿಮೆ ಖರ್ಚಿನಲ್ಲಿ ಹೆಚ್ಚು ಆರೋಗ್ಯ ಲಾಭವನ್ನು ಕೊಡತಕ್ಕಂಥದ್ದು, ಹೀಗೆ ಹತ್ತಾರು ಕಾರ್ಯಕ್ರಮಗಳನ್ನು ಸರ್ಕಾರ ರೈತರಿಗೋಸ್ಕರ ಇವತ್ತು ಮಾಡುತ್ತಿದೆ, ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಸರ್ಕಾರ ರೈತರ ಪರವಾಗಿ ಮಾಡತಕ್ಕಂತಹ ಸಂದರ್ಭದಲ್ಲಿ ನಾವು ಟೀಕೆ ಟಿಪ್ಪಣಿಗಳನ್ನು ಮಾಡುವುದು ಬಿಟ್ಟು ಸರ್ಕಾರಕ್ಕೆ ಇನ್ನು ಹೆಚ್ಚು ಸಲಹೆಗಳನ್ನು ಕೊಟ್ಟು ಯಾವ ರೀತಿ ನಾವು ಇನ್ನು ಹೆಚ್ಚು ಹೆಚ್ಚು ರೀತಿಯಲ್ಲಿ ರೈತರ ನೆರವಿಗೆ ಧಾವಿಸಬಹುದು ಎಂಬ ಬಗ್ಗೆ ಪ್ರಾಮಾಣಿಕವಾದ ಸಲಹೆಗಳನ್ನು ಈ ಸಂದರ್ಭದಲ್ಲಿ ವಿರೋಧ ಪಕ್ಷಗಳಿಂದ ನಿರೀಕ್ಷೆ ಮಾಡಿ, ಈ ಎಲ್ಲಾ ವಿಚಾರಗಳ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬಹಳ ಸ್ಪಷ್ಟ ಮಾತಿನಿಂದ ಬಿಚ್ಚು ಮಾತಿನಿಂದ ಈ ವಿಚಾರಗಳನ್ನು ಮಂಡಿಸಿದ್ದಾರೆ, ಇದೇ ರೈತರ ವಿಷಯದಲ್ಲಿ ಮಾತನಾಡತಕ್ಕಂತಹ ಸಂದರ್ಭದಲ್ಲಿ ಎರಡು ವಿಷಯಗಳನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೂಡ ಹೇಳಿದ್ದಾರೆ, ನಾನು ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ರೇಷ್ಮೆ ಬೆಳೆಗಾರರಿಗೆ ಅವರ ನೆರವಿಗೆ ಬರುವುದಕ್ಕೆ ಕಾಂಪ್ರೆಹೆನ್ಸೀವ್ ಅಮೆಂಡ್‌ಮೆಂಟ್ ಆಕ್ಟ್ ತರಬೇಕೆಂಬ ಬಗ್ಗೆ ಸರ್ಕಾರ ಚಿಂತನೆ ಮಾಡಿದ್ದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ, ರೈತರಿಗೆ ಅನುಕೂಲ ಆಗುವ ರೀತಿಯಲ್ಲಿ ಗ್ಲೋಬಲೈಶೇಷನ್ ಏನು ಆಗುತ್ತಿದೆ ಜಾಗತೀಕರಣ ವಿಶ್ವ ಮಾರುಕಟ್ಟೆಯಲ್ಲಿ ನಾವು ಪ್ರವೇಶ ಮಾಡುವುದು, ಜಾಗತೀಕರಣ ಏನಿದೆ, ಈ ಸಂದರ್ಭದಲ್ಲಿ ನಾವು ಈ ಸಾಂಪ್ರದಾಯಿಕ ಕೃಷಿಯನ್ನು ನಂಬಿರತಕ್ಕಂತಹ ರೈತ ಏನಿದ್ದಾನೆ, ಈ ರಾಜ್ಯದಲ್ಲಿ ಅವನ ನೆರವಿಗೆ ಬರತಕ್ಕಂತಹ ಕೆಲಸವನ್ನು ಕೂಡ ಸರ್ಕಾರ ಮಾಡಬೇಕಾಗುತ್ತದೆ, ಹೀಗಾಗಿ ಇವತ್ತು ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗತಕ್ಕಂತಹ ಕಾರ್ಯಕ್ರಮ ಕಾಂಪ್ರೆಹೆನ್ಸೀವ್ ಅಮೆಂಡ್‌ಮೆಂಟ್ಸ್ ಟು ದಿ ಆಕ್ಟ್ ತಂದು ಜಾಗತೀಕರಣದ ಸವಾಲನ್ನು ಎದುರಿಸತಕ್ಕಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳುತ್ತಾರೆ, ಅದೇ ರೀತಿ ಪಶುಸಂಗೋಪನಾ ಇಲಾಖೆಯನ್ನು ಕೂಡ ಕಾಯಕಲ್ಪ ಮಾಡುವುದು, ನೇರವಾಗಿ ರೈತರಿಗೆ ಜನಸಾಮಾನ್ಯರಿಗೆ ಅನುಕೂಲವಾಗುವ ರೀತಿಯಲ್ಲಿ ಕಾಯಕಲ್ಪ ಮಾಡಬೇಕೆಂಬ ಮಾತನ್ನು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಇದು ಅವಶ್ಯಕತೆ ಇದೆ. ಇವತ್ತು ಪಶುಸಂಗೋಪನಾ ಇಲಾಖೆಯಲ್ಲಿ ಜಾನುವಾರುಗಳನ್ನು, ಪ್ರಾಣಿ ಪಕ್ಷಿಗಳನ್ನು ಬಹಳ ಎಚ್ಚರಿಕೆಯಿಂದ ಕಾಪಾಡತಕ್ಕಂಥದ್ದು ನಮ್ಮ ಪ್ರಕೃತಿಯಲ್ಲಿ ಇರತಕ್ಕಂತಹ ಸಮತೋಲನವನ್ನು ಕಾಪಾಡುವುದಕ್ಕೆ ಅದು ಒಂದು ಪ್ರಾಮಾಣಿಕ ಪ್ರಯತ್ನ, ಹೌಸಿಂಗ್ ವಿಷಯದಲ್ಲಿ ಒಂದು ಕ್ರಾಂತಿಕಾರಕವಾದ ಕೆಲಸ ಇವತ್ತು ವಸತಿ ಸೌಕರ್ಯವನ್ನು ಕಲ್ಪಿಸಿಕೊಡುವುದರಲ್ಲಿ ಆಗಿದೆ, ಈ ದೇಶದಲ್ಲಿ ತನ್ನದೇ ಆದ ಒಂದು ಸೂರನ್ನು ಹೊಂದದೆ ಇರತಕ್ಕಂತಹ 11 ಲಕ್ಷ ಬಡವರನ್ನು ಗುರುತಿಸಿ ಐದು ವರ್ಷಗಳಲ್ಲಿ ಅವರಿಗೆ ಮನೆಯನ್ನು ಕಟ್ಟಿಸಿಕೊಡತಕ್ಕಂತಹ ಯೋಜನೆಯನ್ನು ಸನ್ಮಾನ್ಯ ಎಸ್.ಎಂ. ಕೃಷ್ಣರವರು ಮೂರು ವರ್ಷಗಳ

ಹಿಂದೆ ಘೋಷಣೆ ಮಾಡಿದ್ದಾರೆ, ಈಗಾಗಲೇ ನಾವು ಮೂರು ವರ್ಷ ಕಳೆದಿದ್ದೇವೆ, ನಾವು ಈಗ ಐದು ಲಕ್ಷ ಮನೆಗಳನ್ನು ಕಟ್ಟಬೇಕಾಗಿತ್ತು. ಬಹಳ ಸಂತೋಷದಿಂದ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ, ಐದು ಲಕ್ಷ ಮನೆಗಳಿಗೆ ಬದಲಾಗಿ ಐದು ಲಕ್ಷ 78,000 ಮನೆಗಳನ್ನು ರಾಜ್ಯ ಸರ್ಕಾರ ಇವತ್ತು ಕಟ್ಟಿ ಈ ರಾಜ್ಯದಲ್ಲಿ ಒಂದು ಹೌಸಿಂಗ್ ರೆವಲ್ಯೂಷನ್ ಆಗಿದೆ. ಈ ರಾಷ್ಟ್ರದಲ್ಲಿ ಬೇರೆ ಯಾವುದೇ ರಾಜ್ಯಕ್ಕೆ ಹೋಲಿಕೆ ಮಾಡಿಕೊಂಡಾದ ರಾಜ್ಯದಲ್ಲಿ ಇವತ್ತು ಹೌಸಿಂಗ್ ರೆವಲ್ಯೂಷನ್ ಆಗಿದೆ ಎನ್ನುವ ಮಾತನ್ನು ಅತ್ಯಂತ ಸಂತೋಷದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ರಾಜ್ಯಪಾಲರು ಕೂಡ ಈ ಬಗ್ಗೆ ಹೆಚ್ಚಿನ ಒತ್ತು ಕೊಟ್ಟು ಮಾತನಾಡಿದ್ದಾರೆ. ಐದು ಲಕ್ಷ 78 ಸಾವಿರ ಮನೆಗಳನ್ನು ಜೊತೆಗೆ ನಿರಂತರ ನಡೆಯುವ ಕಾರ್ಯಕ್ರಮ ಉಳಿದ ಕಡು ಬಡವರು ಯಾರಿದ್ದಾರೆ, ವಸತಿ ರಹಿತರು ಏನಿದ್ದಾರೆ ಆ ವಸತಿ ರಹಿತರಿಗೆ ಎಲ್ಲರಿಗೂ ಕೂಡ ಮನೆಯನ್ನು ಕೊಡಬೇಕು. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಿದೆ ಎನ್ನುರ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ವಸತಿ ಹೀನರಿಗೆ ವಸತಿ ಕಲ್ಪಿಸಿ ಕೊಡತಕ್ಕಂತಹ ಜನೋಪಯೋಗಿ ಕಾರ್ಯಕ್ರಮ ಏನಿದೆ ಅದನ್ನು ಯಾವ ರೀತಿ ರಾಜ್ಯ ಸರ್ಕಾರಪ್ರ್ಯಾಕಲ್ ಮಾಡಿದೆ ಎಂದು ನೋಡಿದಾಗ ನಮ್ಮ ಟಾರ್ಗೆಟ್ ಏನಿದೆ ಆ ಟಾರ್ಗೆಟ್‌ಗೆ ಮೀರಿ ಇವತ್ತು ಆ ಕೆಲಸ ಆಗಿರತಕ್ಕಂಥದ್ದು ಬಹುಶಃ ಎಲ್ಲಾ ಗೌರವಾನ್ವಿತ ಸದಸ್ಯರು ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ, ಏಕೆಂದರೆ,ಎಲ್ಲ ಆಶ್ರಯ ಸಮಿತಿಗಳು ಕೂಡ ಅವರ ನೇತೃತ್ವದಲ್ಲಿ ಕೆಲಸ ಮಾಡುತ್ತಿವೆ, ಇವತ್ತು ಪ್ರಾಮಾಣಿಕವಾಗಿ ಕೆಲಸ ಆಗುತ್ತಿದೆ, ನೇರವಾಗಿ ಫಲಾನುಭವಿಗಳಿಗೆ 20,000 ರೂಪಾಯಿ ಹಣ ಯಾವುದೇ ಮೋಟಕು ಇಲ್ಲದ ಅವರ ಜೋಬಿಗೆ ಸೇರತಕ್ಕಂತಹ ಪ್ರಾಮಾಣಿಕ ಕೆಲಸ ಎಲ್ಲಾ ಕ್ಷೇತ್ರಗಳಲ್ಲೂ ಆಗಿದೆ, ಕಡು ಬಡವರಿಗೆ ಮನೆಗಳು ತಲುಪುತ್ತವೆ, ಜನಗಳಿಗೆ ಜಾಗೃತಿ ಉಂಟಾಗಿದೆ. ವಸತಿ ಯೋಜನೆ ಬಗ್ಗೆ ಅತ್ಯಂತ ಕಡು ಬಡವ ಕೂಡ ಈ ಯೋಜನೆ ಏನು, ಯಾವ ರೀತಿ ಯೋಜನೆ, ಎಷ್ಟು ಹಣ ಬರುತ್ತದೆ, ಯಾವ ರೀತಿ ಮನೆ ಕಟ್ಟಬೇಕು, ಯಾವ ರೀತಿ ಹಣ ಪಡೆಯಬೇಕು, ಹಣ ಚೆಕ್ ಮುಖಾಂತರ ಬರುತ್ತದೆ ಅಥವಾ ಕ್ಯಾಶ್ ಬರುತ್ತದೆ ಎನ್ನುವುದರ ಬಗ್ಗೆ ಪಾರದರ್ಶಕತೆಯಿಂದ ಇವತ್ತು ಈ ವಸತಿ ಯೋಜನೆ ರಾಜ್ಯ ಸರ್ಕಾರದಲ್ಲಿ ಕೆಲಸ ಮಾಡುತ್ತಿದೆ, ಇದರಿಂದ ರಾಜ್ಯದಲ್ಲಿ ಇರತಕ್ಕಂತಹ ಬಡವರಿಗೆ ನೇರವಾಗಿ ಸಹಾಯ ಮಾಡತಕ್ಕಂತಹ ಈ ವಸತಿ ಯೋಜನೆಯಲ್ಲಿ ರಾಜ್ಯ ಒಂದು ಸಾಧನೆಯನ್ನು ಮಾಡಿದೆ, ಇದು ಯಾವುದೇ ಬೇರೆ ರಾಜ್ಯಗಳಿಗೆ ನಾವು ಹೋಲಿಸಿದಾಗ ನಮ್ಮ ಸಾಧನೆ ಅದ್ವಿತೀಯ ಎನ್ನುವ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇದೇ ವಿಷಯವನ್ನು ಮಾನ್ಯ ರಾಜ್ಯಪಾಲರೂ ಕೂಡ ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ, ಎನ್ನುವ ಮಾತನ್ನು ಹೇಳುತ್ತಾ...

ಛೇರ್ಮನ್ : ಈಗ ಸದನವನ್ನು ಮಧ್ಯಹ್ನ 2.30ರವರೆಗೆ ಮುಂದೂಡುತ್ತಿದ್ದೇನೆ.

(ಸದನವು 1.28ಕ್ಕೆ ಮುಂದೂಡಲ್ಪಟ್ಟು ಮತ್ತೆ 2.30ಕ್ಕೆ ಸೇರಲು ನಿರ್ಧರಿಸಿತು)

(ಸದನವು ಪುನಃ ಮಧ್ಯಾಹ್ನ 3.ಗಂಟೆ ಸಮಾವೇಶಗೊಂಡಾಗ ಸಭಾಧ್ಯಕ್ಷರು ಶ್ರೀ ಎಂ. ವಿ.ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್. ಪಿ. ಮುದ್ದಹನುಮೇಗೌಡ: ಸನ್ಮಾನ್ಯ ಸಭಾಧ್ಯಕ್ಷರೆ, ವಸತಿ ಯೋಜನೆಯಲ್ಲಿ ನಮ್ಮ ಸಾಧನೆ ಅದ್ವಿತೀಯ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಬಹುಶಃ ಈ ವಿಷಯದ ಬಗ್ಗೆ ಯಾವ ಗೌರವಾನ್ವಿತ ಸದಸ್ಯರ ಭಿನ್ನಾಭಿಪ್ರಾಯವಿಲ್ಲವೆಂದು ಭಾವಿಸುತ್ತೇನೆ, ಅವರವರ

ಕ್ಷೇತ್ರದಲ್ಲಾಗಿರುವ ಸಾಧನೆ ಇವತ್ತು ನಮ್ಮ ಕಣ್ಣಮುಂದಿದೆ, ಆ ಕೆಲಸ ನಿರಂತರವಾಗಿ ನಡೆಯುತ್ತಿದೆ ಇನ್ನು ಮುಂದೆಯೂ ಕೂಡ ವಸತಿ ಹೀನರನ್ನು ಗುರುತಿಸಿ, ಅವರಿಗೆ ವಸತಿ ಸೌಲಭ್ಯವನ್ನು ಕೊಡಿಸುವ ಕಾರ್ಯಕ್ರಮಕ್ಕೆ ಬದ್ಧವೆನ್ನುವ ಮಾತನ್ನು ಮಾನ್ಯ ಗೌರವಾನ್ವಿತ ರಾಜ್ಯಪಾಲರು ಕೂಡ ತಮ್ಮ ಭಾಷಣದಲ್ಲಿ ನಮೂದು ಮಾಡಿದ್ದಾರೆ, ನಮ್ಮದು ಪುರುಷ ಪ್ರಧಾನ ಸಮಾಜ, ಸ್ತ್ರೀಗೆ ಸ್ವಾತಂತ್ರ ನೀಡಿದ್ದೇವೆ, ನಮಾನತೆ ನೀಡಿದ್ದೇವೆ, ಸಮಾನ ಹಕ್ಕುಗಳನ್ನು ನೀಡಿದ್ದೇವೆ ಎನ್ನುವ ಭಾಷಣವನ್ನು ನಾವು ಮೊದಲಿನಿಂದಲೂ ಕೂಡ ಮಾಡಿಕೊಂಡು ಬಂದಿದ್ದೇವೆ, ಆದರೆ ನಿಜವಾಗಿಯೂ ಕೂಡ ಸ್ತ್ರೀ ಸಿಗಬೇಕಾದ ಸಮಾನತೆ, ಆಕೆಯಲ್ಲಿ ಸುಪ್ತವಾಗಿ ಅಡಗಿರತಕ್ಕಂಥ ಪ್ರತಿಭೆಯನ್ನು ಗುರುತಿಸತಕ್ಕಂಥ ಕೆಲಸ, ಆಕೆಯ ಶಕ್ತಿ ಏನು? ಆಕೆಯ ಭಾವನೆಗಳನ್ನು ಅರ್ಥ ಮಾಡಿಕೊಂಡು, ಆ ಒಂದು ಸ್ತ್ರೀಗೆ ಶಕ್ತಿಯನ್ನು ಕೊಡುವ ಕೆಲಸ ಇದುವರೆಗಿನ ಯಾವುದೇ ಸರ್ಕಾರದಿಂದ ಆಗಿರಲಿಲ್ಲ, ಆದರೆ ಇವತ್ತು ಸನ್ಮಾನ್ಯ ಎಸ್. ಎಂ. ಕೃಷ್ಣರವರ ನೇತೃತ್ವದ ಸರ್ಕಾರ, ಸ್ತ್ರೀಯರಲ್ಲಿ ಸುಪ್ತವಾಗಿ ಅಡಗಿದಂಥ ಭಾವನೆಗಳನ್ನು, ಪ್ರತಿಭೆಯನ್ನು, ಶಕ್ತಿಯನ್ನು ಗುರುತಿಸತಕ್ಕಂಥ ಕೆಲಸ ಇವತ್ತು ಆಗಿದೆ, ಸ್ತ್ರೀ ಶಕ್ತಿ, ರಾಜ್ಯ ಸರ್ಕಾರ very popular programme in the Government ಇದರಿಂದ ಏನು ಸಹಾಯವಾಗುತ್ತದೆ, ಇದರಿಂದ ನಮ್ಮ ಸಮಾಜಕ್ಕೆ ಹೇಗೆ ಸಹಾಯವಾಗುತ್ತದೆ, ನಮ್ಮ ಸರ್ಕಾರಕ್ಕೆ ಅನುಕೂಲವಾಗುತ್ತದೆ, ಇದರ ಬಗ್ಗೆ ಸ್ವಲ್ಪ ಚಿಂತನೆ ಮಾಡುವ ಅವಶ್ಯಕತೆ ಇದೆಯೆಂದು ನಾನು ಭಾವಿಸುತ್ತೇನೆ. ಇವತ್ತು ಸ್ತ್ರೀ ಶಕ್ತಿ ಎಲ್ಲಾ ಕಡೆ ಕೂಡ ಬಹಳ ಜಾಗೃತವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ನಮ್ಮ ರಾಜ್ಯದಲ್ಲಿ 85 ಸಾವಿರ ಸ್ವಸಹಾಯ ಗುಂಪುಗಳ ರಚನೆಯಾಗಿದೆ, 119 ಕೋಟಿ ರೂಪಾಯಿಗಳ ಉಳಿತಾಯವಾಗಿದೆ, ಸುಮಾರು 76 ಕೋಟಿ ರೂಪಾಯಿಗಳ ಇಂಟರ್‌ನಲ್ ಲೆಂಡಿಂಗ್ ಆಗಿದೆ, ಇದರ ಜೊತೆಗೆ ಎಲ್ಲಾ ಸ್ವಸಹಾಯ ಗುಂಪುಗಳಿಗೆ ಸಾಲವನ್ನು ಕೊಡಿಸುವಂತಹ ಒಂದು linking these groups with the banking facilities that is also being taken up. ಇದರಿಂದ ಸ್ತ್ರೀ ಶಕ್ತಿ ಸ್ವಾವಲಂಭಿ ನಾನು ಯಾರ ಹಂಗೂ ಇಲ್ಲದೆ ನನ್ನ ಕುಟುಂಬವನ್ನು ನಿರ್ವಹಣೆ ಮಾಡಬಲ್ಲೇ ಎನ್ನುವ ಒಂದು ಶಕ್ತಿ ಆಕೆಯಲ್ಲಿ ಬೆಳೆಯುತ್ತದೆ, ಈ ಒಂದು ಸ್ವಸಹಾಯ ಗುಂಪುಗಳಿಗೆ ಅರ್ಥಿಕವಾಗಿ ಸ್ವಾವಂಬನೆಯನ್ನು ನೀಡತಕ್ಕಂತ ಒಂದು ಕೆಲಸಕ್ಕೆ ಸರ್ಕಾರ ಸ್ವಸಹಾಯ ಗುಂಪುಗಳ ರಚನೆ ಮಾಡುವಂತಹ ಒಂದು ಆ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದೆ, ಸ್ತ್ರೀಯನ್ನು ಸಬಲೆಯನ್ನಾಗಿ ಮಾಡತಕ್ಕಂತಹ ಕೆಲಸ, ಇವತ್ತು ನಮ್ಮನ್ನು ಶಕ್ತಿಯುತಗೊಳಿಸತಕ್ಕಂಥ ಕೆಲಸವಾಗುತ್ತದೆ, ಆದರಿಂದ ಇವತ್ತು ಲಾಭ ಶ್ರೀಸಾಮಾನ್ಯನಿಗೆ ಆಗುತ್ತದೆ ಎಲ್ಲಾ ಕುಟುಂಬದವರಿಗೆ ಕೂಡ ಆಗುತ್ತದೆ, ತನ್ಮೂಲಕ ಅದು ಸರ್ಕಾರಕ್ಕೆ ಒಂದು ಶಕ್ತಿಯಾಗುತ್ತದೆ, ಸರ್ಕಾರಕ್ಕೆ ಬಹಳ ಉತ್ಸಾಹ ಕೊಡುವಂತಹ ಒಂದು ಕಾರ್ಯಕ್ರಮವಾಗುತ್ತದೆ. ಬಹುಶಃ ನನ್ನ ಎಲ್ಲಾ ಸ್ನೇಹಿತರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ, ನಮ್ಮ ನಮ್ಮ ಕ್ಷೇತ್ರದಲ್ಲಿ ಇವತ್ತು ಸ್ತ್ರೀ ಶಕ್ತಿ ಎಷ್ಟು ಜಾಗೃತರಾಗಿದ್ದಾರೆಂದರೆ ಸಮಾಜ ವಿರೋಧಿ ಚಟುವಟಿಕೆ ಯಾವುದೇ ಆದರೂ ಕೂಡ, ಮೊಟ್ಟ ಮೊದಲನೆಯದಾಗಿ ಅದನ್ನು ವಿರೋಧಿಸತಕ್ಕಂಥವರು, ಪ್ರತಿಭಟನೆ ಮಾಡುವಂತಹವರು ಇವತ್ತು ಸ್ತ್ರೀ ಶಕ್ತಿಯ ಸ್ವಸಹಾಯ ಗುಂಪಿನವರು. ಒಂದು ವೈನ್ ಸ್ಟೋರ್ ಇರಬಹುದು, ಹೆಂಡ ಮಾರುವುದಿರಬಹುದು, ಸಾರಾಯಿ ಮಾರುವುದಿರಬಹುದು ಅಥವಾ ಒಂದು ಕಳಪೆ ಕಾಮಗಾರಿ ನಡೆದರೆ ಕೂಡ ಅದನ್ನು ಪ್ರತಿಭಟನೆ, ವಿರೋಧ ಮಾಡುವ ಕೆಲಸವನ್ನು ಸ್ತ್ರೀ ಶಕ್ತಿಯವರು ಮಾಡುತ್ತಿದ್ದಾರೆ, ಅನೇಕ ಉದಾಹರಣೆಗಳು

ನಮ್ಮಲ್ಲಿವೆ, ಕಳಪೆ ಕಾಮಗಾರಿ ನಡೆದರೆ ಸ್ತ್ರೀಯರು ವಿರೋಧ ಮಾಡಿರತಕ್ಕಂಥದಿದೆ, ಗ್ರಾಮಗಳಲ್ಲಿ ಅಗತ್ಯವಾಗಿ ಆಗಬೇಕಾಗಿರುವ ಕಾಮಗಾರಿಗಳನ್ನು, ಸರ್ಕಾರಕ್ಕೆ ಜನಪ್ರತಿನಿಧಿಗಳಿಗೆ ಮನವರಿಕೆ ಮಾಡಿಕೊಡತಕ್ಕಂಥ ಕೆಲಸ ಇವತ್ತು ಸ್ತ್ರೀ ಶಕ್ತಿಯಿಂದ ಆಗುತ್ತಿದೆ, ಸ್ತ್ರೀ ಶಕ್ತಿಯವರು ಇವರು ಜನಪ್ರನಿಧಿಗಳಲ್ಲಿ ಜನಜಾಗೃತಿಯನ್ನು ಇವತ್ತು ಉಂಟುಮಾಡುತ್ತಿದ್ದಾರೆ, ಸರ್ಕಾರಕ್ಕೆ ಅರಿವನ್ನು ಮೂಡಿಸುತ್ತಿದ್ದಾರೆ, ಪುರುಷ ಪ್ರಧಾನವಾಗಿರುವ ಸಮಾಜದಲ್ಲಿರುವ ನ್ಯೂನತೆಗಳನ್ನು ಲೋಪದೋಷಗಳನ್ನು ಇವತ್ತು ಎತ್ತಿ ತೋರಿಸತಕ್ಕಂಥ ಪ್ರಾಮಾಣಿಕ ಕೆಲಸಗಳನ್ನು ಸ್ತ್ರೀ ಶಕ್ತಿಯಿಂದ ಆಗುತ್ತಿದೆ.ಸ್ವಸಹಾಯ ಗುಂಪುಗಳನ್ನು ಹೆಚ್ಚುಹೆಚ್ಚು ಶಕ್ತಿಯುತವಾಗಿ ಮಾಡುವುದರ ಮೂಲಕ ನಮ್ಮ ವ್ಯವಸ್ಥೆಯನ್ನು ಸದೃಢಗೊಳಿಸತಕ್ಕಂಥಾದ್ದು ಇವತ್ತು ಆಗುತ್ತಿದೆ, ಸ್ವಸಹಾಯ ಗುಂಪುಗಳು ಇಷ್ಟೊಂದು ಜಾಗೃತವಾಗಬೇಕಾದರೆ, ಇಷ್ಟೊಂದು ಕರ್ತವ್ಯ ಪ್ರಜ್ಞೆಯನ್ನು ಸರ್ಕಾರಕ್ಕೆ, ಜನಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಮೂಡಿಸತಕ್ಕಂಥ ಕೆಲಸ ಅವುಗಳಿಂದ ಆಗಬೇಕಾದರೆ, ಅದಕ್ಕೆ ಕಾರಣವೆಂದರೆ, ಸರ್ಕಾರಿ ಈ ಒಂದು ಶಕ್ತಿಯನ್ನು ಗುರುತಿಸಿ, ಅದಕ್ಕೆ ಪ್ರೋತ್ಸಾಹವನ್ನು ಕೊಡತಕ್ಕಂಥಾದ್ದು ಸರ್ಕಾರದಿಂದ ಆಗಿದೆ, ಎಲ್ಲಾ ಸ್ವಸಹಾಯ ಗುಂಪುಗಳಿಗೆ ಪ್ರೋತ್ಸಾಹಧನವನ್ನು ನೀಡತಕ್ಕಂಥ ಕೆಲಸ ಇವತ್ತು ಈ ಸರ್ಕಾರದಿಂದ ಆಗಿದೆ, ನಾನು ಈಗಾಗಲೇ ಹೇಳಿದ ಹಾಗೆ, ನಮ್ಮನಮ್ಮಕ್ಷೇತ್ರದಲ್ಲಿ ಅವರು ಎಷ್ಟೊಂದು ಜಾಗೃತರಾಗಿ ಕೆಲಸ ಮಾಡುತ್ತಿದ್ದಾರೆಂದರೆ, ಕೆಲವು ಟೆಂಡರ್‌ಗಳಲ್ಲಿ ನಾವೇ ಕಾಂಟ್ರಿಬ್ಯೂಷನ್ ಹಾಕಿಕೊಂಡು ಕೆಲಸವನ್ನು ಮಾಡುತ್ತೇವೆ, ಉತ್ತಮ ಗುಣಮಟ್ಟವನ್ನು ಕಾಪಾಡತಕ್ಕಂಥ ಕೆಲಸವನ್ನು ನಾವು ಮಾಡುತ್ತೇವೆ ಎನ್ನುವಂಥ ಧೈರ್ಯ ಇವತ್ತು ಅವರಲ್ಲಿ ತುಂಬಿದೆ, ಪುರುಷ ಪ್ರಧಾನವಾದಂಥ ಈ ಸಮಾಜದಲ್ಲಿ ನಾವು ಯಾರಿಗೂ ಕಡಿಮೆಯಿಲ್ಲ. ನಾವೂ ಕೂಡ ಪುರುಷರಷ್ಟೆ ಸಬಲರಾಗಿದ್ದೇವೆ, ನಾವು ಯಾವುದೇ ಕೆಲಸವನ್ನು ಬೇಕಾದಾರೂ ಕೈಗೆತ್ತಿಕೊಳ್ಳುತ್ತೇವೆ, ನಾವು ಯಾವುದೇ ಕೆಲಸವನ್ನು ಬೇಕಾದರೂ ಮಾಡುತ್ತೇವೆ, ಎನ್ನುವ ಶಕ್ತಿಯನ್ನು ಇವತ್ತು ಅವರು ಪ್ರದರ್ಶನ ಮಾಡುತ್ತಿರತಕ್ಕಂಥಾದ್ದಕ್ಕೆ ಶಕ್ತಿಯನ್ನು ಕೊಟ್ಟಿದ್ದು ನಮ್ಮ ಕೃಷ್ಣಾರವರ ಸರ್ಕಾರ, ಇದೊಂದು ಅದ್ವಿತೀಯವಾದಂಥ ಸಾಧನೆ, ದೇಶದಲ್ಲಿ ಎಲ್ಲಿಯೂ ಕೂಡ ಈ ರೀತಿ ಸ್ತ್ರೀ ಶಕ್ತಿಯನ್ನು ಜಾಗೃತಗೊಳಿಸತಕ್ಕಂಥ ಕೆಲಸ ಯಾವ ಸರ್ಕಾರದಿಂದಲೂ ಆಗಿರಲಿಲ್ಲ, ಹೀಗಾಗಿ, ರಾಜ್ಯದಲ್ಲಿ ರಚನೆಯಾಗಿರುವ 85 ಸಾವಿರ ಸ್ವಸಹಾಯ ಗುಂಪುಗಳ ಮೂಲಕ ಈ ಸಮಾಜದಲ್ಲಿ ಪಾರದರ್ಶಕತೆಯನ್ನು ತರತಕ್ಕಂಥ ಪ್ರಾಮಾಣಿಕ ಕೆಲಸ ಸ್ತ್ರೀಯರಿಂದ ಆಗುತ್ತದೆ ಎನ್ನುವ ವಿಶ್ವಾಸವನ್ನು ನಾನು ವ್ಯಕ್ತಪಡಿಸಲು ಇಷ್ಟಪಡುತ್ತೇನೆ, ಬಹುಶಃ ನನ್ನ ಕೆಲವು ಸ್ನೇಹಿತರ ಅನುಭವವೂ ಕೂಡ ಇದೇ ಎಂದು ನಾನು ಭಾವನೆಮಾಡಿಕೊಂಡಿದ್ದೇನೆ, ಸ್ತ್ರೀಯರು ಮನೆಯಿಂದ ಹೊರಗಡೆ ಬಂದ ತಮ್ಮ ಗ್ರಾಮಕ್ಕೆ ಆಗಬೇಕಾಗಿರತಕ್ಕಂಥ ಅಭಿವೃದ್ಧಿ ಕೆಲಸಗಳನ್ನು ಕೇಳುವುದಿರಲಿ ಅಥವಾ ತಮ್ಮ ಸ್ವಂತ ಕೆಲಸವನ್ನು ಕೇಳುವುದಿರಲಿ, ಸ್ತ್ರೀಯರು ಮನೆಯಿಂದ ಹೊರಗೆ ಬರುವುದೇ ತಪ್ಪೇನೋ ಎನ್ನುವ ಭಾವನೆ ಇದ್ದಂಥ ಸಮಾಜದಲ್ಲಿ ಸ್ತ್ರೀಯರು ಮುಂದೆ ಬಂದು ಈ ಸಮಾಜದ ಆಗುಹೋಗುಗಳ ಬಗ್ಗೆ ಅವರು ತಮ್ಮ ಕಾಳಜಿಯನ್ನು ವ್ಯಕ್ತಪಡಿಸುತ್ತಿರತಕ್ಕಂಥಾದ್ದು ಬಹುಶಃ ನಮ್ಮ ಸಮಾಜದ ಸುಧಾರಣೆಯ ಒಂದು ಸಂಕೇತ ಎಂದು ನಾನು ಭಾವನೆ ಮಾಡುತ್ತೇನೆ, ಈ ಶಕ್ತಿಯನ್ನು ಜಾಗೃತಗೊಳಿಸಿದಂಥ ಈ ಸರ್ಕಾರಕ್ಕೆ ನನ್ನ ಅಭಿನಂದನೆಗಳು. ಸರ್ಕಾರ ಈ ದಿಸೆಯಲ್ಲಿ ಇನ್ನೂ ಹೆಚ್ಚೆಚ್ಚು ಕೆಲಸಗಳನ್ನು ಮಾಡಬೇಕು, ಶ್ರೀಮತಿ ಮೋಟಮ್ಮನವರು ಬಹಳ ಉತ್ಸಾಹದಿಂದ ಈ ಕೆಲಸವನ್ನು ಮಾಡುತ್ತಿದ್ದಾರೆ, ಇದಕ್ಕೆ, ಸ್ತ್ರೀಯರು ಅವರಿಗೆ ತೋರಿಸುತ್ತಿರತಕ್ಕಂಥ ಸಹಕಾರ ಮತ್ತು ಪ್ರೋತ್ಸಾಹವೇ ಕಾರಣವೆಂದು ಭಾವಿಸಿದ್ದೇನೆ, ಅವರು ಇನ್ನೂ ಹೆಚ್ಚೆಚ್ಚು ಕೆಲಸ ಮಾಡತಕ್ಕಂಥ

ದಿಸೆಯಲ್ಲಿ ಕಾರ್ಯೋನ್ಮುಖರಾಗಬೇಕು ಎನ್ನುವ ಮಾತನ್ನು ಹೇಳುತ್ತೇನೆ, ಇದೊಂದು ಅದ್ವತೀಯವಾದಂಥ ಸಾಧನೆ, ಈ ರೀತಿಯ ಸಾಧನೆ ದೇಶದಲ್ಲಿ ಇನ್ನೆಲ್ಲಿಯೂ ಆಗಿಲ್ಲ, ಇಂಥ ಸಾಧನೆಯನ್ನು ಮಾಡಿದಂಥ ಕೀರ್ತಿ ಈ ಸರ್ಕಾರದ್ದು ಎನ್ನುವ ಮಾತನ್ನು ಘನವೆತ್ತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿರುತ್ತಾರೆ, ಆದ್ದರಿಂದ ಇಂಥ ಒಂದು ಸ್ತ್ರೀ ಶಕ್ತಿ ಯೋಜನೆಯನ್ನು ಹುಟ್ಟಿಹಾಕಿದಂಥ ಈ ಸರ್ಕಾರಕ್ಕೆ ಮತ್ತೊಮ್ಮೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇನ್ನು , ನಾವು ಮಾಹಿತಿ ತಂತ್ರಜ್ಞಾನದ ಬಗ್ಗೆ ಮಾತನಾಡುತ್ತಿರುತ್ತೇವೆ, ಬಹುಶಃ ರಾಷ್ಟ್ರದ ಮತ್ತು ವಿಶ್ವದ ಗಮನವನ್ನು ಸೆಳೆದಿರತಕ್ಕಂಥಾದ್ದು ಕರ್ನಾಟಕ, ಅದರಲ್ಲೂ ವಿಶೇಷವಾಗಿ ಬೆಂಗಳೂರು ಎನ್ನುವ ವಿಷಯಕ್ಕೆ ಯಾರೂ ಕೂಡ ವಿರೋಧವನ್ನು ವ್ಯಕ್ತಪಡಿಸಲಾರರು, ನಮ್ಮ ರಾಜ್ಯದಲ್ಲಿ, ಮಾಹಿತಿ ತಂತ್ರಜ್ಞಾನದಲ್ಲಿ ನಾವು ಮಾಡಿರತಕ್ಕಂಥ ಸಾಧನೆ ಇಡೀ ರಾಷ್ಟ್ರಾದ್ಯಂತವಷ್ಟೇ ಅಲ್ಲ, ವಿಶ್ವದಾದ್ಯಂತ ಎಲ್ಲಾ ಕಡೆ ವ್ಯಾಪಿಸಿದೆ, ವಿಶ್ವದ ಭೂಪುಟದಲ್ಲಿ ಬೆಂಗಳೂರನ್ನು ಎಲ್ಲರೂ ಗುರುತಿಸತಕ್ಕಂಥ ಕೆಲಸ ಈ ಸರ್ಕಾರದಿಂದ ಆಗಿದೆ ಎನ್ನುವ ಮಾತನ್ನು ಯಾರೂ ಕೂಡ ವಿರೋಧ ಮಾಡಲಾರರು, ಆದರೆ, ಈ ಮಾಹಿತಿ ತಂತ್ರಜ್ಞಾನ ಶ್ರೀಸಾಮಾನ್ಯನಿಗೆ ಹೇಗೆ ಉಪಯೋಗವಾಗಿದೆ? How these poor people are utilising the Information Technology is the question befrore us. How this Information Technology is useful for the poor and the down- trodden people of the state is the question before us.ಅದಕ್ಕೆ ನನ್ನ ಹತ್ತಿರ ಉತ್ತರವಿದೆ, ಸರ್ಕಾರ 'ಭೂಮಿ' ಕಾರ್ಯಕ್ರಮ ಮಾಹಿತಿ ತಂತ್ರಜ್ಞಾನ ಯಾವ ರೀತಿ ಈ ರಾಜ್ಯದ ಶ್ರೀಸಾಮಾನ್ಯನನ್ನು ತಲುಪಬಹುದು ಎನ್ನುವುದಕ್ಕೆ, ರಾಜ್ಯ ಸರ್ಕಾರ ಹಮ್ಮಿಕೊಂಡಿರತಕ್ಕಂಥ ಈ 'ಭೂಮಿ' ಕಾರ್ಯಕ್ರಮವೇ ಸಾಕ್ಷಿಯಾಗಿದೆ, It is not an ordinary programme ಭಾರತ ಸರ್ಕಾರದ ಪ್ರಧಾನ ಮಂತ್ರಿಗಳಾಗಿರತಕ್ಕಂಥ ಮಾನ್ಯ ವಾಜಪೇಯಿಯವರು ಬಹಳ ಮುಕ್ತಕಂಠದಿಂದ ಇದನ್ನು ಪ್ರಶಂಸೆ ಮಾಡಿದ್ದಾರೆ, ಮತ್ತು ಈ ತಂತ್ರಜ್ಞಾನವನ್ನು ಇಡೀ ರಾಷ್ಟ್ರದಾದ್ಯಂತ ಅಳವಡಿಸಲು ಆದೇಶವನ್ನು ನೀಡಿದ್ದಾರೆ, ಇದಷ್ಟೇ ಅಲ್ಲ. ಸ್ಕಾಟ್ಲೆಂಡ್ ದೇಶ ಇದಕ್ಕೆ ಪುರಸ್ಕಾರವನ್ನು ನೀಡಿದೆ, ಹರುಕಲ್ಲು ಬಟ್ಟೆ ಹಾಕಿಕೊಂಡಿರತಕ್ಕಂಥ ಒಬ್ಬ ಶ್ರೀಸಾಮಾನ್ಯನೂ ಸಹ ನೇರವಾಗಿ ಯಾವುದೇ ತೊಂದರೆಯಿಲ್ಲದೆ, ಕಂಪ್ಯೂಟರ್ ಪಹಣಿಯನ್ನು, ತಾಲ್ಲೂಕು ಆಫೀಸಿಗೆ ಹೋಗ ತತಕ್ಷಣವೇ ಪಡೆದುಕೊಳ್ಳಬಹುದು, ಮಾಹಿತಿ ತಂತ್ರಜ್ಞಾನದ ಮೂಲಕ ತನ್ನ ದಾಖಲಾತಿಯನ್ನು ತಾನು ಪಡೆಯಬಹುದು ಎನ್ನುವಂಥ ಈ ಒಂದು ಸಾಧನೆ, ಬಹುಶಃ ಈ ರಾಷ್ಟ್ರದಲ್ಲಿ ಬೇರೆ ಯಾವುದೇ ರಾಜ್ಯದಲ್ಲಿ ಈ ರೀತಿ ಮಾಹಿತಿ ತಂತ್ರಜ್ಞಾನವನ್ನು ಮಾಡಿಲ್ಲ, ಹೀಗೆ ಮಾಹಿತಿ ತಂತ್ರಜ್ಞಾನ ಶ್ರೀಸಾಮಾನ್ಯನಿಗೆ ತಲುಪುದರ ಜೊತೆಗೆ, 'ಮಾಹಿತಿ ಸಿಂಧು' ಕಾರ್ಯಕ್ರಮ. ಒಂದು ಸಾವಿರ ಗ್ರಾಮೀಣ ಶಾಲೆಗಳಲ್ಲಿ ಕಂಪ್ಯೂಟರ್‌ಗಳನ್ನು .....

ಶ್ರೀ ಸಿ. ಚೆನ್ನಿಗಪ್ಪ : ಕಂಪ್ಯೂಟರ್ ಪಹಣಿಗಳನ್ನು ಕೂಡುವುದಕ್ಕೆ ಆದೇಶ ಮಾಡಿದರು ಯಾರು ಎನ್ನುವುದನ್ನು ತಾವು ದಯವಿಟ್ಟು ಹೇಳಬೇಕು.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ನಾನು ಮಾತನಾಡಿ ಮುಗಿಸಿಬಿಡುತ್ತೇವೆ, ತಾವು ಆಮೇಲೆ ಮಾತನಾಡಿ, ಒಂದು ಸಾವಿರ ಗ್ರಾಮೀಣ ಶಾಲೆಗಳಲ್ಲಿ ಕಂಪ್ಯೂಟರ್‌ಗಳನ್ನು ..

ಶ್ರೀ ಬಿ. ಸೋಮಶೇಖರ್ : ದೆಹಲಿಯಲ್ಲಿ ಕರ್ನಾಟಕ ಭವನ-11 ಕಟ್ಟಿಸಿದಾಗ,ಅದಕ್ಕೆ ಆಗಿನ ಮುಖ್ಯಮಂತ್ರಿಗಳು ಹೋಗಿ ಅದಕ್ಕೆ 'ಶರಾವತಿ' ಎನ್ನುವ ಹೆಸರನ್ನು ಕೊಟ್ಟು ಕೊಂಡರು,

ಅದು ಅನ್‌ಪ್ರಿಸಿಡೆಂಟೆಡ್, ಏಕೆಂದರೆ, ಈಗಾಗಲೇ ಕಟ್ಟಿ, ಉದ್ಘಾಟನೆಯಾಗಿರತಕ್ಕಂಥ ಕಟ್ಟಡಕ್ಕೆ ಆಗಿನ ಮುಖ್ಯಮಂತ್ರಿಗಳು ಒಂದು ಹೆಸರು ಕೊಟ್ಟ ಹಾಗೆ 'ಭೂಮಿ' ಎನ್ನುವ ಈ ಕಾರ್ಯಕ್ರಮವನ್ನು ಹೇಳುತ್ತಿದ್ದಾರೆ. ಆದರೆ, ನಿಜವಾಗಿ ಈ ಕಾರ್ಯಕ್ರಮಕ್ಕೆ ಎಲ್ಲಾ ತಾಲ್ಲೂಕುಗಳಿಗೆ ಕಂಪ್ಯೂಟರ್‌ಗಳನ್ನು ಕೊಟ್ಟು, ಸಾಫ್ಟ್‌ವೇರ್ ಡೆವಲಪ್ ಮಾಡಿದವರು ಯಾವ ಸರ್ಕಾರದವರು? ಅದನ್ನು ಮಾಡಿದವರು ಯಾರು ? ಏಕೆ ಈ ರೀತಿ ಕ್ರೆಡಿಟ್ ತೆಗೆದುಕೊಳ್ಳುತ್ತಿದ್ದೀರಿ? ನಿಜವಾಗಿ ನೀವು ಪ್ರಾರಂಭ ಮಾಡಿ, ಅನುಷ್ಠಾನಕ್ಕೆ ತಂದಿದ್ದರೆ ನೀವು ಕ್ರೆಡಿಟ್ ತೆಗೆದುಕೊಳ್ಳಿ..You have not started the programme.ಏಕೆ ನಿಮ್ಮ ಭುಜವನ್ನು ನೀವೇ ತಟ್ಟಿಕೊಳ್ಳುತ್ತಿದ್ದೀರಿ? ಈ ಕ್ರೆಡಿಟ್ ಯಾರಿಗೆ ಹೋಗಬೇಕು? ಸುಮಾರು 175 ತಾಲ್ಲೂಕುಗಳಿಗೆ ಕಂಪ್ಯೂಟರನ್ನು ಕೊಟ್ಟಿದ್ದಕ್ಕೆ ನನ್ನ ಮೇಲೆ ಒಂದು ಎನ್‌ಕ್ವೈರಿಯನ್ನು ಒಳಗಡೆಯೇ ಪ್ರಾರಂಭ ಮಾಡಿಸಿದರು, ಅದು ಬಯಲಿಗೆ ಬರಲಿಲ್ಲ, ಇದರಲ್ಲಿ ಮಿಸ್-ಯೂಸ್ ಆಗಿರಬಹುದು ಎಂದು ನಿಮ್ಮ ಒಬ್ಬ ಅಡೀಷನಲ್ ಸೆಕ್ರೆಟರಿ, ಎ.ಜಿ.ಯವರಿಗೆ ಸುಳ್ಳು ಆಶ್ವಾಸನೆ ಕೊಟ್ಟು ನನ್ನನ್ನು ಎಂಬೆರಾಸ್ ಮಾಡಬೇಕು, ನನ್ನನ್ನು ಸಿಕ್ಕಿಸಬೇಕು ಎನ್ನುವ ಪ್ರಯತ್ನವೂ ನಿಮ್ಮ ಸರ್ಕಾರದಲ್ಲಿ ನಡೆಯಿತು. ಆ ಸಂದರ್ಭದಲ್ಲಿ ನಾನು, ಇದರಲ್ಲಿ ಯಾವರೀತಿ ಅವ್ಯವಹಾರವಾಗಿದೆ, ಎನ್ನುವುದನ್ನು ನೀವೇ ನೋಡಿ, ಇಲ್ಲದಿದ್ದರೆ ನಾನು ಎ. ಜಿ. ಯವರ ಮೇಲೆ ಬರೆಯಬೇಕಾಗುತ್ತದೆ, ಅನಾವಶ್ಯಕವಾಗಿ ಒಬ್ಬ ಮಾಜಿ ಮಂತ್ರಿಯನ್ನು ನೀವು ಫಿಕ್ಸ್‌ಮಾಡುವುದಾದರೆ, ಅಧಿಕಾರಿಗಳು ಬರೆದಂಥ ರಿಪೋರ್ಟ್‌ನ ಮೇಲೆ ನೀವು ಅಬ್ಸರ್‌ವೇಷನ್ ಫಿಕ್ಸ್ ಮಾಡುವುದಾದರೆ ಇದನ್ನು ನಾನು ಸೀರಿಯಸ್ ಆಗಿ ತೆಗೆದು ಕೊಳ್ಳಬೇಕಾಗುತ್ತದೆ ಎಂದು ಹೇಳಿದ ಮೇಲೆ ಆ ಒಂದು ಪ್ಯಾರಾವನ್ನು ಡಿಲೀಟ್ ಮಾಡಿದರು, ಅಂದರೆ, ಮೊದಲು ನಾವು ಎಲ್ಲಾ ತಾಲ್ಲೂಕುಗಳಿಗೆ ಕಂಪ್ಯೂಟರ್‌ನ್ನು ಒದಗಿಸಿಕೊಟ್ಟೆವು, ಹೀಗೆ ನಾವು ಪ್ರಾರಂಭ ಮಾಡಿದಂಥಾದ್ದಕ್ಕೆ ನೀವು 'ಭೂಮಿ' ಕಾರ್ಯಕ್ರಮ ಎಂದು ಹೇಳಿವುದಾದರೆ, ಈ ಕಾರ್ಯಕ್ರಮವನ್ನು ನೀವು ಪ್ರಾರಂಭ ಮಾಡಿದಿರೇನು? ಏಕೆ ಈ ರೀತಿ ಆಗುತ್ತಿದೆ, ನೀವು ಮಾಡಿರುವುದಕ್ಕೆ ನೀವು ಕ್ರೆಡಿಟ್ ತೆಗೆದುಕೊಳ್ಳಿ, ಕರ್ನಾಟಕ ರೈಲ್ವೆ ಡೆವಲ್‌ಮೆಂಟ್ ಬೋರ್ಡ್ ಎನ್ನುವ ಎಂದು ಹೊಸ ರೈಲ್ವೆ ಕಾರ್ಯಕ್ರಮವನ್ನು ಪ್ರಾರಂಭಮಾಡಿದಿರಿ.It is your programme, If you implement it, we will welcome it.ಆದರೆ, ಇದಕ್ಕೆ ಕೇಂದ್ರ ಸರ್ಕಾರದಿಂದು ಹಣ ಬಂದಿದ್ದು, ಮೂರ್‍ನಾಲ್ಕು ವರ್ಷಗಳಿಂದ ಆ ಹಣವನ್ನು ಖರ್ಚು ಮಾಡಿರಲಿಲ್ಲ, ನಾನು ಮಂತ್ರಿಯಾದಾಗ, ನಾಲ್ಕು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿ ಪ್ರತಿಯೊಂದು ತಾಲ್ಲೂಕಿಗೂ ಕಂಪ್ಯೂಟರ್‌ಗಳನ್ನು ಕೊಡಿಸಿದೆವು, ಸೆಕ್ಷನ್ ಆಫೀಸ್‌ರ್‌ಗಳಿಗೆ ಒಂದೊಂದು ಕಂಪ್ಯೂಟರನ್ನು ಕೊಡಿಸಿದೆವು, ಪ್ರತಿಯೊಬ್ಬರೂ ನನಗೆ ಫೈಲ್ ಕಳುಹಿಸಿ ಕೊಡುತ್ತಿದ್ದು ಇ-ಮೇಲ್ ಮುಖಾಂತರ. ಆಗ, ಟೈಂಸ್‌ಆಫ್ ಇಂಡಿಯಾದಲ್ಲಿ ಮಾಚಯ್ಯ ಎನ್ನುವರು ಬರೆದರು, ಈಗ ಹೇಳಿ ಕಂಪ್ಯೂಟರೈಸೇಷನ್ ವಿಷಯದಲ್ಲಿ ನಿಜವಾಗಿ ಯಾರು ಕ್ರೆಡಿಟ್ ತೆಗೆದುಕೊಳ್ಳಬೇಕಾಗಿದೆ? ಅನ್‌ಫಾರ್ಚುನೇಟಲಿ, ನಾನು ಮುಖ್ಯಮಂತ್ರಿಯಾಗಿರಲಿಲ್ಲ,ಆದ್ದರಿಂದ ನನಗೆ ಕ್ರೆಡಿಟ್‌ಸಿಗಲಿಲ್ಲ, ಮುಖ್ಯಮಂತ್ರಿಯಾದರೆ ಯಾರು ಏನು ಬೇಕಾದರೂ ಬರೆಯುತ್ತಾರೆ, ಆದ್ದರಿಂದ, ದಯವಿಟ್ಟು ನೀವು ಅದನ್ನು, ನಾವು ಮಾಡಿದ್ದು ಎಂದು ಕ್ರೆಡಿಟ್ ತೆಗೆದು ಕೊಳ್ಳಬೇಡಿ, ಯಾರು ಮಾಡಿದ್ದಾರೋ,ಅವರಿಗೆ ಕ್ರೆಡಿಟ್ ಕೊಡಿ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಸರ್ಕಾರ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿರುವಂಥ ಸಂದರ್ಭದಲ್ಲಿ ಅದನ್ನು ಮೆಚ್ಚಿಕೊಳ್ಳಬೇಕಾದುದು ವಿರೋಧ ಪಕ್ಷದವರ

ಮಾಡುತ್ತಿರುವಂಥ ಸಂದರ್ಭದಲ್ಲಿ ಅದನ್ನು ಮೆಚ್ಚಿಕೊಳ್ಳಬೇಕಾದುದು ವಿರೋಧ ಪಕ್ಷದವರ ಕರ್ತವ್ಯ. ಸರ್ಕಾರ ಎಲ್ಲಿ ತಪ್ಪು ಮಾಡುತ್ತಿದೆ, ಅದನ್ನು ತಿದ್ದತಕ್ಕಂಥಾದ್ದು ತಮ್ಮ ಜವಾಬ್ದಾರಿ. ಒಂದು ಕಾರ್ಯಕ್ರಮವನ್ನು ಅನುಷ್ಠಾನ ಮಾಡಿದಂಥ ಈ ಸರ್ಕಾರಕ್ಕೆ, ಹೌದು, ನೀವು ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡಿದಿರಿ, ಈ ಕಾರ್ಯಕ್ರಮದಿಂದ ಶ್ರೀ ಸಾಮಾನ್ಯನಿಗೆ ಅನುಕೂಲವಾಗಿದೆ ಎಂದು ಹೇಳತಕ್ಕಂಥ ದೊಡ್ಡ ಮನಸ್ಸು ತಮ್ಮಲ್ಲಿಲ್ಲ ಎಂದರೆ,I cannot understand Your logic.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇವರಿಗೆ ಆ ದೊಡ್ಡ ಮನಸ್ಸು ಇಲ್ಲದೇ ಇರಬಹುದು, ಹಿಂದೆ ಐ.ಟಿ. ಮಿನಿಸ್ಟರ್ ಆಗಿದ್ದಂಥ ಶ್ರೀ ಪ್ರಮೋದ್ ಮಹಾಜನ್ ಅವರು ಇಂಡಿಯಾ ದೇಶದ ಎಲ್ಲಾ ರೆವಿನ್ಯೂ ಸೆಕ್ರೆಟರಿಗಳು ಸಮ್ಮೇಳನವನ್ನು ಎರಡು ತಿಂಗಳ ಕೆಳಗೆ ಡೆಲ್ಲಿಯಲ್ಲಿ ಮಾಡಿದರು, ಆಗ ಅಲ್ಲಿ ಕರ್ನಾಟಕದ ಭೂಮಿ ಕಾರ್ಯಕ್ರಮವನ್ನು ನೀವು ಪ್ರದರ್ಶನ ಮಾಡಿ ಏಕೆಂದರೆ ಮಿಕ್ಕ ರಾಜ್ಯಗಳು ಇದನ್ನು ಅನುಕರಣೆ ಮಾಡಬೇಕೆಂದು ಹೇಳಿದರು, ಅದನ್ನು ಕೋಟ್ ಮಾಡಿ ಸಾಕು, ಇವರದು ಕೋಟ್ ಮಾಡಬೇಕಾದ್ದೇನೂ ಇಲ್ಲ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಯವರು ಮಾಹಿತಿ ತಂತ್ರಜ್ಞಾನವನ್ನು ಈ ರಾಜ್ಯ ಜನಸಾಮಾನ್ಯರಿಗೆ ತಲುಪಿಸಬೇಕೆನ್ನುವ ಚಿಂತನೆಯನ್ನು ಮಾಡಿ, ಈ ಭೂಮಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿ ಅದರ ಯಶಸ್ಸನ್ನು ಇವತ್ತು ಈ ರಾಷ್ಟ್ರದ ಪ್ರಧಾನಮಂತ್ರಿಗಳು ಬೇರೆ ಎಲ್ಲಾ ರಾಜ್ಯಗಳು ಕೂಡ ಇದನ್ನು ಅನುಕರಣೆ ಮಾಡಬೇಕೆನ್ನುವ ಆದೇಶವನ್ನು ಇಟ್ಟಿರತಕ್ಕಂಥ ಸತ್ಯ ಇವತ್ತು ನಮ್ಮ ಮುಂದಿದೆ, ಇದರಲ್ಲಿ ಪುನಃ ರಾಜಕೀಯವನ್ನು ಬೆರೆಸಿ ಇದರ ಕ್ರೆಡಿಟ್ ಅವರಿಗೆ ಹೋಯಿತು ಇವರಿಗೆ ಹೋಯಿತು ಎನ್ನುವುದು ಬೇಡ, ಇದು ಜನರಿಗೆ ಗೊತ್ತಿರತಕ್ಕಂಥ ಮಾಹಿತಿ. ಮಾಹಿತಿ ತಂತ್ರಜ್ಞಾನದಲ್ಲಿ ಮಾನ್ಯ ಕೃಷ್ಣ ಅವರ ಸರ್ಕಾರ ಇಡೀ ರಾಜ್ಯದಲ್ಲಿ ಅಲ್ಲ ಇಡೀ ವಿಶ್ವದಲ್ಲಿ ಒಂದು ಶಾಧನೆಯನ್ನು ಮಾಡಿದೆ, ಬೆಂಗಳೂರನ್ನು ವಿಶ್ವದ ಭೂಪಟದಲ್ಲಿ ಗುರುತಿಸತಕ್ಕಂಥ ಕೆಲಸ ಶ್ರೀ ಕೃಷ್ಣ ಅವರ ಸರ್ಕಾರದಿಂದ ಆಗಿದೆ ಎನ್ನುವ ಸತ್ಯವನ್ನು ಇಡೀ ದೇಶದ ಜನತೆಗೆ, ಇಡೀ ವಿಶ್ವದ ಜನತೆಗೆ ಗೊತ್ತಿದೆ, ಮಾಹಿತಿ ತಂತ್ರಜ್ಞಾನದ ಬಗ್ಗೆ ಕಾನ್‌ಫರೆನ್ಸ್ ಆಗಿದೆ.International conferences were held in Bangalore.ಅನೇಕ ಗಣ್ಯರು, ಈ ಮಾಹಿತಿ ತಂತ್ರಜ್ಞಾನದ ದಿಗ್ಗಜಗಳು ಬಂದು ಇಲ್ಲಿ ಆಗಿರತಕ್ಕಂಥ ಸಾಧನೆಯನ್ನು ಹೊಗಳಿದ್ದಾರೆ, ಆದ್ದರಿಂದ ನಾವು ನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ ಸಾಧನೆಯ ಬಗ್ಗೆ ನಾವು ಹೆಮ್ಮೆ ಪಡಬೇಕು. ಈ ಮಾಹಿತಿ ತಂತ್ರಜ್ಞಾನ ಶ್ರೀಸಾಮಾನ್ಯರಿಗೆ ತಲುಪಿರತಕ್ಕಂಥ ಒಂದು ಹಂತ ಆಗಿದೆ, ಇನ್ನು ಗ್ರಾಮೀಣ ಮಕ್ಕಳಿಗೆ ಒಂದು ಸಾವಿರ ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ತರಬೇತಿ ಶಿಕ್ಷಣವನ್ನು ನೀಡತಕ್ಕಂಥ ಕೆಲಸ ಈ ಸರ್ಕಾರದಿಂದ ಆಗಿದೆ, ತಮಗೆಲ್ಲಾ ಒಂದು ಆಶ್ಚರ್ಯ ಆಗಬಹುದು, ನನ್ನ ಕ್ಷೇತ್ರದಲ್ಲಿ ಪಟ್ಟಣದಿಂದ ಸುಮಾರು 25 ಕಿಲೋಮೀಟರ್ ಒಳಗಡೆ ಇರತಕ್ಕಂಥ ಒಂದು ಕುಗ್ರಾಮಕ್ಕೆ ನಮ್ಮ ಶಿಕ್ಷಣ ಸಚಿವರಾದಂಥ ಪ್ರೊ, ಚಂದ್ರಶೇಖರ್ ಅವರನ್ನು ಒಂದು ಕಾರ್ಯಕ್ರಮಕ್ಕೆ ಕರೆದುಕೊಂಡು ಹೋಗಿದ್ದೆವು,He was immensely pleased.ಹರಕಲು ಚಡ್ಡಿ ಹಾಕಿಕೊಂಡಿರತಕ್ಕಂಥ ಹುಡುಗರು ಕಂಪ್ಯೂಟರ್ ಮುಂದೆ ಕುಳಿತುಕೊಂಡು ಆ ಕಂಪ್ಯೂಟರ್‌ನ್ನು ಕಲಿಯುತಿರತಕ್ಕಂಥದ್ದನ್ನು ಅವರು ನೋಡಿ, ಇದು ಶ್ರೀ ಕೃಷ್ಣ ಅವರ ಸಾಧನೆ, ಇವತ್ತು ಮಾಹಿತಿ ತಂತ್ರಜ್ಞಾನದ ಬಗ್ಗೆ ಈ ಹಳ್ಳಿಯ ಬಡ ಮಕ್ಕಳಿಗೂ ಕೂಡ ಆ ಮಾಹಿತಿ

ತಂತಜ್ಞಾನವನ್ನು ಗ್ರಾಮಮಟ್ಟದಲ್ಲಿ ಕುಳಿತುಕೊಂಡು ತಿಳಿದುಕೊಳ್ಳತಕ್ಕಂಥದ್ದು, ಇಡೀ ವಿಶ್ವದಲ್ಲಿಯೇ ಏನೇನು ಆಗುತ್ತಿದೆ ಅದನ್ನು ತಿಳಿದು ಕೊಳ್ಳತಕ್ಕಂಥ ಸವಲತ್ತನ್ನು ಅಂಥ ಕುಗ್ರಾಮಗಳಿಗೆ ತಲುಪಿಸಿರತಕ್ಕಂಥ ಕೀರ್ತಿ ಇವತ್ತು ಈ ಸರ್ಕಾರಕ್ಕೆ ಸೇರಬೇಕಾಗಿದೆ, ಅದನ್ನು ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳುತ್ತಾರೆ, ಆದ್ದರಿಂದ ಮಾಹಿತಿ ತಂತ್ರಜ್ಞಾನ ಇದು ಪಟ್ಟಣ ಪ್ರದೇಶ ನಗರ ಪ್ರದೇಶಗಳಿಗೆ ಸೀಮಿತವಾಗಿಲ್ಲ. ಇದು ಗ್ರಾಮೀಣ ಪ್ರದೇಶಕ್ಕೂ ಹೇಗಿದೆ, ಶ್ರೀ ಸಾಮಾನ್ಯರಿಗೆ ತಲುಪಿದೆ, ಬಡ ಮಕ್ಕಳಿಗೆ ತಲುಪಿದೆ, ತನ್ಮೂಲಕ ಇದರ ಉದ್ದೇಶ ಈ ಮಾಹಿತಿ ತಂತ್ರಜ್ಞಾನ ರಾಜ್ಯದ ಬಡವರಿಗೂ ತಲುಪಬೇಕು ಎನ್ನುವ ಸರ್ಕಾರದ ಚಿಂತನೆ ಏನಿದೆ ಆಸೆ ಏನಿದೆ, ಆ ಆಸೆ ಮತ್ತು ಚಿಂತನೆ ಇವತ್ತು ಈಡೇರಿಸಿದೆ ಎಂದು ನಾನಾದರೂ ಕೂಡ ಭಾವನೆ ವ್ಯಕ್ತಪಡಿಸುತ್ತೇನೆ. ಆದರೆ ನಾವು ಇದಿಷ್ಟಕ್ಕೇ ತೃಪ್ತಿಪಡಬೇಕಾದ ಸ್ಥಿತಿಯಲ್ಲಿ ಇಲ್ಲ. ಇನ್ನೂ ಕೂಡ ಇದರ ಉಪಯೋಗ ಹೆಚ್ಚು ಹೆಚ್ಚಿಗೆ ಆಗಬೇಕು. We are in the world of competition. ಎಲ್ಲಾ ರಂಗಗಳಲ್ಲಿಯೂ ಕೂಡ ಸ್ಪರ್ಧೆ ಇದೆ. ಈ ಸ್ಪರ್ಧಾತ್ಮಕ ಪ್ರಪಂಚದಲ್ಲಿ ನಮ್ಮ ಗ್ರಾಮೀಣ ಮಕ್ಕಳು ಅಂದರೆ ಹಳ್ಳಿಯಲ್ಲಿರತಕ್ಕಂಥವನ್ನು ಆಚೆಗೆ ಬರಬೇಕು. ಕೆಂಪನಹಳ್ಳಿಯ ಶಾಲೆಯಲ್ಲಿ ಓದತಕ್ಕಂಥ ಹುಡುಗ ಬೆಂಗಳೂರಿನ ಸೋಫಿಯಾ ಕಾನ್ವೆಂಟ್‌ನಲ್ಲಿ ಒದುತ್ತಿರತಕ್ಕಂಥ ಹುಡುಗನ ಜೊತೆಯಲ್ಲಿ ಸ್ಪರ್ಧೆ ಮಾಡಬೇಕಾಗುತ್ತದೆ. ನಾವು ಇಂಥ ಸೌಲಭ್ಯವನ್ನು ಅವರಿಗೆ ಕೊಡದೇ ಹೋದರೆ ಅವರು ಯಾವ ರೀತಿ ಪಟ್ಟಣದ ಹುಡುಗರ ಜೊತೆಯಲ್ಲಿ ಸ್ಪರ್ಧೆ ಮಾಡುವುದಕ್ಕೆ ಸಾಧ್ಯ ? ಆದ್ದರಿಂದ ಇಂಥ ಸವಲತ್ತನ್ನು ಕೊಟ್ಟಾಗ ಹಳ್ಳಿಯ ಹುಡುಗರು ಪಟ್ಟಣದ ಹುಡುಗರ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡಬಹುದೆನ್ನುವ ಆಸೆಯನ್ನು ನಾವು ಇಟ್ಟುಕೊಳ್ಳಬಹುದು. ಆದ್ದರಿಂದ ಈ ಮಾಹಿತಿ ತಂತ್ರಜ್ಞಾನ ಪಟ್ಟಣ ಮತ್ತು ನಗರ ಪ್ರದೇಶದಲ್ಲಿರತಕ್ಕಂಥ ಜನತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಮಾಡಿರತಕ್ಕಂಥದ್ದು ಅಲ್ಲ, ಇವತ್ತು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಕಡುಬಡವನ ಕುಟುಂಬವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮಾಹಿತಿ ತಂತ್ರಜ್ಞಾನದ ಉಪಯೋಗವನ್ನು ಅವನಿಗೆ ತಲುಪಿಸತಕ್ಕಂಥ ದಿಶೆಯಲ್ಲಿ ನಾವು ಕಾರ್ಯೋನ್ಮುಖರಾಗಬೇಕಾಗುತ್ತದೆ, ಇದು ಈ ಸರ್ಕಾರದ ಸಾಧನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಶಿಕ್ಷಣದಲ್ಲಿ ದೊಡ್ಡ ಸಾಧನೆಯಾಗಿದೆ ಎನ್ನುವ ಭಾವನೆಯನ್ನು ನಾನು ವ್ಯಕ್ತಮಾಡುತ್ತೇನೆ. ಸಂಪೂರ್ಣ ಸಾಕ್ಷರತೆಯ ಬಗ್ಗೆ ನಾವು ಮಾತನಾಡಿದ್ದೇವೆ, ಸಂಪೂರ್ಣ ಸಾಕ್ಷರತೆ ಆಗಿದೆ, ಆಗುತ್ತಿದೆ, ಸಾಕ್ಷರತೆಗೋಸ್ಕರ ಕೋಟ್ಯಾಂತರ ರೂಪಾಯಿ ಖರ್ಚಾಗಿದೆ, ಇಷ್ಟೆಲ್ಲಾ ಆದರೂ ಕೂಡ 6 ಲಕ್ಷದ 66 ಸಾವಿರ ಮಕ್ಕಳು ಇನ್ನೂ ಶಾಲೆಗೆ ಹೋಗಿಲ್ಲ, ಡ್ರಾಪ್‌ಔಟ್ಸ್ ಇದ್ದಾರೆಂದರೆ ಇವತ್ತು ನಾವೆಲ್ಲರೂ ಕೂಡ ನಾಚಿಕೆ ಪಡಬೇಕಾದಂಥ ವಿಷಯವಾಗಿದೆ, ಈ 6 ಲಕ್ಷದ 66 ಸಾವಿರ ಮಕ್ಕಳು ಏನು ಶಾಲೆಗೆ ಹೋಗಲಿಲ್ಲ, ಆ ಮಕ್ಕಳನ್ನು ಪುನಃ ಶಾಲೆಗೆ ಸೇರಿಸತಕ್ಕಂಥ ಕೆಲಸ ಈ ಸರ್ಕಾರದಿಂದ ನಡೆದಿದೆ. ಅದಕ್ಕಾಗಿ ಕಾರ್ಯಕ್ರಮಗಳು ಯೋಜನಗೆಳು ಚಿಣ್ಣರ ಅಂಗಳ.. ಬಾ ಮರಳಿ ಶಾಲೆಗೆ ಮತ್ತು ಈಶಾನ್ಯ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಸುಮಾರು 7ಜಿಲ್ಲೆಗಳಲ್ಲಿ ಬಡ ಮಕ್ಕಳಿಗೆ ಬಿಸಿ ಊಟದ ಕಾರ್ಯಕ್ರಮ ಇಂಥ ಯೋಜನೆಗಳನ್ನು ಮಾಡಲಾಗಿದೆ, ಇವೆಲ್ಲ ಕಾರ್ಯಕ್ರಮಗಳ ಸಾಧನೆ ನಮ್ಮ ಮುಂದೆ ಇದೆ, ಇವತ್ತು 6 ಲಕ್ಷದ 66 ಸಾವಿರ ಡ್ರಾಪೌಟ್ಸ್ ಮಕ್ಕಳು ಏನಿದ್ದರು ಅದರಲ್ಲಿ ಶೇಕಡ 50 ಭಾಗ ಮಕ್ಕಳು ಪುನಃ ಶಾಲೆಗೆ ಸೇರಿದ್ದಾರೆ, ಶಾಲೆಯನ್ನು ಬಿಟ್ಟು ಹೋಗಿರತಕ್ಕಂಥ ಮಕ್ಕಳನ್ನು ಪುನಃ ಶಾಲೆಗೆ ಸೇರಿಸಬೇಕು, ಸಂಪೂರ್ಣ ಸಾಕ್ಷರತೆಯನ್ನು ನಮ್ಮ ರಾಜ್ಯದಲ್ಲಿ ಉಂಟುಮಾಡಬೇಕೆನ್ನುವ

ದಿಶೆಯಲ್ಲಿ ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳು ಯಶಸ್ಸನ್ನು ಕಾಣುತ್ತಿವೆ. ಶೇಕಡ 50 ರಷ್ಟು ಡ್ರಾಪ್‌ಔಟ್ಸ್ ಪುನಃ ಶಾಲೆಗೆ ಬಂದಿದ್ದಾರೆ ಹಾಗೆಯೇ ಎಲ್ಲಾ ಶಾಲೆಗಳಿಗೆ ಶಾಲಾ ಅಭಿವೃದ್ಧಿ ಸಮಿತಿಯನ್ನು ಮಾಡತಕ್ಕಂಥ ಕೆಲಸ ಇವತ್ತು ಆಗಿದೆ, ಶಾಲಾ ಅಭಿವೃದ್ಧಿ ಸಮಿತಿಗಳು ಸುಮ್ಮನೆ ಕುಳಿತುಕೊಂಡಿಲ್ಲ.They have become very active, They are discharging their duties very effectively.ಪೋಷಕರು ಇವತ್ತು ಸುಮ್ಮನೆ ಕುಳಿತುಕೊಳ್ಳಲಿಲ್ಲ, ಶಿಕ್ಷಕ ಏನು ಪಾಠ ಮಾಡುತ್ತಿದ್ದಾನೆ, ಎಲ್ಲಿ ತಪ್ಪು ಮಾಡುತ್ತಿದ್ದಾನೆ, ಅವನು ಸರಿಯಾಗಿ ಶಾಲೆಗೆ ಬರುತ್ತಿದ್ದಾನೆಯೇ ಅಥವಾ ಇಲ್ಲವೇ? ಶಾಲೆಗಳಲ್ಲಿ ಸೌಲಭ್ಯಗಳ ಕೊರತೆಗಳು ಏನಿವೆ ಶಾಲೆಯಲ್ಲಿರತಕ್ಕಂಥ ಮೂಲಭೂತ ಸೌಕರ್ಯಗಳನ್ನು ಎಲ್ಲಾ ರೀತಿಯಲ್ಲಿ ಕೊಡಲಿಕ್ಕೆ ಪೋಷಕರ ಜವಾಬ್ದಾರಿ ಏನಿದೆ, ಸರ್ಕಾರದ ಜವಾಬ್ದಾರಿ ಏನಿದೆ, ಇವೆಲ್ಲವನ್ನೂ ಕೂಡ ಅವರು ಅರ್ಥಮಾಡಿಕೊಂಡು ಶಾಲಾಭಿವೃದ್ಧಿ ಸಮಿತಿಗಳು ಅತ್ಯಂತ ಜವಾಬ್ದಾರಿಯುತವಾಗಿ ಕೆಲಸವನ್ನು ನಿರ್ವಹಿಸುವುದರ ಮೂಲಕ ಸರ್ಕಾರ ಶಿಕ್ಷಣಕ್ಕೆ ಅತೀ ಹೆಚ್ಚಿನ ಮಹತ್ವವನ್ನು ಕೊಡಬೇಕೆಂದು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಆದರಲ್ಲಿ ನಾವು ಯಶಸ್ಸನ್ನು ಕಾಣುತ್ತಿದ್ದೇವೆ, ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.ಇನ್ನು ಸಾಮಾಜಿಕ ನ್ಯಾಯದ ಬಗ್ಗೆ ನಾವು ಅನೇಕ ಸಲ ಮಾತನಾಡುತ್ತೇವೆ. ಕಾಂಗ್ರೆಸ್ ಪಕ್ಷ ಈ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಜನತೆಗೆ ಸಾಮಾಜಿಕ ನ್ಯಾಯವನ್ನು ಒದಗಿಸುವುದರಲ್ಲಿ ಯಾವತ್ತೂ ಕೂಡ ಮುಂದಿದೆ, ಅವರಿಗೆ, ಆ ಪಕ್ಷಕ್ಕೆ ಎರಡನೇ ಸ್ಥಾನ ಇಲ್ಲವೇ ಇಲ್ಲ, ಆ ಪಕ್ಷಕ್ಕೆ ಯಾವತ್ತೂ ಕೂಡ ಮೊದಲನೇ ಸ್ಥಾನ. ನಾನು ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ಆದರೆ ಈ ಸರ್ಕಾರದಲ್ಲಿ ಆಗಿರತಕ್ಕಂಥ ಒಂದು ಅತ್ಯುತ್ತಮವಾದ ಸಾಧನೆ ಬಗ್ಗೆ ಮಾನ್ಯ ರಾಜ್ಯಪಾಲರು ಕೂಡ ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ಈ ರಾಜ್ಯದಲ್ಲಿ 16 ಸಾವಿರದ 648 ಬ್ಯಾಕ್‌ಲಾಗ್ ಹುದ್ದೆಗಳನ್ನು ನಾವು ತುಂಬಬೇಕಾಯಿತು. ಈ ಬ್ಯಾಕ್‌ಲಾಗ್ ಹುದ್ದೆಗಳು ಇವತ್ತು ನಿನ್ನೆಯದಲ್ಲ. ಇದು ಬಹಳ ದಿವಸಗಳಿಂದ ಅಗತ್ಯವಾಗಿ ತುಂಬಲೇಬೇಕಾದಂಥ ಬ್ಯಾಕ್‌ಲಾಗ್ ಹುದ್ದೆಗಳನ್ನು ಹಿಂದಿನ ಸರ್ಕಾರಗಳು ತುಂಬತಕ್ಕಂಥ ಪ್ರಯತ್ನವನ್ನು ಮಾಡಲೇ ಇಲ್ಲ. ಸಾಮಾಜಿಕ ನ್ಯಾಯದ ಬಗ್ಗೆ ಹೆಚ್ಚು ಹೆಚ್ಚು ಮಾತನಾಡಿದಂಥ ಜನ ಸಾಮಾಜಿಕವಾಗಿ ನ್ಯಾಯವನ್ನು ಕೊಡತಕ್ಕಂಥ ದಿಶೆಯಲ್ಲ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಿಲ್ಲ ಆದರೆ ಈ ಸರ್ಕಾರ ಇವತ್ತು 16, 648 ಬ್ಯಾಕ್‌ಲಾಗ್ ಹುದ್ದೆಯಲ್ಲಿ ಈಗಾಗಲೇ 13,160 ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬತಕ್ಕಂಥ ಕೆಲಸವನ್ನು ಮಾಡಿದೆ, ಇದು ಸಾಮಾಜಿಕ ನ್ಯಾಯವನ್ನು ಜನತೆಗೆ ಒದಗಿಸಬೇಕು, ನೊಂದ ಜನಗಳಿಗೆ ನ್ಯಾಯವನ್ನು ಕೊಡಬೇಕು, ನೊಂದ ಜನರ ಕಣ್ಣೀರನ್ನು ಒರೆಸಬೇಕು, ಅವರ ಕುಟುಂಬಗಳಿಗೆ ಆಶ್ರಯವನ್ನು ಕೊಡಬೇಕು ಎನ್ನುವಂಥ ಒಂದು ಚಿಂತನೆಯನ್ನು ಈ ಸರ್ಕಾರ ಮಾಡುತ್ತಾ ಇದೆ ಎನ್ನುವುದಕ್ಕೆthe interest they have evinced in filling up these backlog vacancies ಎನ್ನುವುದಕ್ಕೆ ಇದು ಒಂದು ನಿದರ್ಶನವಾಗಿದೆ.

3.30 ಪಿಎಂ

ಆದುದರಿಂದ ಸರ್ಕಾರ ಬ್ಯಾಕ್‌ಲಾಗ್ ಹುದ್ದೆಯನ್ನು ಇಷ್ಟೊಂದು ಕಡಿಮೆ ಅವಧಿಯಲ್ಲಿ ತುಂಬುವ ಪ್ರಯತ್ನವೇನಿದೆ, ಅದರ ಜೊತೆಗೆ ನಾವು ಇತ್ತೀಚೆಗೆ ಬಡ್ತಿಯಲ್ಲಿ ಮೀಸಲಾತಿಯನ್ನು ಕೊಡುವ ಬಗ್ಗೆ ಇಡೀ ರಾಷ್ಟ್ರದಾದ್ಯಂತ ಅದಕ್ಕೆ ಅನೇಕ ವ್ಯಾಖ್ಯಾನಗಳನ್ನು ನಡೆದು ಪರ, ವಿರೋಧ ವ್ಯಾಖ್ಯಾನಗಳನ್ನು ನಡೆದು ಅದು ಎಲ್ಲಿಗೆ ಹೋಯಿತೆಂದರೆ, ಕೊನೆಗೆ ನಾವು ಸಂವಿಧಾನಕ್ಕೆ

ತಿದ್ದುಪಡಿ ತಂದು ನೊಂದ ಜನರಿಗೆ ನ್ಯಾಯ ಕೊಡಬೇಕು, ಬಡ್ತಿಯಲ್ಲಿ ಅವರಿಗೆ ನ್ಯಾಯ ಕೊಡಬೇಕು, ಮೀಸಲಾತಿ ಕೊಡಬೇಕೆನ್ನುವ ಬಗ್ಗೆ ಚಿಂತನೆ ನಡೆದ ಸಂದರ್ಭದಲ್ಲಿ ಅದಕ್ಕೆ ತತ್‌ಸಂಬಂಧವಾದ ಒಂದು ಕಾನೂನನ್ನು ನಾವು ಇಲ್ಲಿ ತಂದು ಬಡ್ತಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸುವ ಕೆಲಸ ಈ ಸರ್ಕಾರದಿಂದಾಗಿದೆ,ಆದುದಿರಂದ, ಇವೆಲ್ಲವನ್ನು ನಾವು ದೃಷ್ಟಿಯಲ್ಲಿಟ್ಟುಕೊಂಡು ನೋಡಿದಾಗ, ಸರ್ಕಾರ ಸಾಮಾಜಿಕ ನ್ಯಾಯ ಒದಗಿಸುವುದಕ್ಕೆ ಬದ್ಧವಾಗಿದೆ. ಸರ್ಕಾರದ ಕಾಳಜಿ ಅರ್ಥವಾಗುತ್ತದೆ ಎಂಬುವ ಮಾತನ್ನು ಹೇಳುತ್ತಾ ಮಾನ್ಯ ಗೌರವಾನ್ವಿತ ರಾಜ್ಯಪಾಲರು ಕೂಡ ತಮ್ಮ ಭಾಷಣದಲ್ಲಿ ಅದನ್ನು ಹೇಳುತ್ತಾರೆ. ರಸ್ತೆಗಳ ಅಭಿವೃದ್ಧಿ ಬಗ್ಗೆ ಬಹುಶಃ ನನ್ನ ಎಲ್ಲಾ ಸ್ನೇಹಿತರು ಕೂಡ ಒಂದು ಸಮಾಧಾನ, ತೃಪ್ತಿಯನ್ನು ವ್ಯಕ್ತಪಡಿಸುತ್ತಾರೆಂದು ನಾನಂದುಕೊಂಡಿದ್ದೇನೆ. This progress is not on paper, you can see the progress in our constituencies, ರಸ್ತೆಗಳ ಸುಧಾರಣೆ ಇಡೀ ರಾಜ್ಯದಲ್ಲಿ ಆಗಿದೆ, ಬೀರೂರು ಕ್ಷೇತ್ರದಲ್ಲಿ, ಇನ್ನೊಂದು ಕ್ಷೇತ್ರದಲ್ಲಾಗಲಿಲ್ಲ, ಇವತ್ತು ರಾಜ್ಯ ಹೆದ್ದಾರಿಗಳು ಮರು ಡಾಂಬರೀಕರಣ ಮಾಡುವುದು ಇಡೀ ರಾಜ್ಯದಲ್ಲಿ ಆಗಿದೆ, ರಾಷ್ಟ್ರೀಯ ಹೆದ್ದಾರಿಗಳನ್ನು ಸುಧಾರಣೆ ಮಾಡುವುದಾಗಿದೆ, ಮುರಿದು ಹೋದ ಸೇತುವೆಗಳ ಪುನರ್ ನಿರ್ಮಾಣ ಮಾಡಲಾಗಿದೆ, ಆ ರಸ್ತೆಗಳ ಬಗ್ಗೆ ಈ ಸಾಧನೆ ಸರ್ಕಾರದ ಸಾಧನೆ, ಅತ್ಯಂತ ತೃಪ್ತಿದಾಯಕವಾಗಿದೆ ಎನ್ನುವ ಮಾತಿಗೆ ಬಹುಶಃ ಯಾವ ಸ್ನೇಹಿತರೂ ವಿರೋಧ ವ್ಯಕ್ತಪಡಿಸಲಾರರು ಎನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುತ್ತೇನೆ. ವಿದ್ಯುತ್ ಸಮಸ್ಯೆ ಬಗ್ಗೆ ಈಗಾಗಲೇ ಬೆಳಿಗ್ಗೆ ಮಾತನಾಡುವ ಸಂದರ್ಭದಲ್ಲಿ ಜಲ ವಿದ್ಯುತ್ತಿನಲ್ಲಿ ನಾವು ವೈಫಲ್ಯತೆಯನ್ನು ಕಂಡಿರುವುದು ಪ್ರಕೃತಿ ವಿಕೋಪದಿಂದ. ಪ್ರಕೃತಿ ನಮ್ಮಮೇಲೆ ಮುನಿಸಿಕೊಂಡಾಗ ನಾವು ಅನೇಕ ಸಮಸ್ಯೆಗಳನ್ನೆದುರಿಸಬೇಕಾಗುತ್ತದೆ. ಅದರಲ್ಲಿ ಪ್ರಮುಖವಾಗಿ ಈ ರಾಜ್ಯ ಸಂಪೂರ್ಣವಾಗಿ ವಿದ್ಯುತ್ತಿಗೆ ಜಲ ವಿದ್ಯುತ್ ಅನ್ನು ನಂಬಿಕೊಂಡಿದೆ, ಅದಕ್ಕೆ ಭಾರೀ ದೊಡ್ಡ ಏಟು ಬಿತ್ತು, ಆ ದಿಸೆಯಲ್ಲಿ ನೀರಿಲ್ಲದೇ ಹೋದರೆ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದಿಲ್ಲ, ಈ ಒಂದು ಸಮಸ್ಯೆ ನಿರಂತರವಾಗಿ ನಮ್ಮನ್ನು ಕಾಡುತ್ತಿದೆ, ಈ ಸಮಸ್ಯೆಗೆ ಸ್ವಲ್ಪಮಟ್ಟಿಗಾದರೂ ಪರಿಹಾರ ಕಂಡುಹಿಡಿಯಲು ನನ್ನ ಚಿಂತನೆ ಏನಿದೆ ಬಹುಶಃ ಇದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಾನಂದುಕೊಂಡಿದ್ದೇನೆ. ಈ ರಿನ್ಯೂವಬಲ್ ಪುನಃ ನವೀಕರಿಸಬಹುದಾದ ಇಂಧನ ಯೋಜನೆ, ಇದು ಗಾಳಿಯಿಂದಿರಬಹುದು, ಕಿರು ಜಲವಿದ್ಯುತ್ ಯೋಜನೆಗಳಿರಬಹುದು, ಕೋ ಜನರೇಷನ್ (ಸಹೋತ್ಪಾದನೆ) ಇರಬಹುದು ಅಥವಾ ಜೈವಿಕ ಮೂಲದಿಂದ ನಾವು ಉತ್ಪಾದನೆ ಮಾಡುವುದಿರಬಹುದು. ಎಲ್ಲೆಲ್ಲಿ ನಾವು ಈ ಒಂದು ರಿನ್ಯೂವಬಲ್ ಎನರ್ಜಿಯಡಿಯಲ್ಲಿ ಸಣ್ಣ ಸಣ್ಣದಾಗಿ ಯೋಜನೆಗಳನ್ನು ಮಾಡಿಕೊಂಡು ಆಯಾಯ ಪ್ರದೇಶಗಳಲ್ಲಿ ಸಮಸ್ಯೆಗಳನ್ನು ಪರಿಹರಿಸುವ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೆ ಸಂಪೂರ್ಣವಾಗಿ ನಾವು ನಮ್ಮ ದೊಡ್ಡ ದೊಡ್ಡ ಜಲಾಶಯಗಳು ತುಂಬಿ ಆದರಿಂದ ನಾವು ಜಲವಿದ್ಯುತ್ ಉತ್ಪಾದನೆ ಪಡೆದುಕೊಂಡು ವಿದ್ಯುತ್ ಸಮಸ್ಯೆ ಪರಿಹಾರ ಮಾಡುತ್ತೇವೆಂದು ಪ್ರಯತ್ನಿಸಿದರೆ ಬಹುಶಃ ಕಷ್ಟವಾಗುತ್ತದೆ.ಆದುದರಿಂದ,ಇವತ್ತು ಸರ್ಕಾರದ ಚಿಂತನೆ ಕೂಡ ಅದಿದೆ, ನಾವು ಪುನಃ ನವೀಕರಿಸಬಹುದಾಂಥ ಇಂಧನ ಯೋಜನೆಗಳೇನಿವೆ ಅದರ ಬಗ್ಗೆ ಹೆಚ್ಚು ಒತ್ತು ಕೊಡಬೇಕಾದ ಅಗತ್ಯಕತೆ ಮತ್ತು ಅನಿವಾರ್ಯತೆಯನ್ನು ನಾವು ಕಾಣುತ್ತಿದ್ದೇವೆ, ಪದೇ ಪದೇ ಇವತ್ತು ಈ ರಾಜ್ಯ ಬರಗಾಲದ ಸುಳಿಗೆ ಸಿಕ್ಕಿ ನರಳುತ್ತಿರುವ ಸಂದರ್ಭದಲ್ಲಿ ಅದಕ್ಕೆ ಪರ್ಯಾಯವಾಗಿ ನಾವು ವಿದ್ಯುತ್ ಕ್ಷಾಮವನ್ನು ಎದುರಿಸುವ ಸಂದರ್ಭದಲ್ಲಿ ಪರ್ಯಾಯವಾಗಿ ನಾವು ಕೆಲವು

ಮೂಲಗಳನ್ನು ಕಂಡುಹಿಡಿದು ಅವುಗಳ ಮೂಲಕ ಸ್ವಲ್ಪ ಮಟ್ಟಿಗಾದರೂ ನಾವು ಸಮಾಧಾನವನ್ನು ಮಾಡದೇ ಹೋದರೆ ಮುಂದಿನ ದಿನಗಳಲ್ಲಿ ನಾವು ಕಷ್ಟದ ಪರಿಸ್ಥಿತಿ ಎದುರಿಸಬೇಕಾಗುತ್ತದೆ.

ಶ್ರೀ ಎ. ರಾಮದಾಸ್ : ಗೌರ್ನರ್ ಅಡ್ರೆಸ್ ಮೇಲೆ ಅವರು ಮಾತನಾಡುತ್ತಿರುವ ಸಂದರ್ಭದಲ್ಲಿ ಕೆಲವು ಸ್ವಾಗತಾರ್ಹ ಅಂಶಗಳಿವೆ, ಹೌಸಿಂಗ್‌ನಲ್ಲಿ ತಾವು ಮಾಡಿದ್ದೀರಿ, ಐ.ಟಿ.ಯಲ್ಲಿ ಹೇಳಿದ್ದೀರಿ, ಎಲ್ಲವನ್ನು ನಾವು ವಿರೋಧ ಮಾಡುತ್ತೇವೆನ್ನುವ ಭಾವನೆಯನ್ನು ತಾವು ತೆಗೆದುಕೊಳ್ಳಬೇಡಿ. ಆದರೆ, ವಿದ್ಯುತ್ ಕ್ಷೇತ್ರದ ಬಗ್ಗೆ ಹೇಳುವ ಸಂದರ್ಭದಲ್ಲಿ ಸಭಾ ನಾಯಕರು, ಕಳೆದ ವರ್ಷದಲ್ಲಿ ಒಂದು ಘೋಷಣೆಯನ್ನು ಇಲ್ಲಿ ಮಾಡಿ ಹೇಳಿದರು, ಈ ರಾಜ್ಯದ ರೈತನಿಗೆ 12 ಲಕ್ಷ ಜನ ಯಾರು ರೈತರು ಪಂಪ್‌ಸೆಟ್ ಮೇಲೆ ಅವಲಂಬಿತರಾಗಿದ್ದಾರೆ, ಅವರಿಗೆ ತಡೆರಹಿತವಾಗಿ ಕ್ವಾಲಿಟಿ ಕರೆಂಟ್ ಅನ್ನು ಕೊಡುವುದು ರಾಜ್ಯ ಸರ್ಕಾರದ ಭಾಧ್ಯತೆ. 2002ನೇ ಇಸವಿ ಮೇ 1ನೇ ತಾರೀಖಿನಿಂದ ಇದನ್ನು ಕೊಡುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯ ಎನ್ನುವ ಮಾತನ್ನು ಹೇಳಿದರು. ಅದರಲ್ಲಿ ಸಾಧನೆ ಏನಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿದರೆ ಉಲ್ಲೇಖ. ಹೇಳಬೇಕೆಂದು ಕೇಳುತ್ತಾ, ತಾವು ಇತ್ತೀಚಿನ ಪತ್ರಿಕೆಯಲ್ಲಿ ಇರುವ ಅಂಶವನ್ನು ಹೇಳಬೇಕೆಂದು ಬಯಸುತ್ತೇನೆ. ಪಂಪ್‌ಸೆಟ್ ಬಳಕೆದಾರರಿಗೆ ಶೀಘ್ರವೇ ವಿದ್ಯುತ್ ಶಾಕ್, ರೈತರಿಗೆ ವಿದ್ಯುತ್ ಕೊಡುವುದಿರಲಿ, ಅಂದರೆ, ಇವತ್ತು ಮೀಟರ್‌ಗಳನ್ನು ಅಳವಡಿಸಿ, ಆ ಮೀಟರ್‌ಗಳ ಮೇಲೆ ಎಷ್ಟೆಷ್ಟು ಕರೆಂಟ್ ಅನ್ನು, ಎಷ್ಟೆಷ್ಟು ಯೂನಿಟ್ ಉಪಯೋಗಿಸಿದ್ದಾರೆ, ಅದರ ಆಧಾರದ ಮೇಲೆ ಅವರಿಗೆ ಸಬ್ಸಿಡಿ ಕೊಡುತ್ತೇವೆ ಅಥವಾ ಹಣವನ್ನು ಇಷ್ಟು ಪರ್ಸೆಂಟೇಜ ಅನ್ನು ರಾಜ್ಯ ಸರ್ಕಾರ ಕೊಡುತ್ತದೆ, ಅಂದರೆ ನಾನು ಇವತ್ತು ಕೂಡ ನಿಮ್ಮ ಸರ್ಕಾರದ ವಿಚಾರವನ್ನು ಬೆಂಚು ತಟ್ಟಿ ಸ್ವಾಗತಿಸುತ್ತೇನೆ, ಆದರೆ, ಕೊಡುತ್ತಿರುವುದು, 4 ಎಸ್ಕಾಂಗಳಿಗೆ ಹೇಳಿರುವುದು, ಆಯಾಯ ಮೀಟರ್‌ಗಳನ್ನು ಅಳವಡಿಸಿ, ಆ ಮೀಟರ್‌ಗೆ ಎಷ್ಟು ಯೂನಿಟ್ ಕರೆಂಟ್ ಉಪಯೋಗಿಸಿದ್ದೀರೆಂದು ಹೇಳಿ, ಅವರೇ ಎಂಟ್ರಿ ಮಾಡಿಕೊಳ್ಳಬೇಕು, ಆದಲ್ಲದೆ, ಆ ಹಣವನ್ನು ಅವನೇ ಕಟ್ಟಬೇಕು, ಅದಕ್ಕೆ ಈ ಹಣವನ್ನು ಸರಿಯಾಗಿ ಎಂಟ್ರಿ ಮಾಡಿದ್ದಾನೆಯೋ,ಇಲ್ಲವೋ ಎಂದು ನೋಡುವವರಾರು? ಪ್ರತಿಯೊಂದು ಗ್ರಾಮದಲ್ಲಿ ಎಲ್ಲಾ ಪಕ್ಷದ ಸದಸ್ಯರು, ಲೀಡರ್ಸ್ ಅನ್ನು ಸೇರಿಸಿ ಒಂದು ವಿಚಾರ ಮಾಡುವುದು, ಕಾಂಗ್ರೆಸ್‌ನವರು ಎಷ್ಟು ಉಪಯೋಗಿಸಿದ್ದಾರೆಂದು ಜನತಾದಳದವರು ಹೋಗಿ ಅವರ ಪಂಪ್‌ಸೆಟ್ ನೋಡಿ ಬರಬೇಕು, ಈ ವ್ಯವಸ್ಥೆಗಳು .ಯಾರಿಗೋಸ್ಕರ? ರೈತನಿಗೋಸ್ಕರವೇ ಅಲ್ಲ. ಇದು ಮಾಡಿರುವುದು ಎಸ್ಕಾಂಗಳನ್ನು ಮೊದಲು ಬೆಂಗಳೂರಿನಿಂದ ಶುರು ಮಾಡಿ, ಎಸ್ಕಾಂಗಳ ಡಿಸ್ಟ್ರಿಬ್ಯೂಷನ್ ವಿಚಾರವೇನಿದೆ ಅದನ್ನು ಖಾಸಗಿ ಕಂಪನಿಗಳಿಗೆ ವಹಿಸುವ ಮೊದಲು ಈ ಪುಸ್ತಕಗಳನ್ನು ಕೊಡುವ ಮೂಲಕ ಗದಾ ಪ್ರಹಾರವನ್ನು ಬರುವ ಕಂಪನಿಗಳು 14 ಲಕ್ಷ ಜನ ಯಾರು ಐ.ಪಿ.ಸೆಟ್ ಇಟ್ಟಿದ್ದಾರೆ,ಅವರ ಮೇಲೆ ಗದಾ ಪ್ರಹಾರ ಮಾಡಲಿಕ್ಕೋಸ್ಕರ ಈ ವಿದ್ಯುತ್ ಶಾಕ್ ಬುಕ್ ಕೊಡುತ್ತಿದ್ದೀರಿ, ಇದು ಏಕೆಂದು ಹೇಳಬೇಕು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ರಾಮದಾಸ್‌ರವರು ಜ್ಞಾನಿಗಳು, ವಿದ್ಯುತ್ ಬಗ್ಗೆ ಅಪಾರವಾದ ಅಧ್ಯಯನ ಮಾಡಿದ್ದಾರೆ, ಅನೇಕ ಸಲ ನಾವು ಪೇಪರ್‌ನಲ್ಲಿ ಓದುತ್ತಿರುತ್ತೇವೆ, ಅವರು ನಮ್ಮ ಕಮಿಷನ್ ಮುಂದೆ ಹಾಜರಾಗಿ ನಮ್ಮ ರಾಜ್ಯದ ಸಮಸ್ಯೆಗಳ ಬಗ್ಗೆ ಆಗಾಗ್ಗೆ ವಾದ ಮಾಡುತ್ತಿರುತ್ತಾರೆ. I have got all appreciation for sri Ramdas.ಇಲ್ಲಿ ನಾನೇನು ಹೇಳುತ್ತಿದ್ದೇನೆಂದರೆ, ನಾವು ಜಲವಿದ್ಯುತ್ ಅನ್ನು ಹೆಚ್ಚಿಗೆ ನಂಬಿಕೊಂಡು,

ಅನೇಕ ಸಾರಿ ಈ ಒಂದು ಬರಕ್ಕೆ ಸಿಕ್ಕಿ ನಾವು ಸಮರ್ಪಕವಾಗಿ ವಿದ್ಯುತ್ ಅನ್ನು ಸರಬರಾಜು ಮಾಡುವುದಕ್ಕೆ ಆಗದೇ ಇದ್ದ ಪರಿಸ್ಥಿತಿಯಲ್ಲಿ ಪರ್ಯಾಯವಾಗಿ ಕೆಲವು ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ, ಎಲ್ಲೆಲ್ಲಿ ಸಂಪನ್ಮೂಲಗಳಿವೆ, ಬಯೋ ಮಾಸ್ ಮಾಡಲಿಕ್ಕೆ ಎಲ್ಲೆಲ್ಲಿ ಸಂಪನ್ಮೂಲವಿದೆ, ಕೋ ಜನರೇಷನ್ ಮಾಡಲಿಕ್ಕೆ ಎಲ್ಲಿ ನಮಗಾಗುತ್ತದೆ, ಮಿನಿ ಹೈಡಲ್ ಪ್ರಾಜೆಕ್ಟ್ ಅನ್ನು ಎಲ್ಲೆಲ್ಲಿ ಮಾಡಬಹುದು, ಅಲ್ಲಿ ಮಾಡುವುದು ಮತ್ತು ವಿಂಡ್ ಜನರೇಷನ್ ಏನಿದೆ ಅದನ್ನು ಮಾಡುವುದು ಇದರ ಬಗ್ಗೆ ಹೆಚ್ಚು ಒತ್ತು ಕೊಡಬೇಕು, ನಮ್ಮ ರಾಜ್ಯಪಾಲರು ಅವರ ಭಾಷಣದಲ್ಲಿ ಅದನ್ನು ಹೇಳಿದ್ದಾರೆ. ಆ ಬಗ್ಗೆ ಹೆಚ್ಚು ಚಿಂತನೆ ಮಾಡುವುದು ನಿಜವಾದ ಕ್ರಮ ಎನ್ನುವ ಮಾತನ್ನು ಹೇಳಲಿಕ್ಕೆ ಹೊರಟ್ಟಿದ್ದೆ. ಮುಖ್ಯಮಂತ್ರಿಗಳು ತಮ್ಮ ಹಿಂದಿನ ಭಾಷಣದಲ್ಲಿ ನಿರಂತರವಾಗಿ 8 ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದರು, ಆದರೆ, ಕೊಡುವುದಕ್ಕಾಗಲಿಲ್ಲವೆನ್ನುವ ಮಾತನ್ನು ಹೇಳಿದ್ದೇನೆ, ತಮಗೆ ಗೊತ್ತಿದೆ, ತಾವು ವಿದ್ಯುತ್ ಕ್ಷೇತ್ರದಲ್ಲಿ ಅತ್ಯಂತ ಪರಿಣಿತರು, ವಿದ್ಯುತ್ ಉತ್ಪಾದನೆ ವಿತರಣೆ ಏಕಕಾಲಕ್ಕೆ ಆಗಬೇಕು.you cannot keep it as stock,ವಿದ್ಯುತ್ ಉತ್ಪಾದನೆಯಾಗಬೇಕು,ವಿತರಣೆಯೂ ಆಗಬೇಕು, ಎಲ್ಲೆಲ್ಲಿ ಉತ್ಪಾದನೆ ಇದೆ, ಅಲ್ಲಿ ವಿತರಣೆ ಆಗಿಯೇ ಆಗುತ್ತದೆ, ಉತ್ಪಾದನೆ ಇಲ್ಲದ ಕಡೆ ವಿತರಣೆ ಮಾಡಿ ಎಂದು ಕೇಳುವುದು ಸರಿಯಾದ ಕ್ರಮವಲ್ಲ, ಆದುದರಿಂದ. ಮಾನ್ಯ ಮುಖ್ಯಮಂತ್ರಿಗಳು ಅಂದು 8 ಗಂಟೆಗಳ ಕಾಲ ವಿದ್ಯುತ್ ಕೊಡಬೇಕೆಂದು ಹೇಳಿ ಅವತ್ತು ಕಾಳಜಿ ವಹಿಸಿದ್ದರು, ರೈತರನ್ನು ದೃಷ್ಟಿಯಲ್ಲಿಟ್ಟುಕೊಂಡು, ಅವನಿಗೆ ಸಹಾಯ ಆಗಬೇಕೆನ್ನುವ ದೃಷ್ಟಿ ಇಟ್ಟುಕೊಂಡು ಅವತ್ತು ಮಾತನಾಡಿದರು, ನಂತರದ ಪರಿಸ್ಥಿತಿ ಏನಿದೆ, ನಾವು ಯಾವ ರೀತಿ ಬರದ ಛಾಯೆಗೆ ಸಿಲುಕಿದ್ದೇವೆ,ಎನ್ನುವ ಬಗ್ಗೆ ತಮಗೆ ಮಾಹಿತಿ ಇದೆ. ಇದರಲ್ಲಿ ನಾವು ಹೇಳಬೇಕಾದುದೇನಿಲ್ಲ, ಇದು ಎಲ್ಲರಿಗೂ ಗೊತ್ತಿರುವ ವಿಷಯ. ಅವೆಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಂಪ್ರದಾಯಿಕವಲ್ಲದ ವಿದ್ಯುತ್ ಉತ್ಪಾದನೆಗೆ ನಾವು ಹೆಚ್ಚು ಒತ್ತು ಕೊಡಬೇಕೆನ್ನುವುದು ನನ್ನ ವಾದ, ಅದನ್ನು ತಾವು ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ಇನ್ನು ಎರಡು ವಿಷಯಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಬೆಂಗಳೂರು ಅಭಿವೃದ್ದಿಯಲ್ಲಿ ಬಹಳ ಸಾಧನೆಯಾಗಿದೆ, ಬೆಂಗಳೂರು ಅಭಿವೃದ್ದಿಯಲ್ಲಿ ನಾವು ಸಾಧನೆ ಮಾಡಿದ್ದೇವೆನ್ನುವುದಕ್ಕೆ ಇಲ್ಲಿಯ ಜನರು ನಮಗೆ ಅವರ ತೀರ್ಪು ತೀರ್ಮಾನವನ್ನು ಕೊಟ್ಟಿದ್ದಾರೆ.I think my freinds also will not dispute this fact.ಇವತ್ತು ಬೆಂಗಳೂರಿನಲ್ಲಿ ರಸ್ತೆಗಳು ಸಮಗ್ರವಾಗಿ ಅಭಿವೃದ್ದಿಯಾಗಿದೆ, ಮೇಲು ಸೇತುವೆಗಳು ನಿರ್ಮಾಣವಾಗುತ್ತಿವೆ, ಗತಕಾಲದ ಬೆಂಗಳೂರು ಒಂದು ಉದ್ಯಾನ ನಗರಿ ಎಂಬ ಭಾವನೆಯನ್ನೇನು ಇಟ್ಟುಕೊಂಡಿದ್ದೆವು, ಇವತ್ತು 100 ಪಾರ್ಕ್‌ಗಳನ್ನು ಡೆವಲಪ್ ಮಾಡುವ ಮೂಲಕ ಗತಿಸಿ ಹೋಗಿದ್ದ ವೈಭವವನ್ನು ಪುನಃ ಮರಳಿ ತಂದುಕೊಡುವ ಪ್ರಾಮಾಣಿಕ ಪ್ರಯತ್ನ ಇವತ್ತು ಈ ಸರ್ಕಾರದಿಂದಾಗಿದೆ. ಇದರ ಜೊತೆಗೆ ಸಾಕಷ್ಟು ನಿವೇಶನಗಳನ್ನು ಹಂಚುವ ಕೆಲಸವಾಗಿದ್ದು, ಕಾವೇರಿ ನಾಲ್ಕನೇ ಹಂತದ ನೀರನ್ನು ಬೆಂಗಳೂರಿನ ಜನಕ್ಕೆ ಕೊಡುವುದರ ಮೂಲಕ ಹಾಹಾಕಾರ ನೀರಿನ ಸಮಸ್ಯೆ ಉದ್ಭವ ಆಗದ ರೀತಿಯಲ್ಲಿ ಎಚ್ಚರವನ್ನು ವಹಿಸಿದೆ. ಇದರ ಜೊತೆಗೆ ನಾವೆಲ್ಲರೂ ಕೂಡ ಮುಕ್ತಕಂಠದಿಂದ ಸರ್ಕಾರವನ್ನು ಒಂದು ವಿಷಯದಲ್ಲಿ ಪ್ರಸಂಶೆ ಮಾಡಬೇಕಾಗುತ್ತದೆ, ಏನೆಂದರೆ, ಬೆಂಗಳೂರಿನಲ್ಲಿ ಭೂ ಕಳ್ಳರು, ಲ್ಯಾಂಡ್ ಮಾಫೀಯ ಏನಿತ್ತು ದೊಡ್ಡ ದೊಡ್ಡ ನಿವೇಶನಗಳ ನಕಲಿ ದಾಖಲೆಗಳನ್ನು ಸೃಷ್ಟಿಸಿ ವಂಚಿಸಿ ಅದನ್ನು ಅಪಕರಿಸಿಕೊಂಡಿದ್ದಂತಹ ನಿವೇಶನಗಳನ್ನು ನೂರಾರು ಕೋಟಿ ರೂಪಾಯಿ

ಆಸ್ತಿಯನ್ನು ಬಿಡಿಎ ದವರು ಪುನಃ ತಮ್ಮ ವಶಕ್ಕೆ ತೆಗೆದು ಕೊಂಡಿರುತ್ತಾರೆ, ಇದು ಏನು ತೋರಿಸುತ್ತದೆ ಎಂದರೆ, ಸರ್ಕಾರದ ಪ್ರಮಾಣೀಕತೆ ಹಾಗೂ ಕಾಳಜಿ ಮತ್ತು ಸರ್ಕಾರ ಇಂಥ ಮಾಫೀಯಗಳಿಗೆ ಯಾವತ್ತೂ ಮಣಿಯುವುದಿಲ್ಲ ಎನ್ನುವ ಕಠಿಣವಾದ ನಿರ್ಧಾರ ತೆಗೆದುಕೊಂಡಿರುವುದರಿಂದ, ಬೆಂಗಳೂರು ಅಭಿವೃದ್ಧಿ ಪ್ರಾಧೀಕಾರದವರು ಸುಮಾರು 300-400 ಕೋಟಿ ರೂಪಾಯಿ ಬೆಲೆ ಬರತಕ್ಕಂಥ ನಿವೇಶನಗಳನ್ನು ಪುನಃ ಭೂ ಕಳ್ಳರಿಂದ ವಶಪಡಿಸಿಕೊಂಡಿರುವುದು ಸರ್ಕಾರದ ಪ್ರಾಮಾಣಿಕತೆಗೆ ಮತ್ತೊಂದು ನಿದರ್ಶನವೆಂದು ಹೇಳುತ್ತೇನೆ, ಬೆಂಗಳೂರಿನ ಸಮಗ್ರ ಅಭಿವೃದ್ಧಿ ಆಗಿದೆ, ಆಗುವ ಅನಿವಾರ್ಯತೆ ಕೂಡ ಇತ್ತು ಏಕೆಂದರೆ, ಇವತ್ತು ಇಡೀ ವಿಶ್ವದಲ್ಲಿ ಮಾಹಿತಿ ತಂತ್ರಜ್ಞಾನದ ಮೂಲಕ ಬೆಂಗಳೂರಿನ ಕಡೆ ವಿಶ್ವದ ಅನೇಕ ಪ್ರಮುಖರ ದೃಷ್ಟಿಯನ್ನು ಈ ಕಡೆ ಸೆಳೆದಿರತಕ್ಕ ಸಂದರ್ಭದಲ್ಲಿ ನಮ್ಮ ಉದ್ಯಾನನಗರಿಯನ್ನು ಸರ್ವಾಂಗೀಣ ಅಭಿವೃದ್ಧಿ ಮಾಡತಕ್ಕಂಥ ಜವಾಬ್ದಾರಿ ಈ ಸರ್ಕಾರದ ಮೇಲೆ ಇತ್ತು ಆ ಜವಾಬ್ದಾರಿಯನ್ನು ಅತ್ಯಂತ ಪ್ರಾಮಾಣಿಕವಾಗಿ ನಿಭಾಯಿಸುತ್ತಿದ್ದಾರೆಂದು ಹೇಳುತ್ತಾ,ಕೊನೆಯದಾಗಿ ಪ್ರಾದೇಶಿಕ ಅಸಮಾನತೆಯ ಬಗ್ಗೆ ಮೊದಲಿನಿಂದಲೂ ಒಂದು ದೊಡ್ಡ ಕೂಗಿತ್ತು, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಹೈದರಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಹೀಗೆ ಪ್ರಾದೇಶಿಕ ಅಸಮಾನತೆಯ ಕೂಗಿನಲ್ಲಿ ಈ ಭಾಗದಲ್ಲಿ ಅಭಿವೃದ್ಧಿಯಾಗದೇ ಅನೇಕ ಸವಲತ್ತುಗಳಿಂದ ನಾವು ವಂಚಿತರಾಗಿದ್ದೇವೆ ಎನ್ನತಕ್ಕಂಥ ಏನು ಒಂದು ಕೂಗು ಇತ್ತು, ಅದಕ್ಕೆ ಉತ್ತರವಾಗಿ ಈ ಸರ್ಕಾರ ಡಾ:ನಂಜುಂಡಪ್ಪನವರು ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿತು, ಅ ಸಮಿತಿಯವರು ಈಗಾಗಲೇ ಒಂದು ವರದಿಯನ್ನು ಕೊಟ್ಟಿದ್ದಾರೆ, ಆ ವರದಿ ಅನ್ವಯ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕ್ರೊಂಡಿದೆ. ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟಿನ ಒಂದು ಪೀಠ ಆಗಬೇಕು ಎನ್ನುವ ನಿಟ್ಟಿನಲ್ಲಿ ಸರ್ಕಾರ ತನ್ನ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದೆ. ನ್ಯಾಯಾಂಗ ಇಲಾಖೆಯವರು ಅದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕಾಗುತ್ತದೆ, ಆದರೆ ಈ ಸರ್ಕಾರ ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್‌ನ ಒಂದು ಪೀಠವನ್ನು ಸ್ಥಾಪನೆ ಮಾಡಲು ತರ್ತ್‌ಕ್ಷಣ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲಿಕ್ಕೆ ತಯಾರಾಗಿರತಕ್ಕಂಥದ್ದು ಈ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲಿಕ್ಕೆ ಸರ್ಕಾರ ಹಾಕಿಕೊಂಡಿರತಕ್ಕಂಥ ಮೊಟ್ಟ ಮೊದಲನೆಯ ಕಾರ್ಯಕ್ರಮ. ಅದರ ಜೊತೆಗೆ ಈಶಾನ್ಯ ಜಿಲ್ಲೆಗಳಿಗೆ ಸೀಮಿತವಾಗಿರುವಂತೆ ಏಳು ಜಿಲ್ಲೆಗಳಿಗೆ ಒಂದು ಪ್ರತ್ಯೇಕವಾದ ಶಿಕ್ಷಣ ನಿರ್ದೇಶನಾಲಯವನ್ನು ಸರ್ಕಾರ ಪ್ರಾರಂಭಿಸಿದ್ದು. ಆ ಭಾಗದ ಬಡಮಕ್ಕಳಿಗೆ ಬಿಸಿ ಊಟವನ್ನು ಕೊಡತಕ್ಕಂಥ ಯೋಜನೆಯನ್ನು ಪ್ರಾರಂಭಿಸಿದ್ದು. ಹೀಗೆ ಹತ್ತಾರು ಕಾರ್ಯಕ್ರಮಗಳನ್ನು ಹಮ್ಮಿಕ್ರೊಂಡು ಈ ಪ್ರಾದೇಶಿಕ ಅಸಮಾನತೆಯ ಕೂಗನ್ನು ಕಡಿಮೆ ಮಾಡತ್ಕಕಂಥ ಪ್ರಾಮಾಣಿಕ ಪ್ರಯತ್ನ ಈ ಸರ್ಕಾರದಿಂದ ಆಗಿದೆ, ಇದರ ಜೊತೆಗೆ ಇನ್ನು ಕಾರ್ಯಕ್ರಮಗಳ ಬಗ್ಗೆ. ಚಿಂತನೆಗಳ ಬಗ್ಗೆ ಗೌರವಾನ್ವಿತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ವಿಚಾರಗಳನ್ನು ಮಂಡಿಸಿದ್ದಾರೆ, ಅತ್ಯಂತ ಪರಿಣಾಮಕಾರಿಯಾದ ಅತ್ಯಂತ ಅರ್ಥಗರ್ಭಿತವಾದ ಭಾಷಣವನ್ನು ಸಂವಿಧಾನದ ಚೌಕಟ್ಟಿನಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿ ಈ ಸದನದ ಮುಂದೆ ಮಂಡಿಸಿದ್ದಾರೆ, ಅವರು ಮಂಡಿಸಿರುವ ಭಾಷಣಕ್ಕೆ ಪ್ರತಿಯಾಗಿ ಘನವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವುದು ನಮ್ಮೆಲ್ಲರ ಆದ್ಯಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ, ಆದುದರಿಂದ, ಸದನದಲ್ಲಿ ಮಂಡಿಸಿರುವ ಪ್ರಸ್ತಾವ ಏನಿದೆ, ಆ ಪ್ರಸ್ತಾವವನ್ನು ಪುರಸ್ಕರಿಸಿ ರಾಜ್ಯಪಾಲರಿಗೆ ನಮ್ಮ ವಂದನೆಗಳನ್ನು ಅರ್ಪಿಸಬೇಕೆಂದು

ತಮ್ಮಲ್ಲಿ ಪ್ರಾರ್ಥಿಸಿಕೊಂಡು, ಇಷ್ಟುಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಜಿ. ನಂಜಯ್ಯನ ಮಠ (ಗುಳೇದಗುಡ್ಡ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣವನ್ನು ಮಂಡಿಸಿರುವುದನ್ನು ಅನುಮೋದಿಸುತ್ತಾ ನನ್ನ ಮಾತುಗಳನ್ನು ಪ್ರಾರಂಭಿಸುತ್ತೇನೆ, ರಾಜ್ಯದ ಸಾಧನೆ, ರಾಜ್ಯ ಜನ ಹಿತದಲ್ಲಿ ಹಾಗೂ ಜನರ ಹಿತಕೋಸ್ಕರ ಮಾಡಿರತಕ್ಕಂಥ ಕೆಲಸಗಳನ್ನು, ಮಾಡಬಹುದಾಗಿರುವ ಯೋಚನೆ ಹಾಗೂ ಯೋಜನೆಗಳನ್ನು, ಸಾಧಿಸಿರತಕ್ಕಂಥ ಸಾಧನೆಗಳನ್ನು, ಜನತೆಯ ಮುಂದೆ ಈ ಅಧಿವೇಶನದ ಮುಖಾಂತರ ಮಂಡಿಸಿರತಕ್ಕಂಥದ್ದನ್ನು ಗಮನಿಸಿದರೆ ಈ ರಾಜ್ಯದ ಅಭಿವೃದ್ಧಿಯ ಸರ್ವಾಂಗೀಣ ವಿಷಯದಲ್ಲಿ ಶ್ರೀಮಾನ್ ಎಸ್. ಎಂ. ಕೃಷ್ಣರವರ ನೇತೃತ್ವದ ಬಹಳಷ್ಟು ಸಾಧನೆಯನ್ನು ಮಾಡಿದೆ ಮಾಡುತ್ತಾ ಹೊರಟಿದೆ ಎನ್ನತಕ್ಕಂಥ ಕನ್ನಡಿಯನ್ನು ಭಾಷಣದ ಮುಖಾಂತರ ನಮ್ಮ ಮುಂದೆ ಇಟ್ಟಿದ್ದಾರೆ, ಹಲವಾರು ಸಮಸ್ಯೆಗಳನ್ನು ರಾಜ್ಯ ಕ್ಲಿಷ್ಟಕರವಾಗಿರತಕ್ಕ ವಾತಾವರಣದಲ್ಲಿ ಎದುರಿಸಿದರೂ ಕೂಡ ಅಂಥ ಸಂದರ್ಭದಲ್ಲಿ ರಾಜ್ಯದ ಅಭಿವೃದ್ಧಿಯ ಕಡೆಗೆ ತನ್ನ ಗಮನವನ್ನು ವಿಶೇಷವಾಗಿ ಇಟ್ಟಿರತಕ್ಕಂಥದ್ದು ಸಾಧಿಸಿರತಕ್ಕಂಥ ಸಾಧನೆಯ ಅಂಕಿ- ಅಂಶಗಳಿಂದ ಅರ್ಥವಾಗುತ್ತಿದೆ, ನಾಗಪ್ಪನವರ ಅಪಹರಣ ಎಲ್ಲರೂ ಕಳಕಳಿಯನ್ನು ಆ ಸಂದರ್ಭದಲ್ಲಿ ವ್ಯಕ್ತ ಮಾಡಿದ್ದಾರೆ. ಅವರು ದಕ್ಷರು, ಪ್ರಾಮಾಣಿಕರು, ಒಳ್ಳೆಯವರು ಎನ್ನತಕ್ಕಂಥದ್ದರಲ್ಲಿ ಎರಡು ಮಾತು ಯಾರದ್ದು ಇರಲಿಲ್ಲ. ಇಡೀ ಕರ್ನಾಟಕಕ್ಕೆ ಕಲೆಯ ಮುಖಾಂತರ ಅದ್ವಿತೀಯ ಸಾಧನೆಯನ್ನು ಮಾಡಿತೋರಿಸಿ ರತಕ್ಕಂಥ ಇಡೀ ಡಾ: ರಾಜ್‌ಕುಮಾರ್‌ರವರನ್ನು ಅಪಹರಣ ಮಾಡಿದಾಗ,ಸಮೀಪದಲ್ಲಿಯೇ ಇರತಕ್ಕಂಥ ವ್ಯಕ್ತಿಯನ್ನು ಅಪಹರಣ ಮಾಡಿದಾಗ ಅಷ್ಟೇ ಪ್ರಮಾಣದ ಅನುಕಂಪ. ಅಂತ : ಕರಣೆ ಎಲ್ಲರಿಂದಲೂ ಕೂಡ ವ್ಯಕ್ತವಾಯಿತು. ಶ್ರೀಮಾನ್ ರಾಜ್‌ಕುಮಾರ್‌ರವರು ಅಪಕರಣಕ್ಕೆ ಒಳಪಟ್ಟಿರತಕ್ಕಂಥ ಸಂದರ್ಭದಲ್ಲಿ ಅವರು ಬಿಡುಗಡೆ ತೋರಿಸಿರತಕ್ಕಂಥ ಕಾಳಜಿ ಹಾಗೂ ಪ್ರಯತ್ನವನ್ನೇ ಶ್ರೀಮಾನ್ ನಾಗಪ್ಪನವರ ವಿಚಾರದಲ್ಲಿ ಸರ್ಕಾರ ತೋರಿಸಿತು ಎನ್ನತಕ್ಕಂಥದ್ದು ಅಂದಿನ ಸಂದರ್ಭದಲ್ಲಿ ಸರ್ಕಾರ ನಡೆದುಕೊಂಡಿರತಕ್ಕಂಥ ಘಟನೆಗಳೇ ಸಾಕ್ಷಿ. ನಾಗಪ್ಪನವರು ಸುರಕ್ಷಿತವಾಗಿ ಹೊರಗೆ ಬರಬೇಕು ಎನ್ನತಕ್ಕಂಥ ಒಂದು ಶುದ್ಧ ಅಂತ : ಕರಣದಲ್ಲಿ ಅಲ್ಪಸಲ್ಪ ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ ನಮ್ಮ ಸರ್ಕಾರ ಹಿಂದೇಟು ಹಾಕಲಿಲ್ಲ.ಇದರ ಉದ್ದೇಶ ಏನೆಂದರೆ, ಒಬ್ಬ ಒಳ್ಳೆಯ ವ್ಯಕ್ತಿ ಯಾವುದೇ ಮೂಲದಿಂದ ಬಂದಿರಬಹುದು ಅಥವಾ ಯಾವುದೇ ರಾಜಕೀಯ ಹಿನ್ನಲೆಯಿಂದ ಬಂದಿರಬಹುದು. ಆದರೆ, ಉತ್ತಮತೆಗೆ ಅವುಗಳ ಲೇಪನದ ಅವಶ್ಯಕತೆ ಇಲ್ಲ ಎನ್ನತಕ್ಕಂಥ ಮಾನವೀಯ ಅನುಕಂಪದ ಆಧಾರದ ಮೇಲೆ ಆತನ ಬೇಡಿಕೆಗಳನ್ನು ಪೂರೈಸತಕ್ಕಂಥದ್ದಕ್ಕೆ ಕಾನೂನಿನ ಅಡಚಣೆ ಮತ್ತು ಇತರೇ ಅನಾನುಕೂಲತೆ ಇದ್ದರೂ ಕೂಡ ಮಾನ್ಯ ನಾಗಪ್ಪನವರು ಹೊರಕ್ಕೆ ಬರಲಿ ಎನ್ನತಕ್ಕಂಥ ಉದ್ದೇಶದಿಂದ ಮತ್ತು ಇವರ ಸುಸಲಿತ ಬಿಡುಗಡೆಗೋಸ್ಕರ ಆತ ಕೇಳಿರತಕ್ಕಂಥ ವ್ಯಕ್ತಿಗಳ ಬಿಡುಗಡೆ ಅನೇಕ ಸಡಲಿಕೆಗಳನ್ನು ಮಾಡಲಾಗಿತ್ತು, ಈ ಒಂದು ಕಾರ್ಯದಲ್ಲಿ ಸರ್ಕಾರದ ತನ್ನ ಪಾಲಿನ ಕರ್ತವ್ಯವನ್ನು ಮಾಡಿದ್ದರೂ ಕೂಡ ನ್ಯಾಯಾಲಯಕ್ಕೆ ನಾವೆಲ್ಲರೂ ಯಾವುದೇ ಒಂದು ವಸೂಲಿಬಾಜಿ ಮಾಡತಕ್ಕಂಥ ಸ್ಥಿತಿ ಈ ದೇಶದ ಕಾನೂನು ವ್ಯವಸ್ಥೆಯಲ್ಲಿ ಇಲ್ಲ. ಅವರು ತೆಗೆದುಕೊಳ್ಳ ತಕ್ಕಂಥ ನಿರ್ಣಯ ಅಂತಿಮವಾಗಿದ್ದರೂ ಕೂಡ ಪ್ರಾಮಾಣಿಕ ಪ್ರಯತ್ನ ಮಾಡುವುದರಲ್ಲಿ ನಾವು ಯಾವಾಗಲೂ ಹಿಂದೆ ಬಿದ್ದಿಲ್ಲ ಎನ್ನತಕ್ಕಂಥ

ಮಾತನ್ನು ಉದಾಹರಣೆ ಸಹಿತ ನಿಮ್ಮ ಮುಂದೆ ಇಟ್ಟಿದ್ದೇವೆ, ಆದರೂ ಕೂಡ ನನ್ನ ವಿರೋಧ ಪಕ್ಷದ ಸ್ನೇಹಿತರು ನಾಗಪ್ಪನವರು ಬಿಡುಗಡೆ ವಿಷಯದಲ್ಲಿ ಸರ್ಕಾರ ಕಾಳಜಿ ತೋರಲಿಲ್ಲ ಎನ್ನತಕ್ಕಂಥ ಮಾತಿನ ವಾಗ್ದಾಳಿಯನ್ನು ಸರ್ಕಾರದ ಮೇಲೆ ಮಾಡುವಂಥದನ್ನು ಬಿಡಲಿಲ್ಲ, ಬಿಡುಗಡೆ ಸಂದರ್ಭದಲ್ಲಿ ಸರ್ಕಾರ ಕಾಳಜಿಯನ್ನು ವಹಿಸಿರತಕ್ಕಂಥ ಸಂದರ್ಭದಲ್ಲಿಯೂ ಕೂಡ ಟೀಕೆಗಳ ಸುರಿಮಳೆ ಆಯಿತು. ಆದರೂ ಕೂಡ ಅವರ ಬಿಡುಗಡೆಗೋಸ್ಕರ ಅಂತ : ಕರಣದ ಕೆಲಸ ಮಾಡಿದ್ದೇವೆ. ಆದರೆ, ವಿಧಿ ಲಿಖಿತವೊ, ದುರಂತವೊ ಇಡೀ ರಾಜ್ಯದ ಜನ ಪಕ್ಷಾತೀತವಾಗಿ ಮತ್ತು ಜಾತ್ಯಾತೀತವಾಗಿ ಈ ದುರ್ಘಟನೆಯಲ್ಲಿ ಮಾನ್ಯ ನಾಗಪ್ಪನವರು ಬಲಿ ಆಗಬಾರದಿತು ಎನ್ನತಕ್ಕಂಥ ತನ್ನ ಅನುಕಂಪವನ್ನು, ಪ್ರಾಮಾಣಿಕ ಅನಿಸಿಕೆಯನ್ನು ಆ ಸಂದರ್ಭದಲ್ಲಿ ಸರ್ಕಾರ ಹೇಳಿತ್ತು. ಈ ವಿಷಯದಲ್ಲಿ ಸರ್ಕಾರ ಇಟ್ಟಿರತಕ್ಕಂಥ ಹೆಜ್ಜೆ ಮತ್ತು ಅವರ ಬಿಡುಗಡೆಗಾಗಿ ಮಾಡಿರತಕ್ಕಂಥ ಪ್ರಾಮಾಣಿಕ ಪ್ರಯತ್ನಗಳ ಉಲ್ಲೇಖಗಳ ಉದಾಹರಣೆಗಳಿವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖೇನ ಈ ಸದನದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ತದನಂತರ ನಮ್ಮ ರಾಜ್ಯಕ್ಕೆ ಸತತವಾಗಿ ಬರಗಾಲ ಬಂದಿದೆ. ಒಮ್ಮೆ ಬರಗಾಲ ತುತ್ತಾದ ಬಂದರೆ ಸರ್ಕಾರ ಚೇತರಿಸಿಕೊಳ್ಳುವುದು ಬಹಳ ಕಷ್ಟ. ಒಮ್ಮೆ ಬರಗಾಲಕ್ಕೆ ತುತ್ತಾದ ಒಂದು ಸರ್ಕಾರ ಮತ್ತೆ ಚೇತರಿಸಿಕೊಳ್ಳಬೇಕಾದರೆ ಕನಿಷ್ಟ ಪಕ್ಷ 2ರಿಂದ3 ವರ್ಷ ಬೇಕಾಗುತ್ತದೆ. ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೋಸ್ಕರ ಇಟ್ಟಿರತಕ್ಕಂಥ ಹಣವನ್ನು ಸರ್ಕಾರ ಬರಗಾಲ ಕಾಮಗಾರಿಗಳಿಗೋಸ್ಕರ, ಜನತೆಯ ಕೆಲಸ ಮಾಡುವುದಕ್ಕೋಸ್ಕರ ಮತ್ತು ಕುಡಿಯುವ ನೀರು, ಮೇವಿಗೋಸ್ಕರ ಹಲವಾರು ಯೋಜನೆಗಳಿಗೆ ಇಟ್ಟಿರತಕ್ಕಂಥ ಹಣವನ್ನು ಬಳಕೆ ಮಾಡಬೇಕಾಗಿರತಕ್ಕಂಥ ಸಂದರ್ಭ ಇದೆ. ದುರಾದೃಷ್ಟವಶಾತ್ ರಾಜ್ಯದಲ್ಲಿ ಎರಡನೇ ಬಾರಿಗೆ ಹಿಂಗಾರು ಮತ್ತು ಮುಂಗಾರು ಬೆಳೆಯನ್ನು ಕಳೆದುಕೊಂಡಂಥ ಸಂದರ್ಭದಲ್ಲಿದ್ದೇವೆ. ಆದರೆ ಬರಗಾಲ ಬಂದಿರತಕ್ಕಂಥ ಸಂದರ್ಭದಲ್ಲಿ ಅದನ್ನು ಎದುರಿಸಿ ಬರಗಾಲದ ಬವಣೆಯಲ್ಲಿ ಸಿಕ್ಕಿಕೊಂಡಿರತಕ್ಕಂಥ ಜನತೆಯನ್ನು ಪಾರು ಮಾಡಬೇಕಾಗಿರತ್ತಕಂಥದು ಸರ್ಕಾರದ ಕರ್ತವ್ಯ, ಆ ಕರ್ತವ್ಯವನ್ನು ನಿರ್ವಹಣೆ ಮಾಡುವುದರಲ್ಲಿ ಸರ್ಕಾರ ಹಿಂದೆ ಬಿದ್ದಿಲ್ಲ ಮತ್ತು ಬೀಳುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಒಂದು ವೇಳೆ ಜೂನ್ ತಿಂಗಳವರೆಗೆ ಮಳೆ ಸಮರ್ಪಕವಾಗಿ ಬಾರದೆ ಹೋದರೆ ಜನತೆಯನ್ನು ಸಂರಕ್ಷಣೆ ಮಾಡತಕ್ಕಂಥ ಒಂದು ಜವಾಬ್ದಾರಿ ಇರುತ್ತದೆ, ಇವತ್ತಿನ ದಿವಸ ಎಲ್ಲೆಲ್ಲಿ ಬರಗಾಲದ ಕಾಮಗಾರಿಗಳನ್ನು ಮತ್ತು ಕೂಲಿಗಾಗಿ ಕಾಳು ಯೋಜನೆಯನ್ನು ಮತ್ತು ಸಂಸದರ ನಿಧಿ ಮತ್ತು ಶಾಸಕರ ನಿಧಿಯನ್ನು ಮತ್ತು ಎಲ್ಲಾ ರೀತಿಯಾದ ಸಂಪನ್ಮೂಲಗಳನ್ನು ಉಪಯೋಗ ಮಾಡಿಕೊಂಡು ಬರಗಾಲಕ್ಕೆ ತುತ್ತಾಗಿರತ್ತಕಂಥ ಜನರು ಎಲ್ಲಿಯೂ ಕೂಡ ಒಕ್ಕಲೆದ್ದು ಹೋಗಬಾರದೆಂದು ಮತ್ತು ಕೆಲಸಕ್ಕಾಗಿ ಅಲೆಯಬಾರದು ಎನ್ನತಕ್ಕಂಥ ದೃಷ್ಟಿಯಿಂದ ಇವತ್ತು ನಮ್ಮ ಸರ್ಕಾರ ಬರಗಾಲ ಕಾಮಗಾರಿಗಳನ್ನು ಜಾರಿಗೊಳಿಸುವಲ್ಲಿ ತನ್ನ ದಕ್ಷತೆಯನ್ನು, ಪಾಲ್ಗೊಳ್ಳುವಿಕೆಯನ್ನು ಮತ್ತು ಸಹಭಾಗಿತ್ವವನ್ನು ಸಮರ್ಪಕವಾಗಿ ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಮಾಡುತ್ತಿದೆ. ಕಳೆದ ಎರಡು ವರ್ಷದಿಂದ ಬರಗಾಲದ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಒಂದು ಸಾರಿ ಮಳೆ ಬಂದರೆ 90 ಸಮಸ್ಯೆಗಳನ್ನು ನೀಗಿಸುವುದು. ಹಾಗೆಯೇ ಒಂದು ಸಾರಿ ಮಳೆ ಹೋದರೆ 90 ಸಮಸ್ಯೆಗಳು ಉಂಟಾಗುತ್ತವೆ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳುವುದಾದರೆ, ಒಬ್ಬ ಮನುಷ್ಯನಿಗೆ 2ರಿಂದ 3ಲೀಟರ್ ನೀರು ಸಿಕ್ಕಿದರೆ ಒಂದು ದಿವಸ

ಕಾಲ ಕಳೆಯಬಹುದು, ಆದರೆ, ಜಾನುವಾರುಗಳಿಗೆ ನಾವು ಬಹಳಷ್ಟು ನೀರನ್ನು ಒಂದು ದಿವಸಕ್ಕೆ ಕೊಡಬೇಕಾಗುತ್ತದೆ, ಇವುಗಳನ್ನು ನಿಬಾಯಿಸತಕ್ಕಂಥದ್ದು ಸರ್ಕಾರದ ಕರ್ತವ್ಯ, ಈ ಕರ್ತವ್ಯದ ನಿರ್ವಹಣೆಯಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಂ. ಕೃಷ್ಣರವರ ಸರ್ಕಾರ ಹಿಂದೇಟು ಹಾಕಿಲ್ಲ. ಎಂತಹ ಟೀಕೆಟಿಪ್ಪಣಿಗಳನ್ನು ಮಾಡುತ್ತಿದ್ದರೂ ಕೂಡ ತನ್ನ ಪಾಲಿನ ಕರ್ತವ್ಯವನ್ನು ಸಮರ್ಪಕವಾಗಿ ಮಾಡಲು ಹೊರಟಿದೆ ಎನ್ನತಕ್ಕಂಥದನ್ನು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉದಾಹರಣೆಗಳ ಸಹಿತ ತಮ್ಮ ಮುಂದಿಟ್ಟಿದ್ದಾರೆ. ಎರಡು ವರ್ಷದಿಂದ ನಿರಂತರವಾದ ಬರಗಾಲದಿಂದ ನಮ್ಮಲ್ಲಿ ಕುಡಿಯುವ ನೀರಿನ ಸಮಸ್ಯೆ ದೊಡ್ಡ ಪ್ರಮಾಣದಲ್ಲಿ ಆಗಿದೆ. ಮೊದಲು 150 ಅಡಿಗೆ ಬೋರ್‌ವೆಲ್‌ನಲ್ಲಿ ನೀರು ಸಿಗುತ್ತಿತ್ತು. ಆದರೆ, ಇವತ್ತು ಇಂಥ ಕಡೆ 200 ರಿಂದ 250 ಅಡಿ ಕೆಳಗೆ ನೀರು ಹೋಗಿರತಕ್ಕಂಥ ಪರಿಸ್ಥಿತಿ ಬಂದಿದೆ. 300 ಅಡಿ ಕೆಳಗಡೆ ನೀರು ಇದ್ದಂಥ ಕಡೆ ಇವತ್ತು 400 ಅಡಿ ಕೆಳಕ್ಕೆ ನೀರು ಹೋಗಿರತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಇವತ್ತಿನದಿವಸ ನೀರು ಎಷ್ಟೇ ಕೆಳಗೆ ಹೋಗಿದ್ದರೂ ಕೂಡ ನೀರನ್ನು ಕೊಡತಕ್ಕಂಥ ವಿಚಾರದಲ್ಲಿ ಸರ್ಕಾರ ಹಿಂದೆ ಬಿದ್ದಿಲ್ಲ. ತನ್ನ ಹಲವಾರು ಕಾರ್ಯಕ್ರಮಗಳನ್ನು ಹೊಸ ತಾಂತ್ರಿಕತೆಯ ಕ್ರಮಗಳನ್ನು ಅಳವಡಿಕೆ ಮಾಡಿ ಎಲ್ಲೆಲ್ಲಿ ನೀರು ಸಿಗುತ್ತದೆ, ಅಲ್ಲಿಂದ ನೀರನ್ನು ತೆಗೆದು ಜನತೆಗೆ ಮುಟ್ಟಿಸುವಲ್ಲಿ ಇವತ್ತು ಸರ್ಕಾರ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಿಕೊಂಡು ಬಂದಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಹಾಗೆಯೇ, ಸರ್ಕಾರ ಕಾಲಕಾಲಕ್ಕೆ ಎಲ್ಲಾ ಶಾಸಕರಿಗೂ ಕೂಡ ಪತ್ರದ ಮುಖೇನ ಏನು ತಿಳಿಸಿದೆ ಎಂದರೆ, ನಿಮ್ಮ ಕ್ಷೇತ್ರದಲ್ಲಿರತಕ್ಕಂಥ ಬೋರ್‌ವೆಲ್‌ಗಳ ಬಗ್ಗೆ ಮತ್ತು ಅವುಗಳ ರಿಪೇರಿಗೋಸ್ಕರ ಏನೇನು ವ್ಯವಸ್ಥೆ ಮಾಡಲಾಗಿದೆ ಎನ್ನತಕ್ಕಂಥದನ್ನು ಹಾಗೂ ಕಿರು ನೀರು ಸರಬರಾಜು ಯೋಜನೆಗೆ ಇರತಕ್ಕಂಥ ವ್ಯವಸ್ಥೆ ಬಗ್ಗೆ ಮತ್ತು ಇದರ ಸದುಪಯೋಗ ಮಾಡಿಕೊಳ್ಳಬೇಕು ಮತ್ತು ಸಂಬಂಧಪಟ್ಟಂಥ ಅಧಿಕಾರಿಗಳನ್ನು ಹಿಡಿದು ಕೆಲಸ ಮಾಡಿಸಿ ಸಮರ್ಪಕವಾಗಿ ಜನತೆಗೆ ನೀರನ್ನು ಮುಟ್ಟಿಸುವಂಥ ಕೆಲಸ ಮಾಡಬೇಕೆಂದು ಸರ್ಕಾರದ ಸುತ್ತೋಲೆಯನ್ನು ಮೇಲಿಂದ ಮೇಲೆ ಎಲ್ಲಾ ಶಾಸಕರಿಗೂ ಕಳುಹಿಸಿಕೊಟ್ಟಿದೆ. ಇದರಿಂದ ಏನು ತಿಳಿಯುತ್ತದೆ ಎಂದರೆ, ಜನತೆಯ ಮೇಲೆ ಸರ್ಕಾರ ಇಟ್ಟಿರತಕ್ಕಂಥ ಕಾಳಜಿಯ ದ್ಯೋತಕ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಎರಡನೇ ಬಾರಿಗೆ ಬರಗಾಲಕ್ಕೆ ತುತ್ತಾಗಿರತಕ್ಕಂಥ ಪರಿಸ್ಥಿತಿ ಬಂದಿದೆ. ಈ ಸಂದರ್ಭದಲ್ಲಿ ರೈತ ಮಾಡಿರತಕ್ಕಂಥ ಸಾಲದ ಮೇಲಿನ ಸುಮಾರು 117ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಮನ್ನಾ ಮಾಡುವಂಥದ್ದು ಮತ್ತು ಎಲ್ಲಿ ದಾರುಣ ಸ್ಥಿತಿ ಇದೆ ಅಲ್ಲಿ ಕಂದಾಯವನ್ನು ಕೂಡ ಮನ್ನಾ ಮಾಡಿರುವಂಥದನ್ನು ನೋಡಿದರೆ ಸರ್ಕಾರ ಬರಗಾಲ ಸಮಯದಲ್ಲಿ ಜನತೆಯ ಸಲುವಾಗಿ ಇದಕ್ಕಿಂತ ಹೆಚ್ಚೇನು ಮಾಡಬೇಕು ಎನ್ನತಕ್ಕಂಥದನ್ನು ಪರಿಶೀಲಿಸಬೇಕಾಗುತ್ತದೆ, ಈ ಎಲ್ಲಾ ಬೆಳವಣಿಗೆಗಳ ವಿಚಾರಗಳೂ ಕೂಡ ನಮ್ಮ ವಿರೋಧ ಪಕ್ಷದ ಸ್ನೇಹಿತರ ಮನಸ್ಸಿಗೆ ಬಂದಿದೆ. ಆದರೆ ಹೊಗುಳುವುದಕ್ಕೆ ಬರುತ್ತಿಲ್ಲ. ಕಾರಣ ಏನೆಂದರೆ, ಕರ್ತವ್ಯ ಚ್ಯುತಿ ಆಗುತ್ತದೆ ಎಂದು, ಮತ್ತೆ ಇನ್ನಷ್ಟು ಕೆಲಸ ಮಾಡಲಿ ಎನ್ನತಕ್ಕಂಥ ದೃಷ್ಟಿಯಿಂದ ಬಹುಶಃ ಅವರು ಟೀಕೆಗಳನ್ನು ಮಾಡುತ್ತಿದ್ದಾರೆ.ಹೊಗಳುವ ಸಂದರ್ಭದಲ್ಲಿ ಅವರು ಇವತ್ತಿನದಿವಸ ಇಲ್ಲ. ಆದ್ದರಿಂದ, ಅವರು ಟೀಕೆ ಮಾಡಲೇ ಬೇಕಾಗುತ್ತದೆ. ಅವರಿಗೆ ಮನಸ್ಸಿದ್ದರೂ ಕೂಡ ಈ ಸಂದರ್ಭದಲ್ಲಿ ಟೀಕೆ ಮಾಡಲೇಬೇಕಾಗುತ್ತದೆ. ಅಂಕಿ -ಅಂಶಗಳನ್ನು ತಮ್ಮ ಮುಂದಿಟ್ಟಿದ್ದರೂ ಕೂಡ ಮತ್ತು ಬರಗಾಲದ

ಕಾಮಗಾರಿಗಳು ಸಾಕಷ್ಟು ನಡೆದಿದ್ದರೂ ಕೂಡ ಹಾಗೂ ರೈತರ ಸಾಲದ ಮೇಲಿನ ಬಡ್ಡಿಯನ್ನು ಮತ್ತು ಕಂದಾಯವನ್ನು ಮನ್ನಾ ಮಾಡಿದ್ದರೂ ಕೂಡ ಹಾಗೂ ಹಲವಾರು ಅಭಿವೃದ್ಧಿ ಕಾರ್ಯಗಳಲ್ಲಿ ಸರ್ಕಾರ ತೊಡಗಿದ್ದರೂ ಸಹ ಟೀಕೆ ಮಾಡತಕ್ಕಂಥ ಸಂದರ್ಭ ಬಂದಿದೆ ಎಂದರೆ, ಅದು ಅವರ ಕರ್ತವ್ಯ ಎನ್ನತಕ್ಕಂಥ ಮಾತನ್ನು ನಾನು ಇವತ್ತು ಹೇಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಒಂದು ವಿಷಯ ನೆನಪಿಗೆ ಬರುತ್ತದೆ. ಅದೇನೆಂದರೆ, ಶ್ರೀ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಬಸ್ಸಿನ ದರವನ್ನು ಶೇಕಡ 30 ರಷ್ಟು ಹೆಚ್ಚಿಸಿದಂಥ ವಿಷಯ ವಿಧಾನಸಭೆಯಲ್ಲಿ ಚರ್ಚೆಗೆ ಬಂತು. ಆ ಸಂದರ್ಭದಲ್ಲಿ ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಬಸ್ಸಿನ ದರವನ್ನು ಜಾಸ್ತಿ ಮಾಡಿರತಕ್ಕಂಥದನ್ನು ವಿರೋಧ ಮಾಡಿದರು, ಇದು ಜನತೆಗೆ ಭಾರವಾಗುತ್ತದೆ ಬಸ್ಸಿನ ದರವನ್ನು ಜಾಸ್ತಿ ಮಾಡಿ ಜನತೆಗೆ ಮೋಸ ಮಾಡುತ್ತಿದ್ದೀರಿ ಮತ್ತು ಜನರ ಪರವಾಗಿ ತೆಗೆದುಕೊಂಡ ನಿರ್ಣಯ ಇದು ಅಲ್ಲ ಎಂದು ಜನರ ಪರವಾಗಿ ಮಾನ್ಯ ಸಿಂಧ್ಯರವರು ಆ ಸಂದರ್ಭದಲ್ಲಿ ಇಲ್ಲಿ ವಾದವನ್ನು ಮಾಡಿದರು, ಹಾಗೆಯೇ ಜನರಿಗೆ ಇದು ಭಾರವಾಗಿದೆ ಎನ್ನತಕ್ಕಂಥ ದೃಷ್ಟಿ ಇಟ್ಟುಕೊಂಡು ಜನಪ್ರತಿನಿಧಿಯಾಗಿ ಇವರು ವಾದ ಮಾಡಿದರು. ಆ ಸಂದರ್ಭದಲ್ಲಿ ಸನ್ಮಾನ್ಯ ವೀರೇಂದ್ರ ಪಾಟೀಲರು ಮಾನ್ಯ ಸಿಂಧ್ಯರವರಿಗೆ ಏನು ಉತ್ತರ ಹೇಳಿದರು ಎಂದರೆ, ಮಾನ್ಯ ಸಿಂಧ್ಯಾರವರೆ, ತಾವು ಇಲ್ಲಿದ್ದಂಥ ಸಂದರ್ಭದಲ್ಲಿ ಎರಡು ಮೂರು ಸಾರಿ ಬಸ್ಸಿನ ದರವನ್ನು ಹೆಚ್ಚಿಗೆ ಮಾಡಿದ್ದೀರಿ. ಏಕೆ ಹೆಚ್ಚಿಗೆ ಮಾಡಿದಿರಿ? ಡಿಸೇಲ್ ದರ ಹೆಚ್ಚಾಗಿತ್ತು, ಸ್ಪೇರ್ ಪಾರ್ಟ್ಸ್‌ಗಳ ದರ ಹೆಚ್ಚಾಗಿತ್ತು,

4.00 ಪಿಎಂ

ನೌಕರರ ಸಂಬಳ ಜಾಸ್ತಿಯಾಗಿತ್ತು ಇವುಗಳನ್ನು ಸರಿದೂಗಿಸುವುದಕ್ಕೋಸ್ಕರ ನೀವು ಎರಡು ಭಾರಿನೋ ಒಂದು ಭಾರಿನೋ ರೇಟನ್ನು ಜಾಸ್ತಿ ಮಾಡಿದಿರಿ, ಹಾಗೆ ಜಾಸ್ತಿ ಮಾಡಿರತಕ್ಕಂಥ ಸಂದರ್ಭದಲ್ಲಿ ಆ ಕಡೆ ಇರತಕ್ಕಂಥವರು ನಾವು ನೀವು ಹೇಳಿರುವಂಥ ಎಲ್ಲಾ ಮಾತುಗಳನ್ನು ನಾವು ಹೇಳಿದ್ದೇವೆ. ಆಗ ನೀವು ಸರ್ಕಾರದ ಜವಾಬ್ದಾರಿಯನ್ನು ಹೊತ್ತಿದ್ದೀರಿ, ಸರ್ಕಾರದ ಜವಾಬ್ದಾರಿಯನ್ನು ನಿರ್ವಹಿಸತಕ್ಕಂಥವರಿಗೆ ಅದನ್ನು ನಿಭಾಯಿಸತಕ್ಕಂಥವರಿಗೆ ಅದನ್ನು ಕಡಿಮೆ ಮಾಡಬೇಕೋ ಅಥವಾ ಹೆಚ್ಚು ಮಾಡಬೇಕೊ ಎನ್ನತಕ್ಕಂಥದ್ದು ಅವರಿಗೆ ವಿಧಿತವಾಗಿರತಕ್ಕಂಥ ವಿಚಾರ. ಆಗ ನೀವು ಹೇಳಿದ್ದೀರಿ, ಎಲ್ಲಾ ರೇಟ್ ಜಾಸ್ತಿಯಾಗಿರುವುದರಿಂದ ಅನಿವಾರ್ಯವಾಗಿ ರೇಟ್‌ನ್ನು ಜಾಸ್ತಿಮಾಡಬೇಕಾಗಿದೆ ಎನ್ನುವ ಮಾತನ್ನು ನೀವು ಹೇಳಿದಾಗ, ಇಲ್ಲಾ ಇಲ್ಲಾ ಎನ್ನುವ ಟೀಕೆಯನ್ನು ನಾವು ಮಾಡಿದ್ದೆವು, ಅವೊತ್ತು ನೀವೇನು ಹೇಳಿದಿರಿ ಆ ಮಾತನ್ನು ಹೇಳತಕ್ಕದಲ್ಲಿ ನಾನು ಇದ್ದೇನೆ, ಇದು ಜಾಸ್ತಿಯಾಗುತ್ತದೆಂದು ಹೇಳತಕ್ಕಂಥ ಸಂದರ್ಭದಲ್ಲಿ ನೀವು ಇದ್ದೀರಿ, ಇದರ ಬಗ್ಗೆ ತಾಂತ್ರಿಕವಾಗಿ ವಿಷಯ ನಿಮಗೆ ಗೊತ್ತಿದೆ, ರೇಟನ್ನು ಅನಿವಾರ್ಯವಾಗಿ ಹೆಚ್ಚು ಮಾಡಬೇಕಾಗಿದೆ ಎಂದು ಅಂದಾಗ ನೀವು ಸುಮ್ಮನೆ ಕುಳಿತ್ತಿದ್ದರು ಎಂದು ಜನರು ಅಂದುಗಿಂದಾರು ಎಂದು ಮತ್ತು ಕೇಳಿಗೀಳ್ಯಾರು ಎಂದು ಒಂದು ದೃಷ್ಟಿಯಿಂದ ನೀವು ಈ ಮಾತನ್ನು ಕೇಳುತ್ತಿದ್ದೀರಿ ಎಂದು ಅಂದಾಗ ಮಾನ್ಯ ಸಿಂಧ್ಯಾರವರು ಸುಮ್ಮನೆ ಕುಳಿತುಕೊಂಡರು, ಹಾಗಾಗಿ ಈಗ ನಡೆದಿರತಕ್ಕಂಥ ಕಾಮಗಾರಿಗಳು, ಈಗ ನಡೆದಿರತಕ್ಕಂಥ ಸುಧಾರಣೆಗಳು ಆಗಿರತಕ್ಕಂಥ ಬದಲಾವಣೆಗಳು ಎಲ್ಲದರ ಬಗ್ಗೆ ನಿಮಗೆ ಮೆಚ್ಚುಗೆ ಇದ್ದರೂ ಕೂಡ ಕರ್ತವ್ಯವನ್ನು ಪರಿಪಾಲನೆ ಮಾಡಬೇಕು ಎನ್ನುವ ದೃಷ್ಟಿಯಿಂದ ಇವತ್ತು ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ

ಮಾಡಿದ್ದರ ಬಗ್ಗೆ ಇರಲಿ, ಕಂದಾಯವನ್ನು ಮನ್ನಾ ಮಾಡಿದ್ದರ ಬಗ್ಗೆ ಇರಲಿ, ಬರಗಾಲ ಕಾಮಗಾರಿಗಳನ್ನು ಇವತ್ತು ಯುದ್ಧೋಪಾದಿಯಲ್ಲಿ ನಡೆದಿರತಕ್ಕಂಥದ್ದು ಇರಲಿ,ಕುಡಿಯುವ ನೀರಿನ ಸಮರ್ಪಕವಾದ ಪೂರೈಕೆಯನ್ನು ಮಾಡಿದ್ದು ಇರಲಿ, ಇದ್ದುದ್ದರಲ್ಲಿ ವಿದ್ಯುತ್‌ನ್ನು ಪೂರೈಕೆ ಮಾಡಿದ್ದು ಇರಲಿ ಆಂತರಿಕವಾಗಿ ಮೆಚ್ಚುಗೆ ಇದ್ದರೂ ಕೂಡ ಕರ್ತವ್ಯಪಾಲನೆಯ ದೃಷ್ಟಿಯಿಂದ ನೀವು ಹೀಗೆ ಹೇಳಬೇಕಾಗುತ್ತದೆಂದು ಭಾವನೆಯನ್ನು ನಾನು ಮಾಡಿಕೊಳ್ಳುತ್ತೇನೆ. ಜಲಾನಯನ ಅಭಿವೃದ್ಧಿಯ ಬಗ್ಗೆ ಒಂದು ದೊಡ್ಡ ವಿಚಾರ, ಇದು ಬಹಳಷ್ಟು ವರ್ಷಗಳ ಹಿಂದೆ ನಮ್ಮ ಎಲ್ಲಾ ಸರ್ಕಾರಗಳು ಬಹುಶಃ ಇದನ್ನು ತೆಗೆದುಕೊಂಡಿದ್ದರೆ, ಇವತ್ತು ಏನು ಸಮಸ್ಯೆ ಇದೆ, ಕುಡಿಯುವ ನೀರಿನ ವಿಷಯದಲ್ಲಿ ಇರಲಿ ಜಲಸಂಪನ್ಮೂಲವನ್ನು ರಕ್ಷಣೆ ಮಾಡುವಂಥ ವಿಚಾರದಲ್ಲಿ ಇರಲಿ ಮಳೆ ನೀರನ್ನು ರಕ್ಷಣೆ ಮಾಡುವಂಥ ವಿಚಾರದಲ್ಲಿ ಇರಲಿ, ನಾವು ಈ ಒಂದು ಬವಣೆಯನ್ನು ಎದುರಿಸುತ್ತಿರಲಿಲ್ಲ ಎನ್ನತಕ್ಕಂಥದ್ದನ್ನು ನಾನು ಪ್ರಾಕ್ಟಿಕಲ್ ಆಗಿ ನೋಡಿರತಕ್ಕಂಥ ವಿಚಾರವಾಗಿದೆ. ಇದು ಇಷ್ಟೊಂದು ಬಹುಪಯೋಗಿಯಾಗಿರತಕ್ಕಂಥ ಕಾರ್ಯಕ್ರಮವಿದೆ, ಎರಡು- ಮೂರು ವರ್ಷಗಳ ನನ್ನ ಅನುಭವದ ಪ್ರಕಾರ ಎಲ್ಲೆಲ್ಲಿ ಗೋಕಟ್ಟೆಗಳನ್ನು ಕಟ್ಟುವುದಕ್ಕೆ ಸಾಧ್ಯವಿದೆ, ಎಲ್ಲೆಲ್ಲಿ ಬಂಡಿಂಗ್ ಮಾಡುವುದಕ್ಕೆ ಸಾಧ್ಯವಿದೆ, ಎಲ್ಲಿ ನೀರು ಅನಾವಶ್ಯಕವಾಗಿ ಹರಿದು ಹೋಗುತ್ತದೆ ಅಲ್ಲಿ ಸಿಮೆಂಟಿನ ಒಡ್ಡನ್ನು ಕಟ್ಟುವುದಕ್ಕೆ ಸಾಧ್ಯವಿದೆ ಅದನ್ನು ಮಾಡಿದಾಗ ಅದರ ಪರಿಣಾಮ ಭಾರಿ ಪ್ರಮಾಣದಲ್ಲ ಜಲಸಂವರ್ಧನೆ ಜಾಸ್ತಿಯಾಗುತ್ತದೆ. ನನ್ನ ಕ್ಷೇತ್ರದಲ್ಲಿಯ ಒಂದು ಉದಾಹರಣೆಯನ್ನು ನಾನೇ ಕಟ್ಟಿರತಕ್ಕಂಥದ್ದರ ಬಗ್ಗೆ ಹೇಳ ಬೇಕೆಂದರೆ, ಕೇವಲ ಎರಡು ವರ್ಷದ ಅವಧಿಯಲ್ಲಿ ಇಂತಹ ಒಂದು ಜಲಾನಯನ ವಿಷಯಕ್ಕೆ ಸಂಬಂಧಿಸಿದಂಥ ಯೋಜನೆ ನಿರ್ಮಾಣ ಮಾಡಿರತಕ್ಕಂಥ ಕಾರಣದಿಂದ ಅಲ್ಲಿ ಮೊದಲು ಸುಮಾರು 40 ಫೋಟ್‌ಗೆ ಬಾವಿಯನ್ನು ತೆಗೆದಾಗ ನೀರು ಸಿಗುತ್ತಿತ್ತು, ಸುಮಾರು 250 ಫೂಟ್ ಬೋರ್ ಹಾಕಿದಾಗ ನೀರು ಸಿಗುತ್ತಿತ್ತು, ಈ ಒಂದು ಯೋಜನೆಯನ್ನು ಮಾಡಿದ ನಂತರ ಎರಡು ವರ್ಷಗಳಲ್ಲಿ ಸುಮಾರು 40-50 ಫೋಟ್ ಬೋರಿಗೆ ಸಾಕಷ್ಟು ನೀರು ಸಿಗತಕ್ಕಂಥ ಒಂದು ಬೆಳವಣಿಯಾಗಿದೆ, ಇದರ ಪರಿಣಾಮವನ್ನು ಬಹುಶಃ ರಾಜಸ್ಥಾನದಲ್ಲಿ ರಾಜೇಂದ್ರಸಿಂಗ್ ಎನ್ನತಕ್ಕಂಥವರು ಮಾಡಿರತಕ್ಕಂಥದ್ದನ್ನು ನೋಡಿದರೆ ಗೊತ್ತಾಗುತ್ತದೆ ಬರಗಾಲದಲ್ಲಿ ಯಾವಾಗಲು ರಾಜಸ್ಥಾನ ಇದ್ದಂಥ ಪ್ರದೇಶಗಳಲ್ಲಿ ಸುಮಾರು ಇಂತಹ ಸಾವಿರಾರು ಯೋಜನೆಗಳನ್ನು ಮಾಡಿರುವ ಕಾರಣದಿಂದ ಈವತ್ತು ಇಂತಹ ಅಲ್ಲಿ ಆಗಿರತಕ್ಕ ಸುಧಾರಣೆಗಳನ್ನು ನಾನು ಗಮನಿಸಬೇಕು ಒಬ್ಬನೇ ವ್ಯಕ್ತಿ 600-700 ಜಲಾನಯನ ವಿಷಯಕ್ಕೆ ಸಂಬಂಧಿಸಿದಂಥ ಒಂದು ಸುಧಾರಣೆಯನ್ನು ಮಾಡಿರತಕ್ಕಂಥ ಕಾರಣದಿಂದ ಇವತ್ತು ಸುಭಿಕ್ಷವಾಗಿ ರಾಜಸ್ಥಾನದ ಶೇಕಡಾ 70ರಷ್ಟು ಜನ ಬದುಕತಕ್ಕಂಥ ಒಂದು ಮಹಾನ್ ಸಾಧನೆಯಾಗಿದೆ. ಆ ದಿಸೆಯಲ್ಲಿ ಅಂತಹದ್ದನ್ನು ಎಲ್ಲಾ ಕಂಡುಕೊಂಡು ನಮ್ಮ ಸರ್ಕಾರ ಜಲಾನಯದ ಅಭಿವೃದ್ಧಿ ವಿಷಯದಲ್ಲಿ ದಾಪುಗಾಲನ್ನು ಹಾಕುತ್ತಾ, ಮುಂದಾಗತಕ್ಕಂಥ ವಿಚಾರದ ಬಗ್ಗೆ ಮನುಷ್ಯ ಮುತ್ಸದ್ದಿಯ ವಿಚಾರವನ್ನು ಮಾಡಬೇಕೇ ಹೊರತಾಗಿ ರಾಜಕೀಯ ದೃಷ್ಟಿಯ ವಿಚಾರ ಇರಬಾರದು ಎನ್ನುವ ಮಾತನ್ನು ಹಿರಿಯರು ಹೇಳುತ್ತಾರೆ, ಅಂದರೆ ಮುತ್ಸದ್ದಿತನದ ವಿಚಾರ ಯಾವುದು? ರಾಜಕೀಯ ವಿಚಾರ ಯಾವುದು? ಯಾರು ಮುಂದಿನ ಪೀಳಿಗೆಯ ಭವಿಷ್ಯದ ದೃಷ್ಟಿಯಿಂದ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಾರೋ ಅದು ಮುತ್ಸದ್ದಿತನದ ವಿಚಾರವಾಗುತ್ತದೆ.

ಯಾರು ಮುಂದಿನ ಚುನಾವಣೆ ಕಣ್ಣಿಟ್ಟು ಕೆಲಸವನ್ನು ಮಾಡಿಕೊಂಡು ಹೋಗುತ್ತಾರೋ ಅದು ರಾಜಕೀಯ ವಿಚಾರವಾಗುತ್ತದೆ.

(ಈ ಸಂದರ್ಭದಲ್ಲಿ ಮಾನ್ಯ ಯು. ಆರ್. ಸಭಾಪತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು ಯಾವಾಗಲೂ ಕೂಡ ಶ್ರೀಮಾನ್ ಎಸ್.ಎಂ.ಕೃಷ್ಣರವರ ನೇತೃತ್ವದ ಸರ್ಕಾರ ಇಂತಹ ಯೋಜನೆಗಳನ್ನು ಜಾರಿಗೆಗೊಳಿಸುವುದರಲ್ಲಿ, ಇವತ್ತು ಐ.ಟಿ.ಪಾರ್ಕ್ ನಿರ್ಮಾಣ ಮಾಡತಕ್ಕಂಥ ಪ್ರಶ್ನೆಯಾಗಿರಲಿ, ಮುಂದಿನ ಭವಿಷ್ಯತ್ತಿಗೆ ಅನುಕೂಲವಾಗತಕ್ಕಂಥ ಮತ್ತು ಬದುಕತಕ್ಕಂಥ ಜನತೆಗೆ ಅನುಕೂಲತೆಯನ್ನು ಒದಗಿಸತಕ್ಕಂಥ ಒಂದು ರೀತಿಯಲ್ಲಿಯೇ ಯೋಜನೆಗಳನ್ನು ಹಾಕಿಕೊಂಡು ಹೊರಟಿದೆ ಎನ್ನತಕ್ಕಂಥದ್ದು, ಅದರಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮ ಬಹುಮುಖ್ಯ ಪಾತ್ರವನ್ನು ವಹಿಸಿದ್ದು, ಇದರಲ್ಲಿ ಸ್ಥಳೀಯ ರೈತರ ಸಹಭಾಗಿತ್ವದಲ್ಲಿ ಅದರ ಪರಿಣಾಮಕಾರಿಯಾದಂಥ ಜಾರಿಗೊಳಿಸುವಲ್ಲಿ ಕಟ್ಟುನಿಟ್ಟಾದ ಕಾರ್ಯಕ್ರಮವಾಗಿದೆ. ಅದರಲ್ಲಿ ಯಾರಾದರೂ ಅಧಿಕಾರಿಗಳು ಒಂದು ವೇಳೆ ಹೆಚ್ಚು ಕಡಿಮೆ ಮಾಡಿದರೆ, ಇದು ನಮಗಾಗಿ ಮಾಡಿರತಕ್ಕಂಥ ಕಾರ್ಯಕ್ರಮ ನಮ್ಮ ಸಲುವಾಗಿ ಮಾಡಿರತಕ್ಕಂಥ ಕಾರ್ಯಕ್ರಮ ಎನ್ನತಕ್ಕಂಥದ್ದನ್ನು ಅವರಲ್ಲಿ ಕೆಚ್ಚು ಬರಲಿ, ಅವರಲ್ಲಿ ಆ ಒಂದು ಕಾಳಜಿ ಬರಲಿ ಎನ್ನತಕ್ಕಂಥ ದೃಷ್ಟಿಯಿಂದ ಅವರ ಸಹಭಾಗಿತ್ವದ ಜೊತೆಗೆ ಈ ಕಾರ್ಯಕ್ರಮ ಇನ್ನು ಪರಿಣಾಮಕಾರಿಯಾಗಿ ಇವತ್ತು ನಡೆದಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಸ್ವಸಹಾಯ ಗುಂಪು ನಮ್ಮ ಸ್ನೇಹಿತರಾದ ಮಾನ್ಯ ಮುದ್ದಹನುಮೇಗೌಡರು ಆ ವಿಷಯವನ್ನು ವಿಶಾಲವಾಗಿ ಪ್ರಸ್ತಾಪ ಮಾಡಿದ್ದಾರೆ. ಒಂದೊಂದು ಸಣ್ಣಸಣ್ಣವಾದ ಕಾರ್ಯಕ್ರಮಗಳು, ಎಷ್ಟು ಪ್ರಮಾಣದಲ್ಲಿ ಪರಿಣಾಮವನ್ನು ಕೊಡುತ್ತವೆ, ಏಕೆಂದರೆ ಮತಕ್ಷೇತ್ರಗಳಲ್ಲಿ ಈ ಕಾರ್ಯಕ್ರಮಗಳಿಗೆ ನಾವು ಹೋದಾಗ, ಸ್ವಲ್ಪ ಹಿಂದೆ ಯೋಚನೆ ಮಾಡಿ ನೋಡಿ, ನಾವು ಯಾವುದೇ ಕಾರ್ಯಕ್ರಮಕ್ಕೆ ಹೋದಾಗ ಪಂಚಾಯಿತಿಯ ಸದಸ್ಯಣಿಯರನ್ನು ಹೊರತುಪಡಿಸಿ ಮಹಿಳೆಯರು ಹೆಚ್ಚು ಭಾಗವಹಿಸದೆ ಇರತಕ್ಕಂಥ ಕಾರ್ಯಕ್ರಮವನ್ನು ನಾವು ನೋಡಿರುತ್ತೇವೆ, ಮಹಿಳೆಯರು ನೇರವಾಗಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿರತಕ್ಕಂಥದ್ದು ಈ ಹಿಂದಿನ ಯಾವ ಕಾರ್ಯಕ್ರಮದಲ್ಲಿ ಕೂಡ ಎಲ್ಲಿಯೂ ಇಲ್ಲ, ಬಹಳವಾದರೆ ಅಕ್ಕನಬಳಗ ಮಹಿಳೆಯರಿಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಅಷ್ಟೆ, ಅದು ಒತ್ತಾಯಪೂರ್ವಕವಾಗಿ ಕರೆದರೆ ಶೇಕಡಾ 10-15 ರಷ್ಟು ಬರುವುದು ಕಷ್ಟ. ಆದರೆ ಈ ಸ್ವಸಹಾಯ ಗುಂಪಿನ ಸ್ತ್ರೀ ಶಕ್ತಿ ಯೋಜನೆಯನ್ನು ಪ್ರಾರಂಭಿಸಿದ ಮೇಲೆ, ಬಹಳ ಧೈರ್ಯದಿಂದ ಬಂದು ಕುಳಿತುಕೊಂಡು ನೀವು ಕೊಟ್ಟಿರತಕ್ಕಂಥ ಸಾಲವನ್ನು ನಾವು ತುಂಬಿದ್ದೇವೆ, ಎಮ್ಮೆ, ಆಕಳು ಕೊಳ್ಳಲಿಕ್ಕೆ ಕೊಟ್ಟಿರುವಂತಹ ನಾವು ಹೈನುಗಾರಿಕೆಯ ಅಭಿವೃದ್ಧಿಯನ್ನು ಪಡಿಸಿ ಆ ಸಾಲವನ್ನು ತುಂಬಿ ಸಾಲದಿಂದ ಮುಕ್ತರಾಗಿದ್ದೇವೆ, ಮತ್ತೆ ನಮಗೆ ಸಾಲವನ್ನು ಕೊಡಿ ಎಂದು ಮುಂದೆ ಬರತಕ್ಕಂಥದ್ದನ್ನು ನೋಡಿದರೆ, ಇದೆ ಬದಲಾವಣೆ, ಬದಲಾವಣೆ ಎಂದರೆ ಏನು? ಯಾರನ್ನು ಕೇಳದೆ ಮನೆಯಲ್ಲಿ ಕುಳಿತಿರತಕ್ಕಂಥವರು, ನಮಗೆ ಬೇಕು ಎಂದು ಕೇಳತಕ್ಕಂಥ ಪರಿಸ್ಥಿತಿ ಇದೆ, ಇವತ್ತು ಮನೆಯಿಂದ ಹೊರಗೆ ಬಂದು ಕೇಳತಕ್ಕಂಥದ್ದೇ ಬದಲಾವಣೆ, ಬದಲಾವಣೆ ಎಂದ ತಕ್ಷಣ ಇವತ್ತು ಕೇವಲ ಕಾಗದದಲ್ಲಿ ಕಾರ್ಯಕ್ರಮ ಮಾಡತಕ್ಕಂಥದ್ದು ಬದಲಾವಣೆ ಅಲ್ಲ, ಅಂಕಿ ಸಂಖ್ಯೆಗಳು ಹೇಳತಕ್ಕಂಥದ್ದು ಬದಲಾವಣೆ ಅಲ್ಲ, ನನ್ನ ಸಂಸಾರಕ್ಕೆ ನಾನು ಕೂಡ ಭುಜವನ್ನು ಕೊಡುತ್ತೇನೆ ಎನ್ನತಕ್ಕಂಥದ್ದು, ನನ್ನ ಸಂಸಾರದ ನಿರ್ವಹಣೆಯಲ್ಲಿ

ಬಡತನದ ನಿರ್ವಹಣೆಯಲ್ಲಿ ಗಂಡನ ಪಾಲು ಅಷ್ಟೇ ಬೇಡ, ಅದರಲ್ಲಿ ನಾನು ಕೂಡ ಭುಜವನ್ನು ಕೊಡುತ್ತೇನೆ ನನ್ನ ಪಾಲಿನ ಸಹಭಾಗಿತ್ವದಲ್ಲಿ ನಾನು ಸಹ ಪಾಲ್ಗೊಳ್ಳುತ್ತೇನೆ ಎನ್ನತಕ್ಕಂಥ ರೀತಿಯಲ್ಲಿ ಮುಂದೆ ಬಂದು ಪಾಲ್ಗೊಳ್ಳುತ್ತಿರುವುದರಿಂದ ಅದಕ್ಕೆ ವ್ಯವಸ್ಥೆಯನ್ನು ಮಾಡಿರುವಂಥದ್ದು ಮುಖ್ಯವಾಗಿದೆ. ಇವತ್ತು ಸುಮಾರು 24,000 ಅಂತಹ ಸ್ವಸಹಾಯ ಸಂಘಗಳಿವೆ, 10 ಕೋಟಿ ರೂಪಾಯಿಗಳಷ್ಟು ಹಣ ಡಿಪಾಸಿಟ್ ಆಗಿರುತ್ತದೆ, ಅದು ಅವರ ಒಂದು ಹಣವಾಗಿದೆ, ಇದಕ್ಕೆ ಮತ್ತೆ ಬ್ಯಾಂಕಿನ ಸಾಲ, ಹೀಗಾಗಿ ಆರ್ಥಿಕವಾದ ಒಂದು ಸ್ವಾವಲಂಬನೆ ಗ್ರಾಮಾಂತರ ಪ್ರದೇಶದಲ್ಲಿ ಬಂದಿದೆ, ನಾವು ಕಾರ್ಯಕ್ರಮಗಳಿಗೆ ಹೋದಂಥ ಸಂದರ್ಭದಲ್ಲಿ, ಸರ್ಕಾರ ಹಿಂದೆ ಕೊಡಮಾಡಿರತಕ್ಕಂಥ ಹಿಂದಿನ ಸಾಲದಲ್ಲಿ ವ್ಯವಸ್ಥೆಯಲ್ಲಿ ತುಂಬುವ ಸಾಲವೆಂದು ನಾವು ಇಟ್ಟುಕೊಂಡಿಲ್ಲ ಕೇಳಿರಲಿಲ್ಲ, ಇದು ತುಂಬಲಾರದಂಥ ಸಾಲ, ಒಂದಿಲ್ಲ ಒಂದು ದಿವಸ ಈ ಸಾಲ ಮನ್ನಾ ಆಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದಲೇ ಈ ಸಾಲಗಳ ವ್ಯವಸ್ಥೆ ಇವತ್ತು ಕೆಲವೊಂದು ಕಡೆ ಬಂದಿರತಕ್ಕಂಥದಾಗಿದೆ. ಆದರೆ ಈ ಸ್ತ್ರೀ ಶಕ್ತಿ ಸ್ವಸಹಾಯ ಗುಂಪಿನ ಯೋಜನೆಗಳಲ್ಲಿ ಎಷ್ಟು ಮಹಿಳೆಯರು ಸಾಲಗಳನ್ನು ಪಡೆದುಕೊಂಡಿದ್ದಾರೆ, ನಿರಾಂತಕವಾಗಿ, ನಿರಂತರವಾಗಿ ಕಂತುಗಳನ್ನು ತುಂಬಿದ್ದಾರೆ, ಸಾಲವನ್ನು ಪೂರ್ತಿಯಾಗಿ ಕೊಟ್ಟು ಮತ್ತೆ ಸಾಲವನ್ನು ಕೇಳುತ್ತಿದ್ದಾರೆ, ಇದರಲ್ಲಿ ಸ್ಥಳೀಯ ಸಹಭಾಗಿತ್ವವು ಕೂಡ ಸಹಕಾರ ಸಂಘಗಳ ಇರಬಹುದು, ಇವತ್ತು ಸಾಮಾಜಿಕವಾಗಿ ಸಮಾಜದ ಕೆಲವೊಂದು ವಿಚಾರದಲ್ಲಿ ಪಾಲ್ಗೊಳ್ಳುವ ಉದ್ದೇಶದಿಂದಲೂ ಕೂಡ ತಮ್ಮ ಉತ್ತಮವಾದಂಥ ಕಾರ್ಯವನ್ನು ಇವತ್ತು ಮಾಡುತ್ತಿರುವಂಥದ್ದು ಈ ಸ್ವಸಹಾಯ ಗುಂಪು ಯೋಜನೆ ಬಂದಿರುವುರಿಂದ ಆಗಿರುತ್ತದೆ, ಎಷ್ಟೋ ಕಡೆ ಬೇಜವಾಬ್ದಾರಿ ಮನೆ ಯಜಮಾನ ಇರುವ ಸಂಸಾರಗಳಿಗೆ ಕೂಡ ಒಳ್ಳೆಯದಾಗಿದೆ, ಬಹಳಷ್ಟು ಸಂಸಾರಗಳನ್ನು ನಾವು ಹೋಗಿ ನೋಡಿದಾಗ ಈ ಸ್ತ್ರೀ ಶಕ್ತಿ ಯೋಜನೆಯಿಂದ ನಿಮಗೆ ಏನು ಉಪಯೋಗವಾಗಿದೆ ಎಂದು ಕೇಳಿದಾಗ , ಏನು ಮಾಡಲಿ ಸಾಹೇಬರೆ, ನನ್ನ ಗಂಡ ಇಂತಹವನು, ದುಡಿಯದೆ ಇರುವವನು, ನಾವು ದುಡಿದಿದ್ದರಲ್ಲಿ 10 ರೂಪಾಯಿಗಳನ್ನು ಕಸಿದುಕೊಂಡು ಹೋಗುವ ಪರಿಸ್ಥಿತಿ ಇತ್ತು, ಈ ಒಂದು ವ್ಯವಸ್ಥೆ ಬಂದ ಮೇಲೆ ನಾನು ಒಂದು ಆಕಳು ಅಥವಾ ಎಮ್ಮೆಯನ್ನು ಕಟ್ಟಿಕೊಂಡು ನನ್ನ ಮಕ್ಕಳನ್ನು ಸಾಕಿಕೊಂಡು ಹೊರಟಿರತಕ್ಕಂಥದ್ದಕ್ಕೆ ಸಹಾಯವಾಗಿದೆ ಎನ್ನತಕ್ಕಂಥ ಎಷ್ಟೋ ಉದಾಹರಣೆಗಳು ಬಂದಮೇಲೆ ಈ ಯೋಜನೆಯು ಎಷ್ಟು ಸಮರ್ಪಕವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದೆ ಈ ಯೋಜನೆಯು ಎಷ್ಟು ಆಕರ್ಷಣೆಯವಾಗಿ ಅಬಲೆಯರನ್ನು ಸಬಲೆಯರನ್ನಾಗಿ ಮಾಡುತ್ತಿರುವಂತಹ ಕಾರ್ಯಕ್ಕೆ ಹೊರಟಿದೆ ಎನ್ನತಕ್ಕಂಥದನ್ನು ಇವತ್ತು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ, ಇದರ ಪರಿಣಾಮ ಹೀಗಾಗಿದೆ ಎನ್ನತಕ್ಕಂತಹ ಮಾತನ್ನು ಇವತ್ತು ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ, ಹಳದಿ ಕಾರ್ಡಿನ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಇದನ್ನು ಹುಡುಕುವುದರಲ್ಲಿ ಸ್ವಲ್ಪ ಅಧಿಕಾರಿ ಮಟ್ಟದಲ್ಲಿ ಹಿಂದೆ ಎಡವಟ್ಟಾಗಿದೆ, ಕೆಲವೊಂದು ಯೋಜನೆಗಳನ್ನು ಜನರಿಗೆ ಮುಟ್ಟಿಸತಕ್ಕಂತಹ ಸಂದರ್ಭದಲ್ಲಿ ನಾವು ಸಂಪೂರ್ಣವಾಗಿ ಸರ್ಕಾರಿ ಅಧಿಕಾರಿಗಳನ್ನು ಕೈಬಿಡಬಾರದು ಎನ್ನತಕ್ಕಂಥದ್ದು ನನ್ನ ಒಂದು ವಿಚಾರವಾಗಿದೆ, ಹಳದಿ ಕಾರ್ಡುಗಳನ್ನು ಹಿಂದೆ ಕೊಟ್ಟಿರುವುದನ್ನು ನಾವೇ ನಮ್ಮ ಮತಕ್ಷೇತ್ರದಲ್ಲಿ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಇದು ಬಡವರಿಗೆ ಮುಟ್ಟಿಲ್ಲ, ಎಲ್ಲೋ ಕಟ್ಟೆಯ ಮೇಲೆ ಕುಳಿತುಕೊಂಡು ಬರೆದುಕೊಂಡು ಬಂದಿದ್ದಾರೆ ಎನ್ನತಕ್ಕಂಥದ್ದು ಕೂಡ ಗಮನಕ್ಕೆ ತಂದಿದ್ದೇನೆ. ಇದು ಬಹಳಷ್ಟು ಸದಸ್ಯರ ಅನುಭವವಾಗಿದೆ.ಇವುಗಳನ್ನು

ಕೂಡ ಆ ಒಂದು ವಿಷಯದಲ್ಲಿಯೂ ಕೂಡ ಎಡವಿರತಕ್ಕಂತಹ ಸಣ್ಣ ಪುಟ್ಟ ಅಧಿಕಾರಿ ವಿಷಯದಲ್ಲಿಯೂ ವಿಧಾನಸಭೆಗೆ ನಾವು ಕೈ ಮಾಡಿ ತೋರಿಸತಕ್ಕಂತಹ ಪರಿಸ್ಥಿತಿಗೆ ಬರಬಾರದು, ಅದರ ಬಗ್ಗೆ ಕಂದಾಯದ ಆಯುಕ್ತರ ಕಡೆಗಾಗಲೀ ಅಥವಾ ಕಂದಾಯ ಸಚಿವರ ಕಡೆಗಾಗಲೀ ಕೈ ಮಾಡಿ ತೋರಿಸತಕ್ಕಂತಹ ಪರಿಸ್ಥಿತಿಗೆ ಬರಬಾರದು. ಅಲ್ಲಿ ಮಾಡಿರತಕ್ಕಂತಹ ವಿಲೇಜ್ ಅಕೌಂಟೆಂಟ್, ಪಂಚಾಯಿತಿ ಕಾರ್ಯದರ್ಶಿಯು ಮಾಡಿರತಕ್ಕಂತಹ ತಪ್ಪುಗಳನ್ನು ನಾವೇ ಅಲ್ಲಿ ಸರಿಪಡಿಸತಕ್ಕಂತಹ ವ್ಯವಸ್ಥೆಗೆ ಇಳಿಯಬೇಕು, ಈ ಹಳದಿ ಕಾರ್ಡುಗಳನ್ನು ಬಡವರಿಗೆ ಮುಟ್ಟಿಸತಕ್ಕಂತಹ ವ್ಯವಸ್ಥೆಯಲ್ಲಿ ನಾವು ಶಾಸಕರು ಇರಬಹುದು, ಜಿಲ್ಲಾ ಪಂಚಾಯಿತಿ ಸದಸ್ಯರು, ಗ್ರಾಮಪಂಚಾಯಿತಿ ಸದಸ್ಯರು ತಾಲ್ಲೂಕು ಪಂಚಾಯಿತಿ ಸದಸ್ಯರು ಕೂಡ ಇದರಲ್ಲಿ ಭಾಗವಹಿಸಿದರೆ ಒಂದು ಸಮರ್ಪಕವಾದ ಆಯ್ಕೆಯಲ್ಲಿ ಈ ರೀತಿಯಾಗಿ ಸರ್ಕಾರ ನಿಗಧಿಪಡಿಸಿರತಕ್ಕಂತಹ ಅಳತೆಗೋಲನ್ನು ಮೀರಬಾರದೆಂಬ ದೃಷ್ಟಿಯಲ್ಲಿ ಕೇವಲ ಅವರ ಮೇಲೆ ಆ ಒಂದು ಯೋಜನೆಯನ್ನು ಬಿಡದೆ, ನಾವು ಅದರಲ್ಲಿಯೂ ಕೂಡ, ನಾವೆಲ್ಲರೂ ನಮ್ಮ ಜವಾಬ್ದಾರಿಯಿಂದ ಭಾಗವಹಿಸಿದಾಗ ಈ ಯೋಜನೆಯು ಸಮರ್ಪಕವಾಗಿ ಜನರಿಗೆ ಮುಟ್ಟುವಲ್ಲಿ ಸಹಕಾರಿಯಾಗುತ್ತದೆ, ಸ್ವಲ್ಪ ಸಮಯದಲ್ಲಿ ಈ ಹಳದಿ ಕಾರ್ಡಿನ ಒಂದು ವ್ಯವಸ್ಥೆಯು ಬಡಜನತೆಗೆ ಮುಟ್ಟುವಲ್ಲಿ ಸರ್ಕಾರ ತನ್ನ ಸಂಪೂರ್ಣವಾದ ಜವಾಬ್ದಾರಿಯನ್ನು ನಿರ್ವಹಿಸುತ್ತದೆ.ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಒಂದು ಚರಿತ್ರಾರ್ಹವಾದಂತಹ ಬೆಳವಣಿಗೆ ವಸತಿ ಯೋಜನೆ, ಇದನ್ನು ಎಲ್ಲರೂ ಕೂಡ ಮೆಚ್ಚಿಕೊಳ್ಳಬೇಕಾಗಿರುವುದು. ಈ ರಾಜೀವ್‌ಗಾಂಧಿ ವಸತಿ ಯೋಜನೆ, ಈ ನಿಗಮದ ಕೆಳಗಡೆ ಸರ್ಕಾರ ಯಾವ ಒಂದು ಗುರಿಯನ್ನು ನಿಗಧಿಪಡಿಸಿಕೊಂಡಿತ್ತು, ಇಷ್ಟು ಮನೆಗಳನ್ನು ಬಡವರ ಸಲುವಾಗಿ ಕಟ್ಟಬೇಕೆಂದು ಏನು ಒಂದು ಯಿಯೋಜನೆಯನ್ನು ಹಾಕಿಕೊಂಡಿತ್ತೋ, ಆಯೋಜನೆಯ ಗುರಿಯನ್ನು ಮೀರಿ ಕೆಲಸ ಮಾಡಿರತಕ್ಕಂಥದ್ದು ಇವತ್ತು ನಮ್ಮ ಕರ್ನಾಟಕ ಸರ್ಕಾರ, ಅದನ್ನು ಪ್ರತಿಯೊಬ್ಬರು ಕೂಡ ಮೆಚ್ಚಿಕೊಳ್ಳಬೇಕು ಎನ್ನತಕ್ಕಂತಹ ಮಾತು ಅದನ್ನು ಮೆಚ್ಚಿಕೊಳ್ಳಬೇಕಾದಂತಹ ಅಂಶವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಇವತ್ತು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಸುಮಾರು ಇವತ್ತಿನವರೆವಿಗೆ 5,78,00 ಮನೆಗಳನ್ನು ಕಟ್ಟಿ ಜನತೆಗೆ ಕೊಟ್ಟಿರತಕ್ಕಂತಹ ಇದು ಸಣ್ಣ ಸಾಧನೆಯೇ ? ಸೂರಿಲ್ಲದವರಿಗೆ ಸೂರು ಕೊಡತಕ್ಕಂತಹದ್ದು, ಇವತ್ತು ಸರ್ಕಾರದ ಕರ್ತವ್ಯವಲ್ಲವೇನು? ಯಾವುದೇ ಜನತೆಗೆ ರಾಜ್ಯದಲ್ಲಿ ಬದುಕತಕ್ಕಂತಹ ಅತ್ಯಂತ ಕಠಿಣವಾಗಿರತಕ್ಕಂತಹ ಬಡತನದ ಪರಿಸ್ಥಿತಿಯಲ್ಲಿ ಬದುಕತಕ್ಕಂತಹವರಿಗೆ ಯಾವುದು ಅಸಾಧ್ಯವಾಗಿದೆ ಅದನ್ನು ಸಾಧ್ಯ ಮಾಡಿ ಕೊಡತಕ್ಕಂಥದ್ದು ಸರ್ಕಾರದ ಸ್ಪಷ್ಟವಾದ ಯೋಜನೆಯಾಗಿದೆ, ಹಲವಾರು ಕಡೆಗಳಲ್ಲಿ ಬಡಾವಣೆಗಳೇ ನಿರ್ಮಾಣವಾಗಿದೆ, ಇವತ್ತು ಗದಗ್‌ದಲ್ಲಿ ಸುಮಾರು ಎರಡೂವರೆ ಸಾವಿರ ಮನೆಗಳು ಒಂದೇ ಕಡೆ ಕಟ್ಟಿರುವುದು ನಾವು ನೋಡುತ್ತಿದ್ದೇವೆ, ಇವತ್ತು ಬಳ್ಳಾರಿ ಜಿಲ್ಲೆಯಲ್ಲಿ ಶಾಸಕರಾದ ಶ್ರೀ ಸಿರಾಜ್‌ಶೇಖ್‌ರವರ ಮತಕ್ಷೇತ್ರ ಕೂಡ್ಲಿಗೆಯಲ್ಲಿ ಸಾವಿರಾರು ಮನೆಗಳನ್ನು ಒಂದೇ ಕಡೆ ಕಟ್ಟಿರತಕ್ಕಂತಹದ್ದು . ಅಲ್ಲಿ ಪಾಲುದಾರಿಕೆಯೂ ಕೂಡ ತಮ್ಮ ಶಾಸಕತ್ವದ ಒಂದು ಪಾಲು ಕೂಡ ಅಲ್ಲಿ ಬರುತ್ತದೆ, ಅದೇ ರೀತಿಯಾಗಿ ದಾವಣಗೆರೆಯಲ್ಲಿ, ಸದಲಗಾದಲ್ಲಿ ಇವತ್ತು ನನ್ನ ಮತಕ್ಷೇತ್ರದಲ್ಲಿಯೂ ಕೂಡ ನೇಕಾರರ ಸಲುವಾಗಿ 750 ಮನೆಗಳನ್ನು ಇದೇ ಒಂದು ವರ್ಷದಲ್ಲಿ ಕಟ್ಟಿದ್ದಾರೆ, ಇದು ಎಂದೂ ಕೂಡ, ಇಂದು ಕೂಡ, ಎಂದೆಂದಿಗೂ ಸಾಧ್ಯವಾಗಿರಲಿಲ್ಲ, ಬೇಕಾದರೆ ಅದನ್ನು ತೋರಿಸತಕ್ಕಂತಹ ವ್ಯವಸ್ಥೆಯನ್ನು ಕೂಡ ನಾವು ಮಾಡುತ್ತೇವೆ, ಇದು ಸಾಧನೆ ಅಲ್ಲವೇ?

ಸ್ವಾಮಿ ಈ ಹಿಂದೆ ಕಟ್ಟಿರುವಂತಹ ಮನೆಗಳ ಸಂಖ್ಯೆ ಎಷ್ಟು? ಇವತ್ತು ನನ್ನ ಕ್ಷೇತ್ರದಲ್ಲಿ ನೇಕಾರರು ಬದುಕತಕ್ಕಂತಹ, ಅವರಿಗೆ ಅನುಕೂಲವಾಗತಕ್ಕಂತಹ ಮನೆಗಳನ್ನು ಈ ರಾಜೀವ್‌ಗಾಂಧಿ ವಸತಿ ನಿಗಮದಿಂದ ಕಟ್ಟಿರತಕ್ಕಂಥದ್ದು 700 ಮನೆಗಳನ್ನು,ಇದರಲ್ಲಿ ಈಗಾಗಲೇ 400 ಮನೆಗಳನ್ನು ಪೂರ್ತಿಯಾಗಿದೆ, ಇನ್ನು 300 ಮನೆಗಳು ಪ್ರಗತಿಯಲ್ಲಿವೆ. ಇದು ಹಾಗಾದರೆ ಟೀಕೆ ಮಾಡತಕ್ಕಂಥವರು ತಮ್ಮ ಕಾಲಾವಧಿಯಲ್ಲಿ ಕಟ್ಟುವುದಕ್ಕೆ ಸಾಧ್ಯವಾಗಲಿಲ್ಲವೇ? ಮಾಡಿರತಕ್ಕಂತಹ ಕೆಲಸಗಳನ್ನು ಜನಹಿತವಾದ ಕಾರ್ಯಗಳನ್ನು ಮಾಡಿದಾಗ ನಿಮ್ಮ ಪ್ರೋತ್ಸಾಹದ ಮಾತುಗಳು ಕೆಲಸ ಮಾಡತಕ್ಕಂತಹವರಿಗೆ ಇನ್ನಷ್ಟು ಸ್ಫೂರ್ತಿಯನ್ನು ಕೊಡುತ್ತದೆ, ಅದರಲ್ಲಿ ಸ್ವಲ್ಪ ನಾವು ವಿರೋಧಪಕ್ಷದವರು ಎನ್ನತಕ್ಕಂಥದ್ದು, ಬದಿಗೆ ಇಟ್ಟರೆ ಸ್ವಲ್ಪ ಸರಿಯಾದಂತಹ ಒಂದು ವಿಚಾರವೆಂದು ನಿಮಗೆ ಅರ್ಥವಾಗುತ್ತದೆ ಈ ಸಂದರ್ಭದಲ್ಲಿ ನಾನು ಇವತ್ತು ಹೇಳುತ್ತಿದ್ದೇನೆ.ಆ ದಿಸೆಯಲ್ಲಿ ನಾನು ಒಂದು ಪ್ರಶಂಸನೆ ಇಲ್ಲಿ ಮಾಡಿದರೆ ತಪ್ಪಾಗಲಿಕ್ಕಿಲ್ಲ. ಸರ್ಕಾರ ಸಿದ್ದಪಡಿಸಿರತಕ್ಕಂತಹ ಯೋಜನೆಯನ್ನು ಜಾರಿಗೊಳಿಸತಕ್ಕಂತಹ ಅಧಿಕಾರಿ ಸಮೂಹವು ಕೂಡ ಅಷ್ಟೇ ಆ ವಿಷಯದಲ್ಲಿಯೂ ಕೂಡ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದೆ. ಈ ರಾಜೀವ್‌ಗಾಂಧಿ ವಸತಿ ನಿಗಮದ ಆಯುಕ್ತರು ದಿನದ ನಾವು ಯಾವಾಗ ಹೋದರೂ ಕೂಡ ಅಫೀಸ್‌ನಲ್ಲಿ ಸಿಗತಕ್ಕಂತಹ ಅಧಿಕಾರಿಯಾಗಿದ್ದಾರೆ, ಕೆಲಸ ಮಾಡತಕ್ಕಂತಹವರು ಕೆಲಸ ಮಾಡುತ್ತಾರೆ ಎಂಬ ಮಾತನ್ನು ನಾವು ಹೇಳಬೇಕಾಗುತ್ತದೆ ರಾತ್ರಿ 8 ಗಂಟೆಗೆ ಹೋದರೂ ಕೂಡ ರಾಜೀವ್‌ಗಾಂಧಿ ವಸತಿ ನಿಗಮದ ಆಯುಕ್ತರು ನಮಗೆ ದೊರಕುತ್ತಾರೆ, ನಮಗೆ ಸಹಾಯವನ್ನು ಮಾಡುತ್ತಾರೆ, ಮನೆಗಳನ್ನು ಕಟ್ಟಿ ಎಂದು ಪ್ರೋತ್ಸಾಹವನ್ನು ಮಾಡುತ್ತಾರೆ,ಶ್ರೀಮಾನ್ ಎಸ್.ಎಂ.ಕೃಷ್ಣರವರು ಎಲ್ಲಿ ಮನೆಗಳನ್ನು ಕೇಳುತ್ತಾರೋ ಅಲ್ಲಿ ಕೊಡಿ, ಕಟ್ಟಿ ಎಂದು ಹೇಳುತ್ತಾರೆ, ನೀವು ಮನೆಗಳನ್ನು ಕಟ್ಟಿಕೊಳ್ಳಿ ಎಂಬ ಮಾತನ್ನು ದಿನದ ಸುಮಾರು 14-15 ತಾಸುಗಳು ಕೆಲಸ ಮಾಡುವಂತಹ ಅಧಿಕಾರಿಯಿಂದ ಕೂಡ ಈ ಯೋಜನೆಯು ಸಮರ್ಪಕವಾಗಿ ಜಾರಿಗೆ ಬರುವುದಕ್ಕೆ ಸಹಾಯವಾಗಿದೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏತಕ್ಕಾಗಿ ನಾನು ಈ ಮಾತನ್ನು ಹೇಳುತ್ತೇನೆಂದರೆ, ಯೋಜನೆಗಳನ್ನು ಸರ್ಕಾರ ರೂಪಿತ ಮಾಡಿದರೂ ಕೂಡ ಸಚಿವರಾಗಲೀ ದೊಡ್ಡ ದೊಡ್ಡ ಅಧಿಕಾರಿಗಳಾಗಲೀ ಯೋಜನೆಗಳನ್ನು ಸಿದ್ದಪಡಿಸಿದಾಗ ಜಾರಿಗೊಳಿಸತಕ್ಕಂತಹ ಏಜೆನ್ಸಿ ಏನಿದೆ, ಅದು ಸಮರ್ಪಕವಾಗಿ ಕೆಲಸವನ್ನು ಮಾಡಿದಾಗ ಅದು ಜನತೆಗೆ ಮುಟ್ಟುವುದಕ್ಕೆ ಸಾಧ್ಯವಿದೆ, ಅದು ಸಮರ್ಪಕವಾಗಿ ಕೆಲಸವನ್ನು ಮಾಡದೆ ಹೋದರೆ, ಜನತೆಗೆ ಮುಟ್ಟುವುದಕ್ಕೆ ಅಸಾಧ್ಯವಾಗುತ್ತದೆ. ಆ ಒಂದು ದಿಸೆಯಲ್ಲಿ 5,78,00 ಮನೆಗಳನ್ನು ಕಟ್ಟುವುದರಲ್ಲಿ ಎಲ್ಲಾ ಹಂತದ ಅಧಿಕಾರಿ ವರ್ಗದವರು ಕೂಡ ಪ್ರಾಮಾಣಿಕವಾಗಿರತಕ್ಕಂತಹ, ದಕ್ಷವಾಗಿರತಕ್ಕಂತಹ ಕೆಲಸ ಮಾಡಿದ್ದರಿಂದ ಇದು ಸಾಧ್ಯವಾಗಿದೆ ಎಂಬ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಮಾನ್ಯ ಛೇರ್ಮನ್‌ರವರೆ, ಸರ್ಕಾರದ ಗಮನಕ್ಕೆ ತರುವುದರ ಬಗ್ಗೆ ಸಲಹೆಯನ್ನು ಮಾಡುತ್ತೇನೆ. ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಆಮೂಲಾಗ್ರವಾದಂತಹ ಬದಲಾವಣೆಯಾಗಿದೆ, ಶ್ರೀಮಾನ್‌ವಿಶ್ವನಾಥ್‌ರವರು ಶಿಕ್ಷಣ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಮಾಡಿರತಕ್ಕಂತಹ ಬದಲಾವಣೆ, ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ ಎಂದರೆ ಹೇಗಿತ್ತು ಯೋಜನೆ? ಜೂನ್ ತಿಂಗಳಲ್ಲಿ ಶಾಲೆ ಪ್ರಾರಂಭ ಮಾರ್ಚ್ - ಏಪ್ರಿಲ್ ನಂತರ ನಡುವೆ ರಜೆಯ ದಿನಗಳನ್ನು ಬಿಟ್ಟು ಶಾಲೆಯು ಮುಗಿಯಿತ್ತೆಂದರೆ ಮುಗಿಯಿತು, ಮತ್ತೇ ಯಾವ ಒಂದು ಕ್ರಿಯೆಗಳು ಇಲ್ಲ,

ಯೋಜನೆಗಳು ಇಲ್ಲ, ಯಾವ ಒಂದು ಬದಲಾವಣೆಯು ಇಲ್ಲ , ಹೀಗೆ ನಿರಂತರವಾಗಿ ನಡೆಯುತ್ತಿತ್ತು. ನಾವು ಪ್ರಾಥಮಿಕ ಶಾಲೆಗೆ ಹೋಗುವುದರಿಂದ ಹಿಡಿದು ಸುಮಾರು 3 ವರ್ಷಗಳ ಹಿಂದಿನ ಸಮಯದ ತನಕ ಜನರು ಶಾಲೆಗಳತ್ತ ನೋಡತಕ್ಕಂತಹ ವ್ಯವಸ್ಥೆಯೇ ಇರಲಿಲ್ಲ. ಇದನ್ನು ಯಾರಾದರೂ ಕೂಡ ಮೆಚ್ಚಲೇಬೇಕು, ಒಪ್ಪಿಕೊಳ್ಳಲೇ ಬೇಕು, ನಾವು ಪ್ರಾಥಮಿಕ ಶಾಲೆಯಲ್ಲಿ ಕಲಿತು ಬಂದಿದ್ದೇವೆ, ಶಾಲೆಯ ಪ್ರಾರಂಭವಾದಾಗಿನಿಂದ ಶಾಲೆ ಸೂಚಿ ಕೊಡುವವರೆಗೆ ಅಷ್ಟೇ ಶಾಲೆ, ನಡುವೆ ಸೂಟಿಯಲ್ಲಿಯೂ ಕೂಡ ಶಾಲೆಯು ಕಡೆಗೆ ನಾವು ನೋಡುತ್ತಿರಲಿಲ್ಲ, ಮಾಸ್ತರರೂ ಕೂಡ ಬರುತ್ತಿರಲಿಲ್ಲ, ಆರಾಮವಾಗಿರತಕ್ಕಂತಹ ನೌಕರಿ ಯಾವುದಾದರೂ ಇದ್ದರೆ ಕನ್ನಡ ಶಾಲೆ ಪ್ರಾಥಮಿಕ ಶಾಲೆಯ ಶಿಕ್ಷಕರ ನೌಕರಿ ಬಹಳ ಆರಾಮವಾಗಿರುವಂತಹ ಒಂದು ನೌಕರಿ ಇತ್ತು, ಜಾಸ್ತಿ ರಜೆಗಳು ಇತ್ತು, ಕೆಲಸವು ಬಹಳಷ್ಟು ಕಡಿಮೆ ಇತ್ತು, ಆದರೆ ಹೊಸದಾದಂತಹ ಅಭಿಯಾನವನ್ನು ಪ್ರಾರಂಭಿಸಿದ ಮೇಲೆ ಸಮಾಜ ಶಾಲೆಯತ್ತ ನೋಡುವಂತಹ ಸಂದರ್ಭ ಬಂದಿದೆ, ಚಿನ್ನರ ಅಂಗಳ" ದಲ್ಲಿ ಭಾಗವಹಿಸತಕ್ಕತಹವರು ಯಾರು? ಯಾರು ಬಡತನದ ಕಿಚ್ಚಿನಲ್ಲಿ ಶಾಲೆಗೆ ಹೋಗುವುದಕ್ಕೆ ಅಸಾಧ್ಯವಾಗಿರುವಂತಹ ಸಂದರ್ಭದಲ್ಲಿ ಬದುಕಿ ಬಾಳಿ ಬೆಳದಿರತಕ್ಕಂತಹವರು ಮತ್ತೆ ಅಕ್ಷರಜ್ಞಾನವನ್ನು ಕಲಿಯುವುದಕ್ಕಾಗಿ ವ್ಯವಸ್ಥೆ ಮಾಡಿರುವುದು, ಇದು ಸಮಾಜವಾದ, ಇದು ಸಮಾನತೆ, ಇದು ಅಕ್ಷರಜ್ಞಾನವನ್ನು ಕೊಡುವಂತಹದ್ದು 11-12 ವರ್ಷದವರೆಗಿನ ಮಕ್ಕಳನ್ನು 1ನೇ ಇಯತ್ತೆಗೆ ಕರೆದುಕೊಂಡು ಬಂದು ಅವರ ವಯೋಮಿತಿಗೆ ಅನುಸಾರವಾಗಿ ಮತ್ತೆ ಶಾಲೆಗಳಿಗೆ ಪ್ರವೇಶವನ್ನು ಕೊಡಿಸುವಂತಹದ್ದು ಇದು ಸಾಮಾನ್ಯವಾಗಿರುವಂತಹ ಬದಲಾವಣೆಯೇ? ನನಗೆ ಅಕ್ಷರನ್ನು ಕಲಿಯುವುದಕ್ಕೆ ಸಾಧ್ಯವೇ ಇಲ್ಲವಲ್ಲಾ ಎನ್ನತಕ್ಕ ನೋಂದಿರತಕ್ಕಂತಹ ವ್ಯಕ್ತಿಯನ್ನು, ಇಲ್ಲ ನಿನಗೆ ಅಕ್ಷರದ ವ್ಯವಸ್ಥೆಯನ್ನು ಮಾಡಿದ್ದೇವೆ, ರಜೆಯ ದಿವಸಗಳಲ್ಲಿ ಆ ಶಿಕ್ಷಕರು ಅಲ್ಲಿದ್ದು ಬೆಳೆದಿರತಕ್ಕಂತಹವರನ್ನು ಕರೆಸಿ ಕೊಂಡು ಅಕ್ಷರಜ್ಞಾನವನ್ನು ಕೊಟ್ಟು ಅವರು ಅಕ್ಷರವನ್ನು 15 ದಿವಸಗಳ ಕಾಲ ಆ ಶಿಕ್ಷಕರು ಅದೇ ಒಂದು ಶಾಲೆಯಲ್ಲಿ ಮಲಗಿ ಎದ್ದಿರತಕ್ಕಂಥದ್ದು ವ್ಯವಸ್ಥೆಯನ್ನು ಮಾಡಿದ್ದೇವೆ, ಇದು ಬದಲಾವಣೆಯಲ್ಲವೇ? ಇದು ಸಮಗ್ರವಾಗಿರತಕ್ಕಂತಹ ಬದಲಾವಣೆಯನ್ನು ನಾವು ಮೆಚ್ಚಿಕೊಳ್ಳಬೇಕು. ಇದನ್ನು ನೀವು ಇನ್ನು ಮೆಚ್ಚಿಕೊಳ್ಳಲಿಲ್ಲವೆಂದರೆ ಏನು? ಮತ್ತೆ ಬದಲಾವಣೆ ಎಂದರೆ ಏನು? ಹಾಗಾದರೆ ಇದೇ ಬದಲಾವಣೆ, ಇದು ' ಚಿನ್ನರ ಅಂಗಳ' ಕ್ರಾಂತಿಕಾರಕವಾದಂಥ ಒಂದು ಬದಲಾವಣೆ, ಇತ್ತೀಚೆಗೆ 'ಬಾ ಮರಳಿ ಶಾಲೆಗೆ ' ಅಂತೆ ಯೇ ಚನಾಲಹರಿಯನ್ನು ಸರ್ಕಾರ ಕೊಟ್ಟಿದೆ, ಶಾಲೆಗೆ ಏಕೆ ಕರೆಯುತ್ತಿದ್ದಾರೆ? ಶಾಲೆಗೆ ಹೋಗಲು ಸಾಧ್ಯವಾಗದೇ ಇರತಕ್ಕಂಥವರಿಗೆ ಸಾಧ್ಯವಾಗಿ ಮಾಡಿ ತೋರಿಸಿಕೊಡತಕ್ಕಂಥಾದ್ದು ಈ ಯೋಜನೆಯ ಒಂದು ಉದ್ದೇಶ, ಶಾಲೆ ಬಿಡಬೇಡಿ, ಅಕ್ಷರಜ್ಞಾನ ಹೆಚ್ಚಾಗಲಿದೆ, ಶಿಕ್ಷಣದ ಅಭಿಯಾನ ಹೆಚ್ಚಾದಂತೆಲ್ಲ ಸಮಾಜದಲ್ಲಿರತಕ್ಕಂಥವರ ಕರ್ತವ್ಯ ಏನೆಂಬುದನ್ನು ತಮ್ಮನ್ನು ತಾವು ಹೊರಳಿ ನೋಡಿಕೊಳ್ಳತಕ್ಕಂಥ ಬುದ್ಧಿ ಮತ್ತೆ ಹಾಗೂ ಶಿಕ್ಷಣ ಕೊಡುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಬಾ ಮರಳಿ ಶಾಲೆಗೆ ಎನ್ನತಕ್ಕಂಥ ಕಾರ್ಯಕ್ರಮ ಇರುವಂಥಾದ್ದು, ಇವತ್ತು ಶಿಕ್ಷಕರು ಗಲ್ಲಿ ಗಲ್ಲಿಗಳಲ್ಲಿ, ಓಣಿ ಓಣಿಯಲ್ಲಿ, ವಾರ್ಡುಗಳಲ್ಲಿ ತಮಟೆ ಹೊಡೆಯುತ್ತಾ ಹೊರಟಿದ್ದಾರೆ, ಏಕೆ ತಮಟೆ ಹೊಡೆಯುತ್ತಾರೆ, ಎಂದರೆ ಶಾಲೆಗೆ ಬಾ ಮರಳಿ ಎಂದು. ಶಾಲೆಗೆ ಹೋಗುವುದಕ್ಕೆ ಯಾರಿಗೆ ಅಸಾಧ್ಯವಾಗಿದೆ, ಅವರನ್ನು ಮರಳಿ ಶಾಲೆಗೆ ಕರೆಯುವಂಥಾದ್ದು ಇದರ ಉದ್ದೇಶ, ಆದ್ದರಿಂದ ಇದೂ ಒಂದು ಉದಾಹರಣೆ,

ಇದು ಒಂದು ಸಾಧನೆ ಎನ್ನುವಂಥ ಮಾತನ್ನು ನಾನು ಹೇಳುತ್ತೇನೆ, ಇವತ್ತು ನಮ್ಮ ಏಳು ಜಿಲ್ಲೆಗಳಲ್ಲಿ ಬಿಸಿಊಟದ ಕಾರ್ಯಕ್ರಮ ಏನು ಹಮ್ಮಿಗ್ಗೊಳ್ಳಲಾಗಿದೆ ಇದರ ಬಗ್ಗೆ ಪರ ಮತ್ತು ವಿರೋಧ ಟೀಕೆಗಳು ಕೂಡ ಇವೆ, ಇದೇನು ನಾವು ಶಾಲೆಗೆ ಶಿಕ್ಷಕರನ್ನು ಕೇಳುತ್ತೇವೆ, ಕಟ್ಟಡಗಳನ್ನು ಕೇಳುತ್ತೇವೆ, ಕಾಂಪಾಡ್ ಕೇಳುತ್ತೇವೆ, ಆದರೆ ಇದೇನು ಊಟ ಕೊಡುತ್ತಿದ್ದಾರಲ್ಲಾ ಎಂದು ಕೇಳುತ್ತಾರೆ ಈ ಊಟ ಕೊಡುತ್ತಿರುವುದು ಯಾರಿಗೆ? ನಾಲ್ಕೈದು ಜನ ಮಕ್ಕಳನ್ನು ಹೊತ್ತಿರತಕ್ಕಂಥ ಆ ಸಂಸಾರದಲ್ಲಿ ಕನಿಷ್ಠ ಇಬ್ಬರು ಕೂಲಿಮಾಡಿದಾಗಲೇ ಆ ನಾಲ್ಕೈದು ಜನರ ಜೀವನ ನಡೆದುಕೊಂಡು ಹೋಗುತ್ತದೆ ಎನ್ನತಕ್ಕಂಥ ಎಷ್ಟೋ ಕುಟುಂಬಗಳು ನಮ್ಮ ಸಮಾಜದಲ್ಲಿ ಇವೆ, ಸಂಸಾರದಲ್ಲಿನ ಇಬ್ಬರು ಹುಡುಗರೂ ಕೂಡ ಕೂಲಿ ಮಾಡಿದಾಗ ಇಡೀ ಸಂಸಾರದ ಹೊಟ್ಟೆ ತುಂಬುವಂಥ ಪರಿಸ್ಥಿತಿ ಇದೆ, ಹೀಗಿರುವಾಗ ಅವರಿಗೆ ಒಂದು ಹೊತ್ತಿನ ಊಟದ ವ್ಯವಸ್ಥೆ ಮಾಡಬೇಕೆನ್ನುವ ಕಾರಣದಿಂದ ಇದನ್ನು ಮಾಡಿದ್ದರಿಂದ ಕೂಲಿಗೆ ಮಕ್ಕಳನ್ನು ಕರೆದುಕೊಂಡು ಹೋಗತಕ್ಕಂಥ ತಂದೆತಾಯಿಗಳು ಈಗ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ, ಇದೇ ಬದಲಾವಣೆ, ಇದು ಸಮಾಜವಾದಕ್ಕೆ ತರತಕ್ಕಂಥ ಒಂದು ತಿರುವು ಎನ್ನತಕ್ಕಂಥಾದ್ದು, ಒಂದು ವೇಳೆ ಈ ವ್ಯವಸ್ಥೆಯನ್ನು ಮಾಡದೇ ಹೋಗಿದ್ದರೆ ಆಮಕ್ಕಳು ಶಾಲೆಗೆ ಬರುವುದು ಅಸಾಧ್ಯವಾಗುತ್ತಿತ್ತು, ಅಕ್ಷರಜ್ಞಾನ ಅಸಾಧ್ಯವಾಗುತ್ತಿತ್ತು, ಆದರೂ ಕೂಡ ಗ್ರಾಮಗಳಲ್ಲಿ ಈ ಒಂದು ಬಿಸಿಊಟದ ಬಗ್ಗೆ, ಊಟ ಕೊಡುವುದಕ್ಕಿಂತ ಅಕ್ಕಿಯನ್ನು ಕೊಟ್ಟು ಕಳುಹಿಸಿದರೆ ಒಳ್ಳೆಯದೇನೋ ಎನ್ನತಕ್ಕಂಥ ಚರ್ಚೆ ನಡೆಯುತ್ತಿದೆ, ಶಾಲೆಗಳಲ್ಲಿ ಅಡುಗೆ ಮಾಡಲಿಕ್ಕೆ ಸ್ವಲ್ಪ ಜಾಸ್ತಿ ಹೊತ್ತು ಹೋಗುತ್ತದೆ ಎನ್ನತಕ್ಕಂಥ ವಿಚಾರ ಇದೆ.

ಶ್ರೀ ಬಿ.ಎಸ್. ಬಚ್ಚೇಗೌಡ : ಬಿಸಿ ಊಟ ಯಾವ್ಯಾವ ಜಿಲ್ಲೆಗಳಲ್ಲಿ ಕೊಡುತ್ತಿದ್ದಾರೆ? ನಿಮ್ಮ ಕಡೆಯ ಜಿಲ್ಲೆಗಳಲ್ಲಿ ಏನೋ ಬಿಸಿಯೂಟ ಕೊಡುತ್ತಿದ್ದಾರೆ, ನಮ್ಮ ಕಡೆಯಲ್ಲಿ ಕೊಟ್ಟಿಲ್ಲ. ಎಷ್ಟು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಬಿಸಿ ಊಟ ಸಿಕ್ಕಿದೆ ಎನ್ನುವುದು ನಮಗೆ ಗೊತ್ತಾಗಬೇಕು.

ಶ್ರೀ ಎಸ್.ಬಿ ನಂಜಯ್ಯನಮಠ್ : ಶ್ರೀಮಾನ್ ಬಚ್ಚೇಗೌಡ ಮತ್ತು ಎಸ್.ಎಸ್. ಪಾಟೀಲರು ಬಹಳ ಅನುಭವಿಗಳು, ಎಲ್ಲಿ ಬಡತನ, ಮೇಲಿಂದ ಮೇಲೆ ಬರ, ಬರೇ ಬಯಲು, ಹಸಿರೇ ಇಲ್ಲದಿರುವಂಥ ಸ್ಥಳಗಳು ಏನು ಈ ಏಳು ಜಿಲ್ಲೆಗಳು ಇವೆ, ಎಲ್ಲಿ ಮಕ್ಕಳನ್ನು ತಮ್ಮ ಜತೆಗೆ ತಂದೆತಾಯಿಗಳು ಕೂಲಿಗಾಗಿ ಕರೆದುಕೊಂಡು ಹೋಗತಕ್ಕಂಥ ವ್ಯವಸ್ಥೆಯ ಬದುಕಿನ ಹಿನ್ನಲೆ ಇದೆ, ಅಲ್ಲಿ ಮಾತ್ರ ಪ್ರಥಮವಾಗಿ ಈ ಯೋಜನೆಯನ್ನು ತೆಗೆದುಕೊಂಡಿರುವಂಥಾದ್ದು ಇದೆ, ಎಷ್ಟೇ ಆಗಲಿ ತಮ್ಮದೆಲ್ಲ ಸ್ವಲ್ಪ ಅನುಕೂಲವಾಗಿರುವಂತಹ ಪ್ರದೇಶಗಳು ಎಂಬುದನ್ನು ಮೊದಲು ನೆನೆಸಿಕೊಳ್ಳಬೇಕು. ಮಹಾರಾಜರು ಮಾಡಿದಂಥ ವ್ಯವಸ್ಥೆಯಿಂದ ತಾವು ಸುಭಿಕ್ಷರಾಗಿದ್ದೀರಿ. ಆ ವ್ಯವಸ್ಥೆ ಇಲ್ಲದೇ ಇರತಕ್ಕಂಥ ಆ ಕಡೆಯ ಪ್ರದೇಶಗಳಲ್ಲಿ ಈ ವ್ಯವಸ್ಥೆಯನ್ನು ಮಾಡಿದ್ದೇನೆ, ಪ್ರಸಂಗ ಬಂದರೆ ಇದು ಜನಪ್ರಿಯವಾಗಿ ನಡೆದರೆ ಹೆಚ್ಚಿಗೆ ಮಕ್ಕಳು ಶಾಲೆಗೆ ಬರುವಂತಾದರೆ ಇದನ್ನು ಇಡೀ ರಾಜ್ಯಾದ್ಯಂತ ತರಬಹುದೇನೋ. ಅದನ್ನು ಮುಂದೆ ಕಾದುನೋಡೋಣ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ನೀರಾವರಿ ವಿಚಾರದಲ್ಲಿ ಎಲ್ಲರೂ ಒಪ್ಪಿಕೊಳ್ಳತಕ್ಕಂಥಾದ್ದು ಅಂಕಿಸಂಖ್ಯೆಗಳು ಇವೆ, ಕಳೆದ ಮೂರು ವರ್ಷಗಳ ಸಾಧನೆಯಲ್ಲಿ ಅದ್ವಿತೀಯವಾದಂಥ ಸಾಧನೆಯನ್ನು ನೀರಾವರಿ ಯೋಜನೆಯಲ್ಲಿ ಮಾಡಿಕೊಂಡು ಬಂದಿರತಕ್ಕದ್ದನ್ನು ನಾವು ಕಾಣುತ್ತಿದ್ದೇವೆ, ಅದು ಕೃಷ್ಣಮೇಲ್ದಂಡೆ ಯೋಜನೆ ಇರಬಹುದು, ಕಾವೇರಿ ವಲಯದಲ್ಲಿರತಕ್ಕಂಥ

ಯೋಜನೆಗಳು ಇರಬಹುದು, ಮಲ್ಲಾಮಾರಿ, ಕಾರಂಜಾ, ಮಾರ್ಕಂಡೇಯ ಯೋಜನೆಗಳು ಇರಬಹುದು, ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಮಾಣದಲ್ಲಿ ಅದಕ್ಕೆ ಹಣಕಾಸಿನ ವ್ಯವಸ್ಥೆಯನ್ನು ನಮ್ಮ ಶ್ರೀ ಮಾನ್ ಎಸ್.ಎಂ,ಕೃಷ್ಣ ಅವರ ಸರ್ಕಾರ ಕೊಟ್ಟಿದೆ, ಎಷ್ಟು ಪ್ರಮಾಣದಲ್ಲಿ ಅಭಿವೃದ್ಧಿಕಾರ್ಯಗಳು ಆಗಿವೆ ಎಂಬುದನ್ನು ನೋಡಬಹುದು, ಅಪಾರದರ್ಶಕವಾಗಿ ಕೆಲವೇ ಜನರ ಗುತ್ತಿಗೆದಾರರ ಕೈಯಲ್ಲಿ ಸಿಕ್ಕಿ ನರಳುತ್ತಿದ್ದಂಥ ಯೋಜನೆಗಳಿಗೆ ಇವತ್ತು ಪ್ರಾಮಾಣಿಕವಾಗಿ ಜನತೆಗೆ ನೀರು ಮುಟ್ಟಿಸತಕ್ಕಂಥ ಕೆಲಸದಲ್ಲಿ ನೀರಾವರಿ ಇಲಾಖೆಯಲ್ಲಿ ಅಮೂಲಾಗ್ರವಾದ ಬದಲಾವಣೆಯನ್ನು ನಾವು ಕಾಣುತ್ತಿದ್ದೇವೆ, ಸಾವಿರಾರು ಕೋಟಿ ಹಣವನ್ನು ನಿರಂತರವಾಗಿ ಅದಕ್ಕೆ ಕೊಟ್ಟು ರಾಜ್ಯದ ಆರ್ಥಿಕ ಸ್ಥಿತಿಯನ್ನು ದಿಕ್ಕನ್ನು ಬದಲಾಯಿಸುತ್ತಾ ಇರತಕ್ಕಂಥ ಈ ಯೋಜನೆಗಳಿಗೆ ಸರ್ಕಾರ ಒತ್ತು ಕೊಟ್ಟಿರತಕ್ಕಂಥಾದ್ದು ಇವತ್ತು ರಾಜ್ಯಪಾಲರ ಭಾಷಣದಲ್ಲಿ ಒಂದು ಅಂಶದಲ್ಲಿ ವ್ಯಕ್ತವಾಗುತ್ತದೆ, ಒಂದು ವಿಚಾರವನ್ನು ನಾನು ಹೇಳುತ್ತೇನೆ, ಘಟಪ್ರಭಾ ಯೋಜನೆಯಲ್ಲಿ, ಸುಮಾರು ನಲ್ವತ್ತು ವರ್ಷಗಳ ಹಿಂದೆ ಪ್ರಾರಂಭವಾಗಿರತಕ್ಕಂಥ ಈ ಯೋಜನೆಯಲ್ಲಿ ಕೇವಲ ಹತ್ತು ಕಿಲೋಮೀಟರ್‌ನಷ್ಟು ಬಲದಂಡೆ ಕಾಲುವೆ ಮಾತ್ರ ನಿರ್ಮಾಣವಾಗಿತ್ತು, ಹೀಗೆ ಇದ್ದಂಥ ಈ ಯೋಜನೆಯಲ್ಲಿ ಈ ಮೂರು ವರ್ಷಗಳಲ್ಲಿ 102 ಕಿಲೋಮೀಟರ್ ಕಾಲುವೆಗಳನ್ನು ಘಟಪ್ರಭಾ ಬಲದಂಡೆ ಯೋಜನೆಯಲ್ಲಿ ತೋಡಿರತಕ್ಕಂಥಾದ್ದನ್ನು ನೋಡಿದರೆ ಈ ಸಾಧನೆ ಎಷ್ಟು ಎನ್ನತಕ್ಕದ್ದನ್ನು ತಾವೇ ಯೋಚನೆ ಮಾಡಬಹುದು, ನೆನೆಗುದಿಗೆ ಬಿದ್ದಿರತಕ್ಕಂಥ ಉತ್ತರ ಕರ್ನಾಟಕದ ಎಷ್ಟೋ ಯೋಜನೆಗಳಿಗೆ ಒಂದು ಶಕ್ತಿಯನ್ನು ಕೊಟ್ಟು ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕೂಡ ಇವತ್ತು ಭಾರಿ ನೀರಾವರಿಯಾಗಲೀ, ಮಧ್ಯಮ ನೀರಾವರಿ ಇಲಾಖೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸಿನ ನೆರವನ್ನು ಶ್ರೀಮಾನ್ ಎಸ್.ಎಂ ಕೃಷ್ಣ ಅವರ ಸರ್ಕಾರ ಕೊಟ್ಟಿದೆ ಎನ್ನುವುದಕ್ಕೆ ಈ ಅಂಕಿಸಂಖ್ಯೆಗಳೇ ಸಾಕ್ಷಿ. ನಮಗೆ ಮುತ್ಸದ್ದಿತನದ ಕೊರತೆ ಎಷ್ಟು ಇದೆ ಎಂದರೆ ಎಷ್ಟೋ ಕಡೆಗಳಲ್ಲಿ ಕಾಲುವೆಗಳ ನಿರ್ಮಾಣದ ಒಂದು ಮಾಪನವೇ ಇಲ್ಲ, ಅಣೆಕಟ್ಟು ಮುಗಿಯುತ್ತಾ ಬಂದರೂ ಕೂಡ ಕಾಲುವೆ ನಿರ್ಮಾಣ ಆಗದೇ ಇರತಕ್ಕಂಥ ಸ್ಥಿತಿ ಇತ್ತು, ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಎಡದಂಡೆ ಕಾಲುವೆಯಾಗಿತ್ತು, ಆದರೆ ಬಲದಂಡೆ ಕಾಲುವೆ ಆಗಿರಲಿಲ್ಲ, ಕಳೆದ ಮೂರು ವರ್ಷಗಳಲ್ಲಿ 67 ಕಿಲೋಮೀಟರ್‌ನಷ್ಟು ಕೃಷ್ಣಾ ಬಲದಂಡೆ ಕಾಲುವೆ ನಿರ್ಮಾಣವಾಗಿದೆ, ಆ ನಿರ್ಮಾಣವಾಗಿರತಕ್ಕಂಥ ಕಾಲುವೆಗೆ ಐದುನೂರು ಹೆಕ್ಟೇರ್ ಭೂಮಿಗೆ ನೀರು ಉಣಿಸತಕ್ಕಂಥ ಹೊಲಗಾಲುವೆ ಕೂಡ ಇವತ್ತು ನಿರ್ಮಾಣವಾಗಿದೆ. ಇದು ಬದಲಾವಣೆ ಅಲ್ಲವೇನು? ಇವತ್ತು ಭದ್ರಾ ನಿರ್ಮಾಣ ಆಗಿರತಕ್ಕಂಥಾದ್ದು ಎಷ್ಟು ಕಿಲೋಮೀಟರ್ ಆಗಿದೆ, ಮೊದಲು ಎಷ್ಟು ಇತ್ತು, ಅವರ ಕಾಲದಲ್ಲಿ ಏನಾಗಿದೆ, ಈ ಕಾಲದಲ್ಲಿ ಏನಾಗಿದೆ ಎಂಬುದನ್ನು ನೋಡಿದಾಗ ಈ ಮೂರು ವರ್ಷಗಳಲ್ಲಿ ಆಗಿರತಕ್ಕಂಥ ಗಣನೀಯ ಸಾಧನೆಯನ್ನು ಸ್ವಾಗತಿಸಲೇಬೇಕು ಹಾಗೂ ಮೆಚ್ಚಿಕೊಳ್ಳಬೇಕು. ರಾಜ್ಯದ ಅಭಿವೃದ್ಧಿಯಲ್ಲಿ ನೀರಾವರಿ ಯೋಜನೆಗೆ ತನ್ನ ಪಾಲನ್ನು ಸರ್ಕಾರ ಯಾವ ರೀತಿಯಾಗಿ ಕೊಡುತ್ತಿದೆ ಎನ್ನುವುದಕ್ಕೆ ಇದು ಒಂದು ಸಾಕ್ಷಿಯಾಗಿದೆ. ಇದರ ಜತೆಗೆ ಬಾಗಲಕೋಟೆಯ ಜ್ವಲಂತವಾಗಿರತಕ್ಕಂಥ ಒಂದು ಸಮಸ್ಯೆಯನ್ನು ಪ್ರಪ್ರಥಮವಾಗಿ ಶ್ರೀಮಾನ್ ಎಸ್. ಎಂ. ಕೃಷ್ಣ ಅವರ ಸರ್ಕಾರ ಬಗೆಹರಿಸಿ ಬಹಳ ವರ್ಷದ ಬೇಡಿಕೆಯನ್ನು ಪೂರೈಸಿ ಇವತ್ತು ಸರ್ಕಾರದ ಹಿರಿಯ ಸಚಿವರುಗಳು ಕೂಡ ಸ್ವಂತ ಬಾಗಲಕೋಟೆಗೆ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಆಗಮಿಸಿ

618 ಕೋಟಿ ರೂಪಾಯಿಗಳನ್ನು ಈ ಯೋಜನೆಯ ಉತ್ತೇಜನಕ್ಕಾಗಿ, ಅದರ ಒಂದು ಬೆಳವಣಿಗೆಗಾಗಿ ಕೊಟ್ಟಿರತಕ್ಕಂಥಾದ್ದನ್ನು ನೋಡಿದರೆ ಇದಕ್ಕಿಂತ ಬೇರೆ ಯಾವ ಕೆಲಸ ಮಾಡುವುದಕ್ಕೆ ಸಾಧ್ಯವೆಂದು ತಾವೇ ಯೋಚನೆ ಮಾಡಬೇಕಾಗುತ್ತದೆ. ಹಂತಹಂತವಾಗಿ ಬಾಗಲ ಕೋಟೆ ನಗರವನ್ನು ಮುಳುಗಡೆ ಪ್ರದೇಶದಲ್ಲಿ ಉಳಿಸಿಕೊಂಡು ಬಳಸಿಕೊಳ್ಳಲಿಕ್ಕೆ ಬೇಕಾಗಿರತ್ಕಂಥ ಪ್ಯಾಕೇಜ್‌ಗೆ 618 ಕೋಟಿ ರೂಪಾಯಿಗಳನ್ನು ಇವತ್ತು ಶ್ರೀ ಮಾನ್ ಎಸ್. ಎಂ. ಕೃಷ್ಣ ಅವರ ಸರ್ಕಾರ ಕೊಟ್ಟಿರುವುದನ್ನು ನೋಡಿದರೆ ಅಲ್ಲಿಯ ಜನತೆಯ ಬಗ್ಗೆ ಇರತಕ್ಕಂಥ ಜನಪರವಾಗಿ ಇರತಕ್ಕಂಥ ಕಾಳಜಿಯನ್ನು ಅದು ಎತ್ತಿ ತೋರಿಸುತ್ತದೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದನ್ನು ಪ್ರಸ್ತಾಪಿಸಿರತಕ್ಕಂಥ ಕಾರಣದಿಂದ ಆ ಭಾಗದ ಮಹಾಜನತೆಯ ಪರವಾಗಿ ನಾನು ಸರ್ಕಾರಕ್ಕೆ, ಒಬ್ಬ ಸಾಮಾನ್ಯವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಮತ್ತೊಂದು ಬದಲಾವಣೆಯಾಗಿದೆ, ಅದು ಏನೆಂದರೆ ಇವತ್ತು ಕೆರೆಗಳ ಹೂಳು ಎತ್ತುವಂತಹ ಕೆಲಸ ಸಣ್ಣ ನೀರಾವರಿ ಇಲಾಖೆಯ ಮೂಲಕ ಆಗಿರುವಂಥಾದ್ದು, ಸುಮಾರು ಇಪ್ಪತ್ತು- ಮೂವತ್ತು ನಲ್ವತ್ತು ವರ್ಷಗಳಿಂದ ಹೂಳು ಎತ್ತದೇ ಇರತಕ್ಕಂಥ ಕೆರೆಗಳು ಇವತ್ತು ಸಂಪೂರ್ಣವಾಗಿ ಹೊಲಗಳಾಗಿ ಬಿಟ್ಟಿವೆ, ನೀರಾವರಿಗೆ ಉಪಯೋಗಬೇಕೆಂದು ಉದ್ದೇಶವನ್ನು ಇಟ್ಟುಕೊಂಡು ವಿಶ್ವಬ್ಯಾಂಕಿನ ನೆರವಿನಿಂದ ಒಂದೊಂದು ತಾಲ್ಲೂಕಿನಲ್ಲಿ ಎರಡು-ಮೂರು ಕೆರೆಗಳನ್ನು ಪ್ರಮುಖವಾಗಿ ತೆಗೆದು ಕೊಂಡು ಹೂಳು ಎತ್ತುವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದನ್ನು ನೋಡಿದರೆ ಇವತ್ತು ಜಲ ಸಂಪನ್ಮೂಲವನ್ನು ಸಂಗ್ರಹಿಸುವಲ್ಲಿ ಈ ಕೆರೆಗಳನ್ನು ಉಪಯೋಗಿಸುವಲ್ಲಿ ಸರ್ಕಾರ ಯಾವ ಒಂದು ದಿಸೆಯಲ್ಲಿ ಹೆಜ್ಜೆ ಇಡುತ್ತಿದೆ ಎನ್ನತಕ್ಕಂಥಾದ್ದು ಕೂಡ ಇದರಿಂದ ವ್ಯಕ್ತವಾಗುತ್ತದೆ, ಇದರ ಜೊತೆಗೆ ಇನ್ನೊಂದು ಬದಲಾವಣೆ ನೀರಾವರಿ ಇಲಾಖೆಯಲ್ಲಿ ಆಗಿದೆ, ಅದು ನೀರು ಬಳಕೆದಾರರ ಸಹಕಾರ ಸಂಘಗಳ ರಚನೆ, ಇದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರಶಾಹಿಯ ಜೊತೆಗೆ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕಾಗಿ ಮಾಡಿರತಕ್ಕಂಥ ಒಂದು ವ್ಯವಸ್ಥೆ, ಇದು ಬಹಳ ಪರಿಣಾಮಕಾರಿಯಾಗಿ ಇವತ್ತು ಕೆಲಸ ಮಾಡುತ್ತಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ 473 ನೀರು ಬಳಕೆದಾರರ ಸಹಕಾರ ಸಂಘಗಳಲ್ಲಿ ಈಗಾಗಲೇ 372 ನೀರು ಬಳಕೆದಾರರ ಸಹಕಾರಿ ಸಂಘಗಳು ರಚನೆಯಾಗಿವೆ.

4.30ಪಿಎಂ

150 ನೀರಾವರಿ ಸಹಕಾರಿ ಸಂಘಗಳಿಗೆ ಈಗಾಗಲೇ ಅಧಿಕಾರ ಹಸ್ತಾಂತರ ಆಗಿದೆ, ಕಾವೇರಿ ಪ್ರದೇಶದಲ್ಲಿ 400 ನೀರಾವರಿ ಸಹಕಾರಿ ಸಂಘಗಳು ರಚನೆಯಾಗಿವೆ, ತುಂಗಭದ್ರಾ ಯಾಜನೆಯಲ್ಲಿ 135 ನೀರಾವರಿ ಸಹಕಾರ ಸಂಘಗಳು ರಚನೆಯಾಗಿವೆ, ಮಲಪ್ರಭಾ ಯೋಜನೆಯಲ್ಲಿ 250ಹ ನೀರಾವರಿ ಸಹಕಾರ ಸಂಘಗಳು ರಚನೆಯಾಗಿವೆ, ಇದರಲ್ಲಿ ಬದಲಾವಣೆ ಏನಾಗಿದೆ ಎನ್ನವುದನ್ನು ನಾನು ಕಣ್ಣಾರೆ ಕಂಡಿರತಕ್ಕಂಥಾದ್ದು ಈ ನೀರು ಬಳಕೆದಾರರ ಸಹಕಾರಿ ಸಂಘಗಳಿಗೆ ಅವರ ವ್ಯಾಪ್ತಿಯಲ್ಲಿ ಬರತಕ್ಕಂಥ ಕಾಮಗಾರಿಗಳನ್ನು ಹಸ್ತಾಂತರ ಮಾಡಿರತಕ್ಕಂಥಾದ್ದು, ಇದರ ಬದಲಾವಣೆ ಹೇಗೆ ಆಗಿದೆ? ಒಂದು ಕಾಲುವೆ ರಿಪೇರಿ ಕೆಲಸ ಉದಾಹರಣೆಗೆ, ಒಂದು ಕಿಲೋಮೀಟರ್ ಕಾಲುವೆ ರಿಪೇರಿ ಕೆಲಸವನ್ನು ನಮ್ಮ ಅಧಿಕಾರಿ ಸ್ನೇಹಿತರು ಯಾವ ಒಂದು ರಿಪೇರಿ ಕೆಲಸವನ್ನು ಒಂದು ಲಕ್ಷ ಇಪ್ಪತ್ತು ಸಾವಿರ ಮೂವತ್ತು ಸಾವಿರ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಿ ಕೊಡುತ್ತಿದ್ದರೋ ಅದೇ ಒಂದು ಕಿಲೋಮಿಟರ್ ಕಾಲುವೆಯ ನಿರ್ವಹಣೆಯನ್ನು ಸ್ವಚ್ಛಗೊಳಿಸುವುದನ್ನು ಆ ನೀರಾವರಿ ಬಳಕೆದಾರರ ಸಹಕಾರಿ ಸಂಘಗಳ 60-70 ರೂಪಾಯಿಗಳಲ್ಲಿ ಸಮರ್ಪಕವಾಗಿ

ಮಾಡಿರತಕ್ಕಂಥಾದ್ದು ನಮ್ಮ ಪ್ರದೇಶದಲ್ಲಿ ನಾವು ನೋಡುತ್ತಿದ್ದೇವೆ. ಇವತ್ತು ನಮ್ಮ ಹೊಲ ನಮ್ಮ ರಸ್ತೆಯನ್ನು ಮಲಪ್ರಭಾ ಕಾಡಾ ಯೋಜನೆಯಲ್ಲಿ 400 ಕಿಲೋಮಿಟರ್ ರಸ್ತೆ ನಿರ್ಮಾಣವಾಗಿದೆ, ಒಟ್ಟು 800 ಕಿಲೋಮಿಟರ್ ರಸ್ತೆ, ನಿರ್ಮಾಣ ಮಾಡತಕ್ಕಂಥಾ ಯೋಜನೆಯಲ್ಲಿ 400 ಕಿಲೋಮಿಟರ್ ರಸ್ತೆ ನೀರು ಬಳಕೆದಾರರ ಸಹಕಾರ ಸಂಘಗಳ ಸಹಭಾಗಿತ್ವದಲ್ಲಿ ಪೂರ್ಣಗೊಂಡಿರತಕ್ಕಂಥಾದ್ದು, ಇದರಿಂದ ಏನಾಗುತ್ತದೆ ಅಂದರೆ ಹೊಲಕ್ಕೆ ಹೋಗುವವರು ಅವರು, ಹೊಲ ಅವರದ್ದು, ಕೆಲಸ ಮಾಡುವವರು ಅವರು, ನನ್ನ ಹೊಲಕ್ಕೆ ಹೋಗುವಂಹ ರಸ್ತೆಯನ್ನು ನಾನು ಸಮರ್ಪಕವಾಗಿ ತಯಾರು ಮಾಡಬೇಕೆನ್ನುವುದು ಅವರ ಇಚ್ಛೆ , ನಾನೇ ಹೋಗತಕ್ಕಂಥ ರಸ್ತೆ, ನನ್ನ ಸಹಭಾಗಿತ್ವದಲ್ಲಿ ಮಾಡುವ ರಸ್ತೆ ಎನ್ನುವ ದೃಷ್ಟಿಯಿಂದ ಉತ್ತಮವಾದ ರಸ್ತೆ ನಿರ್ಮಾಣವನ್ನು ಎರಡು ಲಕ್ಷ ರೂ ಮೂರು ಲಕ್ಷ ರೂ ಆರು ಲಕ್ಷ ರೂನಲ್ಲಿ ಎಸ್ಟಿಮೇಟ್ ಮಾಡಿ ತಯಾರು ಮಾಡತಕ್ಕಂಥ್‌ದ್ದರಲ್ಲಿ ಅದರ ಅರ್ಧದಷ್ಟು ವೆಚ್ಚದಲ್ಲಿ ಉತ್ತಮವಾದ ರಸ್ತೆ ನಿರ್ಮಾಣವಾಗಿದೆ, ಜನ ಎದ್ದು ಬರುತ್ತಿದ್ದಾರೆ, ನೀರಿನ ಬಳಕೆ ಬಗ್ಗೆ ಕಲ್ಪನೆ ಮಾಡಿಕೊಳ್ಳುತ್ತಿದ್ದಾರೆ, ನೀರಿನ ಕಲ್ಪನೆ ಇಲ್ಲದೆ ಇರತಕ್ಕಂಥ ಪ್ರದೇಶದಲ್ಲಿ ಈ ನೀರು ಬಳಕೆದಾರರ ಸಹಕಾರ ಸಂಘಗಳ ಮೂಲಕ ಆ ದಿಕ್ಕಿನಲ್ಲಿ ರೈತರನ್ನು ಕರೆದುಕೊಂಡು ಹೋಗಿ ಈ ನೀರಿನ ಬಳಕೆ ಟೇಲ್‌ಎಂಡ್ ನಲ್ಲಿರತಕ್ಕಂಥವರಿಗೂ ಕೂಡ ನೀರು ಮುಟ್ಟಿಸತಕ್ಕಂಥ ವ್ಯವಸ್ಥೆ ಈ ನೀರು ಬಳಕೆದಾರರ ಸಹಕಾರ ಸಂಘದಿಂದ ನಡೆದಿದೆ, ಮಾನ್ಯ ಅಧ್ಯಕ್ಷರೇ ಕಾಲುವೆ ಪ್ರಾರಂಭದಲ್ಲಿ ಇದ್ದವರಿಗಷ್ಟೇ ನೀರು ಮೊದಲು ಸಿಗುತ್ತಿತ್ತು, ಬಲಗಾಲುವೆಗಳಲ್ಲಿ ಏನು ನೀರು ಬಿಟ್ಟ ತಕ್ಷಣ ಅಲ್ಲೇ 3-4 ಜನರಿಗಷ್ಟೇ ನೀರು ಸಿಗುತ್ತಿತ್ತು, ಕೆಳಗಡೆ ಇರುವವರಿಗೆ ನೀರೇ ಸಿಗುತ್ತಿರಲಿಲ್ಲವಾದ ಕಾರಣ ಮೇಲಿದ್ದವರಷ್ಟೇ ಬಳಸಿಕೊಳ್ಳುತ್ತಿದ್ದರು. ಸಹಕಾರಿ ಸಂಘಗಳನ್ನು ರಚನೆ ಮಾಡಿದ ಮೇಲೆ ಸರದಿ ಪ್ರಕಾರ ನೀರು ಬಿಡುವ ವ್ಯವಸ್ಥೆಯನ್ನು ತಾವು ತಾವೇ ಹಮ್ಮಿಕ್ಕೊಂಡಿದ್ದರಿಂದ ಕೊನೆಯಲ್ಲಿರತಕ್ಕಂಥ ರೈತನಿಗೂ ಕೂಡ ನೀರು ಮುಟ್ಟತಕ್ಕಂಥ ವ್ಯವಸ್ಥೆ ನೀರು ಬಳಕೆದಾರರ ಸಹಕಾರ ಸಂಘಗಳಿಂದ ಆಗಿರತಕ್ಕಂಥ ಒಂದು ಮಹಾ ಬದಲಾವಣೆ ಬದಲಾವಣೆ, ಸಮಾಜವಾದ, ಸಾಮಾಜಿಕವಾದಂಥ ನ್ಯಾಯ ಇಂತಹ ಒಂದು ಪ್ರಕ್ರಿಯೆಗಳಿಂದ ಮಾತ್ರ ಸಿಗುವುದಕ್ಕೆ ಸಾಧ್ಯ, ಇದು ಅಂತಹ ಒಂದು ಬದಲಾವಣೆಯನ್ನು ನೀರು ಬಳಕೆದಾರರ ಸಂಘದಿಂದ ಆಗಿದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಛೇರ್ಮನ್ : ಮಾನ್ಯ ನಂಜಯ್ಯನಮಠ್ ಅವರೇ ನಿಮಗೆ ಇನ್ನೂ ಎಷ್ಟು ಸಮಯ ಬೇಕು?

ಶ್ರೀ ಎಸ್.ಜಿ. ನಂಜಯ್ಯನ ಮಠ್ : ಇನ್ನು ಒಂದು ಅರ್ಧ ಗಂಟೆ ಬೇಕು.

ಛೇರ್ಮನ್ : ಹಾಗಾದರೆ ನೀವು ನಾಳೆ ಮುಂದುವರಿಸಿ, ಈಗ ಬರಗಾಲದ ಮೇಲಿನ ಚರ್ಚೆಯನ್ನು ನಿಯಮ 69 ರ ಅಡಿಯಲ್ಲಿ ತೆಗೆದುಕೊಳ್ಳೋಣ.

(ಮಾನ್ಯ ಉಪಾಧ್ಯಕ್ಷರು ಶ್ರೀ ಮನೋಹರ ಹೆಚ್ ತಹಸೀಲ್ದಾರ್‌ರವರು ಅಧ್ಯಕ್ಷ ಪೀಠವನ್ನು ಅಂಕರಿಸಿದರು)

6. ನಿಯಮ 69ರ ಮೇರೆಗೆ

ರಾಜ್ಯದಲ್ಲಿ ಉಂಟಾಗಿರುವ ಬರಗಾಲ ಮತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆ (ಮುಂದು)